ಶುಕ್ರವಾರ, ಜೂನ್ 28, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗು

ಮುಂಬೈನಲ್ಲಿ ನಡೆದ ಹಿಂದಿ ಚಲನಚಿತ್ರವೊಂದರ ಪ್ರಚಾರ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ಸೈಯಾಮಿ ಖೇರ್ ಅವರು ಕಾಣಿಸಿಕೊಂಡಿದ್ದು ಹೀಗೆ...



ಇಂದು ಸಂಸತ್ ಕಲಾಪದಲ್ಲಿ ಚರ್ಚೆಗೆ ಒತ್ತಾಯಿಸಲಿರುವ 'ಇಂಡಿಯಾ' ಕೂಟ

ನೀಟ್ ಅಕ್ರಮ: ಇಬ್ಬರನ್ನು ಬಂಧಿಸಿದ ಸಿಬಿಐ



ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಬಿಹಾರದ ಪಟ್ನಾದಲ್ಲಿ ಇಬ್ಬರನ್ನು ಬಂಧಿಸಿದೆ

ನವದೆಹಲಿ (ಪಿಟಿಐ): ನೀಟ್– ಯುಜಿ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ತನಿಖೆ ನಡೆಸುತ್ತಿರುವ ಸಿಬಿಐ, ಬಿಹಾರದ ಪಟ್ನಾದಲ್ಲಿ ಇಬ್ಬರನ್ನು ಬಂಧಿಸಿದೆ.

ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಂಡ ಬಳಿಕ ಸಿಬಿಐ ಮಾಡಿರುವ ಮೊದಲ ಬಂಧನ ಇದಾಗಿದೆ.

'ಮನೀಶ್ ಕುಮಾರ್ ಮತ್ತು ಅಶುತೋಷ್ ಕುಮಾರ್ ಬಂಧಿತ ಆರೋಪಿಗಳು. ಇವರಿಬ್ಬರೂ ಪರೀಕ್ಷೆಗೂ ಮುನ್ನ ಅಭ್ಯರ್ಥಿಗಳಿಗೆ ಹಾಸ್ಟೆಲ್ ಒಂದರಲ್ಲಿ ವಸತಿ ವ್ಯವಸ್ಥೆ ಮಾಡಿದ್ದರು. ಅಲ್ಲಿ, ಸೋರಿಕೆಯಾದ ಪ್ರಶ್ನೆ ಪತ್ರಿಕೆ ಮತ್ತು ಕೀ ಉತ್ತರಗಳನ್ನು ಅವರಿಗೆ ನೀಡಲಾಗಿತ್ತು' ಎಂದು ಅಧಿಕಾರಿಗಳು ಹೇಳಿದ್ದಾರೆ.

'ಇಬ್ಬರನ್ನೂ ಪಟ್ನಾದ ವಿಶೇಷ ನ್ಯಾಯಾಲಯದ ಮುಂದೆ ಹಾಜರು-ಪಡಿಸಲಾಗಿದ್ದು, ನ್ಯಾಯಾಧೀಶರು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ.

ವಿಚಾರಣೆಗಾಗಿ ಇಬ್ಬರನ್ನೂ ಕಸ್ಟಡಿಗೆ ನೀಡುವಂತೆ ನ್ಯಾಯಾಲಯಕ್ಕೆ ಸಿಬಿಐ ಮನವಿ ಮಾಡಲಿದೆ.

'ಅಶುತೋಷ್ ಕುಮಾರ್ ಅವರು 'ಲರ್ನ್ ಬಾಲಕರ ಹಾಸ್ಟೆಲ್ ಮತ್ತು ಪ್ಲೇ ಸ್ಕೂಲ್' ಅನ್ನು ಬಾಡಿಗೆಗೆ ಪಡೆದಿದ್ದರು. ಬಿಹಾರ ಪೊಲೀಸ್ ಇಲಾಖೆಯ ಆರ್ಥಿಕ ಅಪರಾಧಗಳ ಘಟಕವು ಈ ಸ್ಥಳದಿಂದ ಅರ್ಧ ಸುಟ್ಟು ಹೋಗಿದ್ದ ನೀಟ್ ಪ್ರಶ್ನೆ-ಪತ್ರಿಕೆಗಳನ್ನು ವಶಪಡಿಸಿಕೊಂಡಿತ್ತು' ಎಂದು ಅಧಿಕಾರಿಗಳು ಹೇಳಿದ್ದಾರೆ.

ನೀಟ್ ಅಭ್ಯರ್ಥಿಗಳಿಗೆ ಪ್ರಶ್ನೆ ಪತ್ರಿಕೆಗಳನ್ನು ನೀಡಲು ಈ ಹಾಸ್ಟೆಲ್ ಆವರಣವನ್ನು ಬಳಸಲಾಗುತ್ತಿದೆ ಎಂಬುದು ಅಶುತೋಷ್ ಕುಮಾರ್ ಅವರಿಗೆ ತಿಳಿದಿತ್ತು ಎಂಬುದನ್ನು ಸಿಬಿಐ ಪತ್ತೆ ಮಾಡಿದೆ.

'ಮತ್ತೊಬ್ಬ ಆರೋಪಿ ಮನೀಶ್ ಕುಮಾರ್ ಅವರು ಪ್ರಶ್ನೆ ಪತ್ರಿಕೆಗಳಿಗೆ ಹಣಕೊಡಲು ಸಿದ್ಧರಿದ್ದ ಅಭ್ಯರ್ಥಿಗಳೊಂದಿಗೆ 'ವ್ಯವಹಾರ' ಕುದುರಿಸಿದ್ದರು. ನಂತರ ಅವರು ಅಭ್ಯ-ರ್ಥಿಗಳನ್ನು ಹಾಸ್ಟೆಲ್‌ಗೆ ಕರೆದುಕೊಂಡು ಬಂದಿದ್ದರು. ಅಲ್ಲಿ ಪ್ರಶ್ನೆ ಪತ್ರಿಕೆ ಮತ್ತು ಕೀ ಉತ್ತರಗಳನ್ನು ನೀಡಲಾಗಿತ್ತು. ಅಭ್ಯರ್ಥಿಗಳು ಹಾಸ್ಟೆಲ್‌ನಲ್ಲೇ ಉಳಿದುಕೊಂಡು ಮೇ 5ರಂದು ನಡೆದ ಪರೀಕ್ಷೆಗೆ ಸಿದ್ಧತೆ ಮಾಡಿಕೊಂಡಿದ್ದರು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರು ಎಫ್‌ಐಆರ್: ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಸಂಬಂಧ ಆರು ಎಫ್‌ಐಆರ್‌ಗಳನ್ನು ಸಿಬಿಐದಾಖಲಿಸಿದೆ.

ಚರ್ಚೆಗೆ ಒತ್ತಾಯಿಸಲಿರುವ 'ಇಂಡಿಯಾ': ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ ಶುಕ್ರವಾರ ಎಲ್ಲ ಕಲಾಪಗಳನ್ನು ಬದಿಗೊತ್ತಿ, ನೀಟ್ ಗೊಂದಲದ ಬಗ್ಗೆ ಚರ್ಚೆ ಕೈಗೆತ್ತಿಕೊಳ್ಳಬೇಕು ಎಂದು ಇಂಡಿಯಾ ಕೂಟ ಒತ್ತಾಯಿಸಲಿದೆ. ರಾಷ್ಟ್ರಪತಿ ಭಾಷಣದ ಮೇಲಿನ ಚರ್ಚೆಯನ್ನು ಕೈಬಿಟ್ಟು ನೀಟ್ ಅಕ್ರಮದ ಬಗ್ಗೆ ಚರ್ಚೆ ನಡೆಸಬೇಕು ಎಂದು ಎರಡೂ ಸದನಗಳಲ್ಲಿ ನೋಟಿಸ್ ನೀಡಲು 'ಇಂಡಿಯಾ' ಕೂಟದ ಪಕ್ಷಗಳು ಸಿದ್ಧತೆ ನಡೆಸಿವೆ.

ಲೋಕಸಭೆ ಸ್ಪೀಕರ್ ಮತ್ತು ರಾಜ್ಯಸಭೆ ಸಭಾಪತಿಯವರು ಈ ಬೇಡಿಕೆಯನ್ನು ಒಪ್ಪುವ ಸಾಧ್ಯತೆ ಕಡಿಮೆ. ಹೀಗಾಗಿ ಕಲಾಪಕ್ಕೆ ಅಡಚಣೆಯಾಗುವ ನಿರೀಕ್ಷೆ ಇದೆ.

ಒಎಂಆರ್ ಶೀಟ್: ಎನ್‌ಟಿಎಗೆ 'ಸುಪ್ರೀಂ' ನೋಟಿಸ್

ನೀಟ್ ಯುಜಿ–2024 ಪರೀಕ್ಷೆ ಬರೆದ ಅಭ್ಯರ್ಥಿಗಳಿಗೆ ನೀಡಿದ ಒಎಂಆರ್ ಶೀಟ್‌ಗಳ ಕುರಿತಾಗಿ ದೂರು ನೀಡಲು ಸಮಯದ ಮಿತಿ ನಿಗದಿಪಡಿಸಲಾಗಿತ್ತೇ ಎಂಬುದನ್ನು ತಿಳಿಸುವಂತೆ ಸುಪ್ರೀಂ ಕೋರ್ಟ್ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಗೆ ಗುರುವಾರ ಸೂಚಿಸಿದೆ.

ಒಂದು ಖಾಸಗಿ ಕೋಚಿಂಗ್ ಸೆಂಟರ್ ಮತ್ತು ಕೆಲವು ನೀಟ್ ಅಭ್ಯರ್ಥಿಗಳು ಸಲ್ಲಿಸಿರುವ ಹೊಸ ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಂಡ ನ್ಯಾಯಮೂರ್ತಿಗಳಾದ ಮನೋಜ್ ಮಿಶ್ರಾ ಮತ್ತು ಎಸ್‌ವಿಎನ್ ಭಟ್ಟಿ ಅವರನ್ನೊಳಗೊಂಡ ರಜಾ ಕಾಲದ ಪೀಠವು ಈ ಅರ್ಜಿಯನ್ನು ವಿಚಾರಣೆಗೆ ಬಾಕಿ ಇರುವ ನೀಟ್‌ಗೆ ಸಂಬಂಧಿಸಿದ ಅರ್ಜಿಗಳೊಂದಿಗೆ ಸೇರಿಸಿತು. ಬಳಿಕ ವಿಚಾರಣೆಯನ್ನು ಜುಲೈ 8ಕ್ಕೆ ನಿಗದಿಪಡಿಸಿತು.

ಕೋಚಿಂಗ್ ಕೇಂದ್ರ ಮತ್ತು ಕೆಲವು ಅಭ್ಯರ್ಥಿಗಳ ಪರವಾಗಿ ಹಾಜರಾದ ಹಿರಿಯ ವಕೀಲ ಆರ್.ಬಸಂತ್, 'ಪರೀಕ್ಷೆಗೆ ಹಾಜರಾದ ಕೆಲವು ವಿದ್ಯಾರ್ಥಿಗಳಿಗೆ ಒಎಂಆರ್ ಶೀಟ್‌ಗಳು ಸಿಕ್ಕಿರಲಿಲ್ಲ' ಎಂದು ನ್ಯಾಯಪೀಠದ ಗಮನಕ್ಕೆ ತಂದರು.

ಎನ್‌ಟಿಎ ಪರವಾಗಿ ಹಾಜರಾದ ವಕೀಲರು, 'ಒಎಂಆರ್ ಶೀಟ್‌ಗಳನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ ಮತ್ತು ಅಭ್ಯರ್ಥಿಗಳಿಗೂ ನೀಡಲಾಗಿದೆ' ಎಂದು ಹೇಳಿದರು.

ಎನ್‌ಟಿಎ ಅಭಿಪ್ರಾಯ ಕೇಳಿದ ಹೈಕೋರ್ಟ್

ಈ ಬಾರಿಯ 'ನೀಟ್'ನಲ್ಲಿ ಪಠ್ಯದಲ್ಲಿ ಇಲ್ಲದ ಪ್ರಶ್ನೆ ಕೇಳಲಾಗಿದೆ ಎಂದು ಆರೋಪಿಸಿ ಅಭ್ಯರ್ಥಿಯೊಬ್ಬರು ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ದೆಹಲಿ ಹೈಕೋರ್ಟ್, ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯ (ಎನ್‌ಟಿಎ) ಅಭಿಪ್ರಾಯ ಕೇಳಿದೆ.

ಭೌತವಿಜ್ಞಾನಕ್ಕೆ ಸಂಬಂಧಿಸಿದ ಪ್ರಶ್ನೆಪತ್ರಿಕೆಯಲ್ಲಿ ಒಂದು ಪ್ರಶ್ನೆ 'ರೇಡಿಯೊ ಆ್ಯಕ್ಟಿವಿಟಿ' ವಿಷಯವನ್ನು ಆಧಾರವಾಗಿಟ್ಟುಕೊಂಡು ಕೇಳಲಾಗಿತ್ತು. ಈ ವರ್ಷದ ನೀಟ್‌ಗೆ ಈ ವಿಷಯ ಪಠ್ಯದ ಭಾಗವಾಗಿರಲಿಲ್ಲ ಎಂದು ಅರ್ಜಿದಾರರು ಹೇಳಿದ್ದಾರೆ.

ಮತ್ತೊಂದು ಪ್ರಶ್ನೆಯಲ್ಲೂ ತಪ್ಪು ಕಾಣಿಸಿಕೊಂಡಿದ್ದು, 'ತಪ್ಪಾದ ಆಯ್ಕೆ'ಯನ್ನು ಸರಿ ಉತ್ತರ ಎಂದು ಎನ್‌ಟಿಎ ಘೋಷಿಸಿದೆ ಎಂದು ಅವರು ದೂರಿದ್ದಾರೆ.

ಅರ್ಜಿಯ ವಿಚಾರಣೆ ನಡೆಸಿದ ರಜಾ ಕಾಲದ ಪೀಠದ ನ್ಯಾಯಮೂರ್ತಿ ಧರ್ಮೇಶ್ ಶರ್ಮ ಅವರು ಈ ಬಗ್ಗೆ ಪ್ರತಿಕ್ರಿಯಿಸಲು ಕೇಂದ್ರ ಸರ್ಕಾರ, ಎನ್‌ಟಿಎ ಮತ್ತು ರಾಷ್ಟ್ರೀಯ ವೈದ್ಯಕೀಯ ಆಯೋಗವನ್ನು ಪ್ರತಿನಿಧಿಸುವ ವಕೀಲರಿಗೆ ಎರಡು ವಾರಗಳ ಕಾಲಾವಕಾಶ ನೀಡಿದರು.

ಪ್ರಶ್ನೆಪತ್ರಿಕೆ ಸೋರಿಕೆ: ಶಾಸಕನ ವಿಡಿಯೊ ಬಿಡುಗಡೆ

ಲಖನೌ: ಯುಜಿ– ನೀಟ್, ಯುಜಿಸಿ– ನೆಟ್ ಪರೀಕ್ಷೆಗಳ ಪ್ರಶ್ನೆಪತ್ರಿಕೆ ಸೋರಿಕೆ ವಿವಾದಗಳ ಬೆನ್ನಲ್ಲೇ, ಉತ್ತರ ಪ್ರದೇಶದ ಶಾಸಕರೊಬ್ಬರು ಪ್ರಶ್ನೆಪತ್ರಿಕೆಗಳ ಸೋರಿಕೆ ಮತ್ತು ವಿವಿಧ ರಾಜ್ಯಗಳಲ್ಲಿನ ಸರ್ಕಾರಿ ಉದ್ಯೋಗಗಳ ನೇಮಕಾತಿಗಾಗಿ ಅಭ್ಯರ್ಥಿಗಳಿಂದ ಹಣ ಪಡೆದುಕೊಂಡಿರು-ವುದಾಗಿ ಹೇಳಿರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹರಿದಾಡಿದೆ.

ಉತ್ತರ ಪ್ರದೇಶದಲ್ಲಿನ ಬಿಜೆಪಿ ಮೈತ್ರಿಕೂಟದ ಪಾಲುದಾರ ಪಕ್ಷವಾದ ಸುಹೆಲ್‌ದೇವ್ ಭಾರತೀಯ ಸಮಾಜ ಪಕ್ಷದ (ಎಸ್‌ಬಿಎಸ್‌ಪಿ) ಶಾಸಕ ಬೇಡಿ ರಾಮ್ ಅವರು ಈ ಕುರಿತು ಹೇಳಿರುವುದು ವಿಡಿಯೊದಲ್ಲಿ ದಾಖಲಾಗಿದೆ. 'ಹಲವು ಅಭ್ಯರ್ಥಿಗಳು ನನಗೆ ಹಣ ಪಾವತಿಸಿ ಉದ್ಯೋಗ ಗಿಟ್ಟಿಸಿಕೊಂಡಿದ್ದಾರೆ' ಎಂದೂ ಅವರು ಹೇಳಿದ್ದಾರೆ.

ಬೇಡಿ ರಾಮ್ ಅವರು ಘಾಜಿಪುರ ಜಿಲ್ಲೆಯ ಜಖನಿಯ ವಿಧಾನಸಭಾ ಕ್ಷೇತ್ರದ ಶಾಸಕರಾಗಿದ್ದು, ಎಸ್‌ಬಿಎಸ್‌ಪಿ ಅಧ್ಯಕ್ಷ ಮತ್ತು ಉತ್ತರ ಪ್ರದೇಶದ ಸಚಿವರಾದ ಓಂ ಪ್ರಕಾಶ್ ರಾಜ್‌ಭರ್ ಅವರ ನಿಕಟವರ್ತಿ.

ಹಣ ಪಾವತಿಸಿದರೂ ಸರ್ಕಾರಿ ಉದ್ಯೋಗ ದೊರೆಯದ ಯುವಕನೊಬ್ಬ, ರಾಮ್ ಅವರನ್ನು ಸಂಪರ್ಕಿಸಿ ತನ್ನ ಹಣವನ್ನು ಹಿಂದಿರುಗಿಸುವಂತೆ ಕೇಳುವಾಗ, ಈ ವಿಡಿಯೊ ಮಾಡಿಕೊಂಡಿದ್ದಾನೆ ಎನ್ನಲಾಗಿದೆ.

ವಿದ್ಯಾರ್ಥಿಗಳಿಂದ ಅನಿರ್ದಿಷ್ಟಾವಧಿ ಧರಣಿ

ನವದೆಹಲಿ (ಪಿಟಿಐ): ನೀಟ್ ಯುಜಿ, ಪಿಜಿ ಮತ್ತು ಯುಜಿಸಿ ನೆಟ್‌ನಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳನ್ನು ಖಂಡಿಸಿ 'ಎನ್‌ಟಿಎ ವಿರುದ್ಧ ಭಾರತ' ಎಂಬ ಹೆಸರಿನಡಿ ವಿವಿಧ ವಿದ್ಯಾರ್ಥಿ ಸಂಘಟನೆಗಳು ಎರಡನೇ ದಿನವಾದ ಗುರುವಾರವೂ ಇಲ್ಲಿನ ಜಂತರ್ ಮಂತರ್‌ನಲ್ಲಿ ಅನಿರ್ದಿಷ್ಟಾವಧಿ ಧರಣಿಯನ್ನು ಮುಂದುವರಿಸಿದವು.

ಕಂಜರಗಳು, ಘೋಷಣಾ ಫಲಕಗಳು, ಬ್ಯಾನರ್‌ಗಳನ್ನು ಹಿಡಿದಿದ್ದ ನೂರಾರು ಸಂಖ್ಯೆಯ ವಿದ್ಯಾರ್ಥಿಗಳು, 'ನೀಟ್ ಅಭ್ಯರ್ಥಿಗಳಿಗೆ ನ್ಯಾಯ ಸಿಗಲಿ', ಎನ್‌ಟಿಎ ವೈಫಲ್ಯದಿಂದಾಗಿ ನಮ್ಮ ಭವಿಷ್ಯ ಅಪಾಯದಲ್ಲಿದೆ' ಮತ್ತು ಎನ್‌ಟಿಎಯ ವಿಸರ್ಜನೆಯೇ ಪ್ರಶ್ನೆ ಪತ್ರಿಕೆ ಸೋರಿಕೆ ತಡೆಗೆ ಇರುವ ಪರಿಹಾರ' ಎಂಬ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಯುವ ಕಾಂಗ್ರೆಸ್ ಪ್ರತಿಭಟನೆ: ನವದೆಹಲಿ (ಪಿಟಿಐ): ನೀಟ್ ಯುಜಿ ಅಕ್ರಮ ಮತ್ತು ಅಗ್ನಿವೀರ್ ಯೋಜನೆಯ ವಿರುದ್ಧ ಭಾರತೀಯ ಯುವ ಕಾಂಗ್ರೆಸ್ ಕಾರ್ಯಕರ್ತರು ಗುರುವಾರ ದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಿದರು.

ಎನ್‌ಎಸ್‌ಯುಐ ಪ್ರತಿಭಟನೆ: ನವದೆಹಲಿ (ಪಿಟಿಐ): ನೀಟ್–ಯುಜಿ ಅಕ್ರಮದ ವಿರುದ್ಧ ಹೋರಾಟ ನಡೆಸುತ್ತಿರುವ ಕಾಂಗ್ರೆಸ್‌ನ ವಿದ್ಯಾರ್ಥಿ ಘಟಕ ಎನ್‌ಎಸ್‌ಯುಐ ಸದಸ್ಯರು ಎನ್‌ಟಿಎ ಕಚೇರಿಗೆ ನುಗ್ಗಿ 'ಎನ್‌ಟಿಎ ಮುಚ್ಚಿರಿ' ಘೋಷಣೆ ಕೂಗಿದ್ದಾರೆ.

ಸುದ್ದಿ 2 ನಿಮಿಷ

ಮೂವರು ಅಭ್ಯರ್ಥಿಗಳ ಹೇಳಿಕೆ ದಾಖಲಿಸಿಕೊಂಡ ಸಿಬಿಐ

ಗೋಧ್ರಾ(ಗುಜರಾತ್)(ಪಿಟಿಐ): 'ನೀಟ್–ಯುಜಿ'ಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಕುರಿತು ನಡೆಸುತ್ತಿರುವ ತನಿಖೆಯನ್ನು ಚುರುಕುಗೊಳಿಸಿರುವ ಸಿಬಿಐ, ವೈದ್ಯಕೀಯ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ತಮಗೆ ನೆರವು ನೀಡುವುದಕ್ಕಾಗಿ ಆರೋಪಿಯೊಬ್ಬನಿಗೆ ಹಣ ನೀಡಿದ ಆರೋಪ ಎದುರಿಸುತ್ತಿರುವ ಮೂವರು ಅಭ್ಯರ್ಥಿಗಳ ಹೇಳಿಕೆಗಳನ್ನು ಗುರುವಾರ ದಾಖಲಿಸಿಕೊಂಡಿದೆ.

ಈ ಮೂವರು ಅಭ್ಯರ್ಥಿಗಳು ಮತ್ತು ಅವರ ಪಾಲಕರನ್ನಲ್ಲದೇ, ಗೋಧ್ರಾದಲ್ಲಿರುವ ಜಯ ಜಲರಾಮ್ ಸ್ಕೂಲ್ ಮಾಲೀಕ ದೀಕ್ಷಿತ್ ಪಟೇಲ್ ಎಂಬುವವರನ್ನು ಸಹ ಸಿಬಿಐ ಅಧಿಕಾರಿಗಳು ವಿಚಾರಣೆಗೆ ಒಳಪಡಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ದೀಕ್ಷಿತ್ ಒಡೆತನದ ಈ ಶಾಲೆ ನೀಟ್–ಯುಜಿ ಪರೀಕ್ಷಾ ಕೇಂದ್ರವೂ ಆಗಿತ್ತು.

ಪರೀಕ್ಷಾ ಅಕ್ರಮಗಳ ಕುರಿತು ನಡೆಸುತ್ತಿರುವ ತನಿಖೆ ಭಾಗವಾಗಿ, ಸಿಬಿಐ ಅಧಿಕಾರಿಗಳು ಕಳೆದ ನಾಲ್ಕು ದಿನಗಳಿಂದ ಗುಜರಾತ್‌ನಲ್ಲಿ ಠಿಕಾಣಿ ಹೂಡಿದ್ದಾರೆ. ಗುಜರಾತ್‌ನ ಖೇಡಾ ಮತ್ತು ಪಂಚಮಹಲ್ ಜಿಲ್ಲೆಗಳಲ್ಲಿರುವ ಎರಡು ಖಾಸಗಿ ಶಾಲೆಗಳಿಗೆ ಸಿಬಿಐ ಅಧಿಕಾರಿಗಳು ಬುಧವಾರ ಭೇಟಿ ನೀಡಿದ್ದರು.

ಖೇಡಾ ಜಿಲ್ಲೆಯಲ್ಲಿರುವ ಜಲರಾಮ್ ಇಂಟರ್‌ನ್ಯಾಷನಲ್ ಸ್ಕೂಲ್ ಹಾಗೂ ಪಂಚಮಹಲ್ ಜಿಲ್ಲೆಯ ಗೋಧ್ರಾದಲ್ಲಿರುವ ಜಯ ಜಲರಾಮ್ ಸ್ಕೂಲ್‌ಗಳು ದೀಕ್ಷಿತ್ ಪಟೇಲ್ ಒಡೆತನದಲ್ಲಿವೆ.

ಕೋಟಾ: ನೀಟ್‌ಗೆ ಸಿದ್ಧತೆ ನಡೆಸುತ್ತಿದ್ದ ವಿದ್ಯಾರ್ಥಿ ಆತ್ಮಹತ್ಯೆ

ಕೋಟಾ (ಪಿಟಿಐ): ವೈದ್ಯಕೀಯ ಕೋರ್ಸ್ ಸೇರುವ ಬಯಕೆ ಹೊಂದಿದ್ದ 17 ವರ್ಷ ವಯಸ್ಸಿನ ವಿದ್ಯಾರ್ಥಿ ಹೃಷಿತ್ ಕುಮಾರ್ ಅಗರ್ವಾಲ್ ಶವ ಅವರು ಬಾಡಿಗೆಗೆ ಇದ್ದ ಕಟ್ಟಡದಲ್ಲಿ ಸೀಲಿಂಗ್‌ಗ ಫ್ಯಾನ್‌ಗೆ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಪತ್ತೆಯಾಗಿದೆ. ಇದು ಆತ್ಮಹತ್ಯೆ ಎಂದು ಪೊಲೀಸರು ಶಂಕಿಸಿದ್ದಾರೆ.

ಜನವರಿ ತಿಂಗಳ ನಂತರದಲ್ಲಿ, ಕೋಚಿಂಗ್ ಪಡೆಯುತ್ತಿದ್ದ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡ 12ನೆಯ ಪ್ರಕರಣ ಇದು. 2023ರಲ್ಲಿ ಕೋಟಾದಲ್ಲಿ ಒಟ್ಟು 26 ಮಂದಿ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದರು.

ಹೃಷಿತ್ ಅವರು 12ನೆಯ ತರಗತಿಯ ವಿದ್ಯಾರ್ಥಿ. ಅವರು ಇಲ್ಲಿನ ಕೋಚಿಂಗ್ ಕೇಂದ್ರವೊಂದರಲ್ಲಿ ನೀಟ್ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿದ್ದರು ಎಂದು ಪೊಲೀಸರು ಹೇಳಿದ್ದಾರೆ.

ಸಂಸತ್ತಿನ ಜಂಟಿ ಅಧಿವೇಶನ ಉದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಷಣ

ಪ್ರಶ್ನೆಪತ್ರಿಕೆ ಸೋರಿಕೆ: ಕ್ರಮಕ್ಕೆ ಸರ್ಕಾರ ಬದ್ಧ



ಸಂಸತ್ತಿನ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಲು ಬಂದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಗೌರವವಂದನೆ ಸ್ವೀಕರಿಸಿದರು. ಪ್ರಧಾನಿ ನರೇಂದ್ರ ಮೋದಿ ಹಾಗೂ ಉಪರಾಷ್ಟ್ರಪತಿ ಜಗದೀಪ್ ಧನಕರ್ ಇದ್ದರು —ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆಯಾಗುವುದನ್ನು ಖಚಿತಪಡಿಸಿಕೊಳ್ಳಲು ಸರ್ಕಾರವು ಸಂಪೂರ್ಣವಾಗಿ ಬದ್ಧವಾಗಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಗುರುವಾರ ಹೇಳಿದರು.

ಸಂಸತ್ತಿನ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಿದ ಅವರು, ಪರೀಕ್ಷೆಗೆ ಸಂಬಂಧಿಸಿದ ಎಲ್ಲ ಅಂಶಗಳು ಮತ್ತು ಪರೀಕ್ಷೆಗಳನ್ನು ಆಯೋಜಿಸುವ ಸಂಸ್ಥೆಗಳ ಕಾರ್ಯನಿರ್ವಹಣೆ-ಯಲ್ಲಿ ಸಮಗ್ರ ಸುಧಾರಣೆ ತರುವ ನಿಟ್ಟಿನಲ್ಲಿ ಸರ್ಕಾರ ಕಾರ್ಯೋನ್ಮುಖವಾಗಿದೆ ಎಂದು ತಿಳಿಸಿದರು.

ಸ್ಪರ್ಧಾತ್ಮಕ ಪರೀಕ್ಷೆಗಳೇ ಇರಲಿ ಅಥವಾ ಸರ್ಕಾರದ ವಿವಿಧ ಹುದ್ದೆಗಳ ನೇಮಕಾತಿಗೆ ನಡೆಯುವ ಪರೀಕ್ಷೆಗಳೇ ಆಗಿರಲಿ, ಪರೀಕ್ಷಾ ಪ್ರಕ್ರಿಯೆಯಲ್ಲಿ ಸಂಪೂರ್ಣ ಪಾರದರ್ಶಕತೆ ಅಗತ್ಯವಿದೆ ಎಂದು ಪ್ರತಿಪಾದಿಸಿದರು. ಶಿಕ್ಷಣ ಕ್ಷೇತ್ರದ ಸುಧಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳನ್ನು ರಾಷ್ಟ್ರಪತಿಯವರು ಪ್ರಸ್ತಾಪಿಸುತ್ತಿದ್ದಂತೆಯೇ ವಿರೋಧ ಪಕ್ಷಗಳ ಕೆಲವು ಸದಸ್ಯರು, 'ನೀಟ್', 'ನೀಟ್' ಎಂದು ಕೂಗಿದರು.

'ಪರೀಕ್ಷೆ ನಡೆಸುವ ಪ್ರಕ್ರಿಯೆಗೆ ಯಾವುದೇ ಅಡಚಣೆ ಉಂಟಾಗಬಾರದು. ಪರೀಕ್ಷೆಯಲ್ಲಿ ಪಾರದರ್ಶಕತೆ ಕಾಪಾಡುವುದು ಅತ್ಯಗತ್ಯ. ಈಚೆಗಿನ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಲು ಸರ್ಕಾರ ಬದ್ಧವಾಗಿದೆ. ಈ ಹಿಂದೆಯೂ ಕೆಲವು ರಾಜ್ಯಗಳಲ್ಲಿ ಪ್ರಶ್ನೆ-ಪತ್ರಿಕೆ ಸೋರಿಕೆ ಘಟನೆಗಳು ನಡೆದಿವೆ. ಆದ್ದರಿಂದ ಈ ವಿಚಾರದಲ್ಲಿ ನಾವು ರಾಜಕೀಯವನ್ನು ಮೀರಿ ರಾಷ್ಟ್ರಮಟ್ಟ-ದಲ್ಲಿ ಬಲವಾದ ಹೆಜ್ಜೆಗಳನ್ನಿಡುವುದು ಮುಖ್ಯ' ಎಂದರು.

ತುರ್ತು ಪರಿಸ್ಥಿತಿ 'ಕರಾಳ ಅಧ್ಯಾಯ': 'ಸಂವಿಧಾನ ಜಾರಿಗೆ ಬಂದ ನಂತರವೂ ಸಂವಿಧಾನದ ಮೇಲೆ ಹಲವಾರು ದಾಳಿಗಳು ನಡೆದಿವೆ. 1975ರಲ್ಲಿ ತುರ್ತು ಪರಿಸ್ಥಿತಿ ಹೇರಿದ್ದು ಸಂವಿಧಾನದ ಮೇಲೆ ನಡೆದ ದಾಳಿಯ ಅತಿದೊಡ್ಡ ಮತ್ತು ಕರಾಳ ಅಧ್ಯಾಯವಾಗಿದೆ. ಆದರೆ, ಅಂತಹ ಅಸಾಂವಿಧಾನಿಕ ಶಕ್ತಿಗಳ ವಿರುದ್ಧ ದೇಶವು ಗೆದ್ದುಬಂದಿದೆ ಎಂದು ಹೇಳಿದರು.

ಯುಸಿಸಿ ಪ್ರಸ್ತಾಪ ಇಲ್ಲ: ಬುಲೆಟ್ ರೈಲು ಯೋಜನೆ, ಹಿರಿಯ ನಾಗರಿಕರ ಆರೋಗ್ಯ ವಿಮೆ ಸೇರಿದಂತೆ ಬಿಜೆಪಿ ಪ್ರಣಾಳಿಕೆಯಲ್ಲಿದ್ದ ಕೆಲವು ಅಂಶಗಳನ್ನು ರಾಷ್ಟ್ರಪತಿಯವರು ತಮ್ಮ ಭಾಷಣದಲ್ಲಿ ಹೇಳಿದರು. ಆದರೆ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಮತ್ತು 'ಒಂದು ದೇಶ, ಒಂದು ಚುನಾವಣೆ'ಯಂತಹ ಕೆಲವು ಮಹತ್ವದ ವಿಷಯಗಳನ್ನು ಅವರು ಪ್ರಸ್ತಾಪಿಸಲಿಲ್ಲ.

ಲೋಕಸಭಾ ಚುನಾವಣೆಯಲ್ಲಿ ದೇಶದ ಜನರು ತಿರಸ್ಕರಿಸಿದ ಸುಳ್ಳನ್ನು ರಾಷ್ಟ್ರಪತಿಗಳ ಮೂಲಕ ಓದಿಸಿ, ಚಪ್ಪಾಳೆ ಗಿಟ್ಟಿಸುವ ವ್ಯರ್ಥ ಪ್ರಯತ್ನವನ್ನು ಮೋದಿ ಮಾಡಿದ್ದಾರೆ

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ರಾಷ್ಟ್ರಪತಿ ಅವರು ಮಾಡಿರುವ ಭಾಷಣ ಸಮಗ್ರವಾಗಿದೆ ಮತ್ತು ಅಭಿವೃದ್ಧಿ ಹಾಗೂ ಉತ್ತಮ ಆಡಳಿತದ ಮಾರ್ಗಸೂಚಿಯನ್ನು ಪ್ರಸ್ತುತಪಡಿಸಿದೆ

ನರೇಂದ್ರ ಮೋದಿ, ಪ್ರಧಾನಿ

ಎಎಪಿ ಸದಸ್ಯರಿಂದ ಬಹಿಷ್ಕಾರ

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಬಂಧನವನ್ನು ಖಂಡಿಸಿ ಎಎಪಿ ಸಂಸದರು ರಾಷ್ಟ್ರಪತಿ ಭಾಷಣವನ್ನು ಬಹಿಷ್ಕರಿಸಿದರು. ಸಂಸತ್ತಿನ ಹೊರಗೆ ಪ್ರತಿಭಟನೆ ನಡೆಸಿದ ಎಎಪಿ ಸಂಸದರು, 'ಕೇಂದ್ರ ಸರ್ಕಾರವು ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡಿದೆ' ಎಂದು ಆರೋಪಿಸಿದರು.

'ಇ.ಡಿ, ಸಿಬಿಐ ಸಂಸ್ಥೆಗಳ ದುರ್ಬಳಕೆ ನಿಲ್ಲಿಸಿ', 'ಕೇಜ್ರಿವಾಲ್ ಅವರನ್ನು ಬಂಧಮುಕ್ತಗೊಳಿಸಿ', 'ಸರ್ವಾಧಿಕಾರ ನಡೆಯಲ್ಲ'– ಮುಂತಾದ ಬರಹಗಳನ್ನೊಳಗೊಂಡ ಭಿತ್ತಿಪತ್ರಗಳನ್ನು ಹಿಡಿದು ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದರು.

ಭಾಷಣದ ಪ್ರಮುಖ ಅಂಶಗಳು

- ಚುನಾವಣಾ ಆಯೋಗವು ವಿಶ್ವದ ಅತಿದೊಡ್ಡ ಚುನಾವಣಾ ಪ್ರಕ್ರಿಯೆಯನ್ನು ಯಶಸ್ವಿಯಾಗಿ ನಡೆಸಿದ್ದು, 64 ಕೋಟಿ ಮಂದಿ ಮತ ಚಲಾಯಿಸಿದ್ದಾರೆ. ಭಾರತದ ಜನರು ಸತತ ಮೂರನೇ ಬಾರಿಗೆ ಸ್ಥಿರ ಸರ್ಕಾರವನ್ನು ಆಯ್ಕೆ ಮಾಡಿದ್ದಾರೆ.
- ಇವಿಎಂ ಕಳೆದ ಒಂದು ದಶಕದ ಅವಧಿಯಲ್ಲಿ ಸುಪ್ರೀಂ ಕೋರ್ಟ್‌ನಿಂದ ಹಿಡಿದು ಜನತಾ ನ್ಯಾಯಾಲಯದವರೆಗೆ ಪ್ರತಿಯೊಂದು ಪರೀಕ್ಷೆಯನ್ನೂ ಗೆದ್ದು ಬಂದಿದೆ.
- ಕಳೆದ 10 ವರ್ಷಗಳಲ್ಲಿ 7 ಹೊಸ ಐಐಟಿ, 16 ಐಐಐಟಿ, 7 ಐಐಎಂ, 15 ಏಐಐಎಂ, 315 ವೈದ್ಯಕೀಯ ಕಾಲೇಜುಗಳು ಮತ್ತು 390 ವಿಶ್ವವಿದ್ಯಾಲಯಗಳನ್ನು ಆರಂಭಿಸಲಾಗಿದೆ
- ಮುಂದಿನ ತಿಂಗಳಲ್ಲಿ ಮಂಡನೆಯಾಗಲಿರುವ ಬಜೆಟ್‌ನಲ್ಲಿ ಪ್ರಮುಖ ಆರ್ಥಿಕ ಮತ್ತು ಸಾಮಾಜಿಕ ನಿರ್ಧಾರಗಳು ಮಾತ್ರವಲ್ಲದೆ, ಕೆಲವೊಂದು ಐತಿಹಾಸಿಕ ತೀರ್ಮಾನಗಳೂ ಇರಲಿವೆ.
- ಒಂದು ದಶಕದಲ್ಲಿ 25 ಕೋಟಿ ಮಂದಿ ಬಡತನದಿಂದ ಹೊರಗೆ ಬಂದಿದ್ದಾರೆ. ಪಿ.ಎಂ ಆವಾಸ್ ಯೋಜನೆಯಡಿ 4 ಕೋಟಿ ಮಹಿಳೆಯರಿಗೆ ಮನೆ ನಿರ್ಮಿಸಲಾಗಿದೆ.

ಸ್ಪೀಕರ್ ಮಾತಿಗೆ ರಾಹುಲ್ ಆಕ್ಷೇಪ

ನವದೆಹಲಿ: ಲೋಕಸಭಾ ಸ್ಪೀಕರ್ ಆಗಿ ಚುನಾಯಿತರಾದ ಬಳಿಕ ಓಂ ಬಿರ್ಲಾ ಅವರು ತುರ್ತು ಪರಿಸ್ಥಿತಿಗೆ ಸಂಬಂಧಿಸಿದಂತೆ ಬುಧವಾರ ನೀಡಿದ್ದ ಹೇಳಿಕೆಗೆ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಗುರುವಾರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ತುರ್ತುಪರಿಸ್ಥಿತಿಯು ಭಾರತದ ಇತಿಹಾಸದಲ್ಲಿ ಕರಾಳ ಅಧ್ಯಾಯ. ಅಂದಿನ ಪ್ರಧಾನಿ ಇಂದಿರಾಗಾಂಧಿ ಅವರು ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿ ಬಾಬಾ ಸಾಹೇಬರು ಬರೆದ ಸಂವಿಧಾನದ ಮೇಲೆ ದಾಳಿ ನಡೆಸಿದ್ದರು' ಎಂದು ಸ್ಪೀಕರ್ ಹೇಳಿದ್ದರು.

'ಭಾರತದ ಮೇಲೆ ಸರ್ವಾಧಿಕಾರತ್ವ ಹೇರಲಾಯಿತು. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಮರೆತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಲಾಯಿತು. ನಾಗರಿಕರ ಹಕ್ಕುಗಳನ್ನು ನಾಶಪಡಿಸಲಾಯಿತು. ವಿರೋಧ ಪಕ್ಷಗಳ ಅನೇಕ ನಾಯಕರನ್ನು ಜೈಲಿಗಟ್ಟಲಾಯಿತು' ಎಂದು ಅವರು ತಿಳಿಸಿದ್ದರು. ಈ ಮಾತುಗಳನ್ನು ವಿರೋಧಿಸಿ ಕಾಂಗ್ರೆಸ್ ಸಂಸದರು ಪ್ರತಿಭಟಿಸಿದ್ದರು.

ವಿರೋಧ ಪಕ್ಷದ ನಾಯಕರಾಗಿ ನೇಮಕಗೊಂಡ ರಾಹುಲ್, ಸ್ಪೀಕರ್ ಅವರನ್ನು ಭೇಟಿಯಾಗಿ ಈ ಕುರಿತು ಆಕ್ಷೇಪ ವ್ಯಕ್ತಪಡಿಸಿದ್ದಾರೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಅವರು ಸುದ್ದಿಗಾರರಿಗೆ ತಿಳಿಸಿದರು.

'ಬಿಜೆಪಿ ನಾಯಕ ಅಥವಾ ಪ್ರಧಾನಿ ಅವರು ಈ ಕುರಿತು ಉಲ್ಲೇಖ ಮಾಡಿದ್ದರೆ ಪರವಾಗಿರಲಿಲ್ಲ. ಆದರೆ ಸ್ಪೀಕರ್ ನಿಷ್ಪಕ್ಷಪಾತವಾಗಿ ಇರಬೇಕು ಎಂದು ರಾಹುಲ್ ಹೇಳಿದ್ದಾರೆ' ಎಂದು ಕಾಂಗ್ರೆಸ್ ನಾಯಕರೊಬ್ಬರು ತಿಳಿಸಿದರು.

ಜಂಟಿ ಸದನಗಳ ಸದಸ್ಯರನ್ನು ಉದ್ದೇಶಿಸಿ ಗುರುವಾರ ಭಾಷಣ ಮಾಡಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಹ ತುರ್ತು ಪರಿಸ್ಥಿತಿಯ ಬಗ್ಗೆ ಪ್ರಸ್ತಾಪಿಸಿ, 'ಅದು ಸಂವಿಧಾನದ ಮೇಲಿನ ನೇರ ದಾಳಿಯಾಗಿದ್ದು, ಕರಾಳ ಅಧ್ಯಾಯವಾಗಿದೆ. ಅದರಿಂದ ಇಡೀ ದೇಶವೇ ಆಕ್ರೋಶಗೊಂಡಿತ್ತು' ಎಂದು ಹೇಳಿದರು. ಈ ವೇಳೆ ರಾಹುಲ್ ಗಾಂಧಿ ಮತ್ತು ಸೋನಿಯಾ ಗಾಂಧಿ ಅವರು ಉಪಸ್ಥಿತರಿದ್ದರು.

'ಸೆಂಗೋಲ್ ಬದಲು ಸಂವಿಧಾನ ಸ್ಥಾಪಿಸಿ'

ಪ್ರಜಾವಾಣಿ ವಾರ್ತೆ



ನವದೆಹಲಿ: ಲೋಕಸಭೆಯಲ್ಲಿ ಅಳವಡಿಸಿರುವ 'ಸೆಂಗೋಲ್' ಅನ್ನು ತೆರವುಗೊಳಿಸಿ, ಆ ಜಾಗದಲ್ಲಿ ಭಾರತೀಯ ಸಂವಿಧಾನವನ್ನು ಸ್ಥಾಪಿಸಬೇಕು ಎಂದು ಸಮಾಜವಾದಿ ಪಕ್ಷದ ಸಂಸದ ಆರ್.ಕೆ.ಚೌಧರಿ ಗುರುವಾರ ಹೇಳಿದ್ದಾರೆ.

'ರಾಜಪ್ರಭುತ್ವ ಕೊನೆಗೊಂಡ ಬಳಿಕ ದೇಶ ಸ್ವತಂತ್ರವಾಯಿತು. 'ಈ ದೇಶ ರಾಜನ ದಂಡ'ದಿಂದ ನಡೆಯುತ್ತದೆಯೇ ಅಥವಾ ಸಂವಿಧಾನದಿಂದ ನಡೆಯುತ್ತದೆಯೇ? ಸಂವಿಧಾನವನ್ನು ರಕ್ಷಿಸುವುದಕ್ಕಾಗಿ ಸೆಂಗೋಲ್ ಅನ್ನು ಸಂಸತ್ತಿನಿಂದ ತೆರವುಗೊಳಿಸಬೇಕು' ಎಂದು ಚೌಧರಿ ಹೇಳಿದ್ದಾರೆ.

ಬೆಳ್ಳಿ ಮತ್ತು ಚಿನ್ನ ಲೇಪಿತ ದಂಡವಾಗಿರುವ 'ಸೆಂಗೋಲ್' ಅನ್ನು ಹೊಸ ಸಂಸತ್ ಕಟ್ಟಡದಲ್ಲಿರುವ ಲೋಕಸಭೆಯಲ್ಲಿ ಸ್ಪೀಕರ್ ಅವರ ಆಸನದ ಪಕ್ಕ ಇರಿಸಲಾಗಿದೆ.

'ದೇಶದ ಸಂವಿಧಾನವು ಪ್ರಜಾಪ್ರಭುತ್ವದ ಸಂಕೇತ. ಮೋದಿ ನಾಯಕತ್ವದ ಹಿಂದಿನ ಸರ್ಕಾರ ಸಂಸತ್ತಿನಲ್ಲಿ ಸೆಂಗೋಲ್ ಸ್ಥಾಪಿಸಿತ್ತು. 'ಸೆಂಗೋಲ್' ಎಂದರೆ ಅಂದರೆ ರಾಜನ ದಂಡ ಎಂದರ್ಥ' ಎಂದು ಚೌಧರಿ ಮಾಧ್ಯಮದವರಿಗೆ ಹೇಳಿದ್ದಾರೆ.

ಉತ್ತರ ಪ್ರದೇಶದ ಮೋಹನ್‌ಲಾಲ್‌ಗಂಜ್ ಕ್ಷೇತ್ರದಿಂದ ಮೊದಲ ಬಾರಿಗೆ ಸಂಸದರಾಗಿ ಆಯ್ಕೆಯಾಗಿರುವ ಆರ್.ಕೆ.ಚೌಧರಿ, ದಲಿತ ಪಾಸಿ ಸಮುದಾಯಕ್ಕೆ ಸೇರಿದವರು. ಬಹುಜನ ಸಮಾಜ ಪಕ್ಷದಿಂದ ತಮ್ಮ ರಾಜಕೀಯ ಜೀವನ ಆರಂಭಿಸಿದ್ದ ಅವರು ಬಿಎಸ್‌ಪಿ ಸಂಸ್ಥಾಪಕ ಕಾನ್ಶಿರಾಂ ಅವರ ಆಪ್ತರಾಗಿದ್ದರು. ರಾಜ್ಯ ಸರ್ಕಾರದಲ್ಲಿ ಸಚಿವರಾಗಿಯೂ ಕಾರ್ಯ ನಿರ್ವಹಿಸಿದ್ದರು.

ಈ ಬಾರಿಯ ಚುನಾವಣೆಯಲ್ಲಿ ಎಸ್‌ಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಚೌಧರಿ, ಕೇಂದ್ರ ಸಚಿವ ಕೌಶಲ್ ಕಿಶೋರ್ ಅವರನ್ನು 70 ಸಾವಿರ ಮತಗಳ ಅಂತರದಿಂದ ಸೋಲಿಸಿದ್ದರು.

ಚೌಧರಿ ಹೇಳಿಕೆಯನ್ನು ವಿರೋಧಿಸಿರುವ ಬಿಜೆಪಿ, ಸೆಂಗೋಲ್ ಅನ್ನು ಲೋಕಸಭೆಯಿಂದ ತೆರವುಗೊಳಿಸಬೇಕು ಎಂದು ಹೇಳುವ ಮೂಲಕ ಎಸ್‌ಪಿಯು ಭಾರತ ಮತ್ತು ತಮಿಳು ಸಂಸ್ಕೃತಿಯನ್ನು ಅಗೌರವ ತೋರುತ್ತಿದೆ ಎಂದು ದೂರಿದೆ.

ಲಿಫ್ಟ್‌ನಲ್ಲಿ ಮಾತುಕತೆ ನಡೆಸಿದ ಫಡಣವೀಸ್, ಉದ್ಧವ್

ಮುಂಬೈ (ಪಿಟಿಐ): ಮಹಾರಾಷ್ಟ್ರದ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಮತ್ತು ಶಿವಸೇನಾ ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು ಗುರುವಾರ ವಿಧಾನ ಭವನದ ಲಿಫ್ಟ್‌ನಲ್ಲಿ ಮುಖಾಮುಖಿಯಾಗಿ ಮಾತುಕತೆ ನಡೆಸಿದ್ದು, ರಾಜಕೀಯ ವಲಯದಲ್ಲಿ ಚರ್ಚೆಯ ವಿಷಯವಾಗಿದೆ.

ವಿಧಾನಸಭೆಯ ಮುಂಗಾರು ಅಧಿವೇಶನದ ಮೊದಲ ದಿನವಾದ ಗುರುವಾರ ಫಡಣವೀಸ್ ಮತ್ತು ಠಾಕ್ರೆ ಲಿಫ್ಟ್‌ನಲ್ಲಿ ಜತೆಯಾಗಿ ತೆರಳಿದರು. ಈ ವೇಳೆ ಇಬ್ಬರು ಪರಸ್ಪರ ಮಾತನಾಡಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಠಾಕ್ರೆ ಅವರು, 'ಎಷ್ಟೇ ನಿರಾಕರಿಸಿದರೂ ಪ್ರೀತಿ ಮಾಡುತ್ತೇನೆ' ಎಂಬ ಹಾಡು ಜನರಿಗೆ ಗೊತ್ತಿರುತ್ತದೆ. ಆದರೆ ನಮ್ಮಲ್ಲಿ ಆ ರೀತಿ ಏನೂ ನಡೆದಿಲ್ಲ. ಲಿಫ್ಟ್‌ಗಳಿಗೆ ಕಿವಿಯಿಲ್ಲ, ಹಾಗಾಗಿ ಹೆಚ್ಚಿನ ಮಾತುಕತೆಗಳನ್ನು ಲಿಫ್ಟ್‌ನಲ್ಲಿ ನಡೆಸುವುದು ಒಳಿತು ಎಂದರು. 'ಲಿಫ್ಟ್ ಬಾಗಿಲು ತೆರೆದ ಬಳಿಕ ಫಡಣವೀಸ್ ಸರ್ಕಾರದ ಕಚೇರಿ ಕಡೆ ತೆರಳಿದರು. ಉದ್ಧವ್ ಅವರು ವಿರೋಧ ಪಕ್ಷದ ಕಚೇರಿಗೆ ತೆರಳಿದರು. ಅವರು ಆಡಳಿತ ಪಕ್ಷದೊಂದಿಗೆ ಸೇರುವ ಉದ್ದೇಶವನ್ನು ಹೊಂದಿಲ್ಲ ಎನ್ನುವುದು ಇದರ ಅರ್ಥ' ಎಂದು ಬಿಜೆಪಿ ಶಾಸಕ ಪ್ರವೀಣ್ ದರೇಕರ್ ಅವರು ತಿಳಿಸಿದರು.

ಉದ್ಯೋಗಕ್ಕಾಗಿ ಶತ್ರು ದೇಶಕ್ಕೆ ಹೋದವರನ್ನು ಶತ್ರು ರಾಷ್ಟ್ರಕ್ಕೆ ಸೇರಿದವರು ಎನ್ನಲಾಗದು

'ಶತ್ರು ಆಸ್ತಿ': ಕೇರಳ ವ್ಯಕ್ತಿಗೆ ಹೈಕೋರ್ಟ್ ಪರಿಹಾರ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- **ಉದ್ಯೋಗ ಅರಸಿ 1953ರಲ್ಲಿ ಪಾಕ್‌ಗೆ ಹೋಗಿದ್ದ ಕುಂಞ**
- **ಕುಂಞ ಅವರ ಆಸ್ತಿಯನ್ನು 'ಶತ್ರು ಆಸ್ತಿ' ಶತ್ರು ಆಸ್ತಿ ಪಟ್ಟಿಗೆ ಸೇರಿಸಲಾಗಿತ್ತು**

ತಿರುವನಂತಪುರ: ಪಾಕಿಸ್ತಾನದಲ್ಲಿ ಕೆಲಸ ಮಾಡಿದ್ದ ತಂದೆಯಿಂದ, ಕೇರಳದ ಮಲಪ್ಪುರದ 74 ವರ್ಷದ ವ್ಯಕ್ತಿ ಪಡೆದಿದ್ದ ಭೂಮಿಯ ಮೇಲೆ ವಿಧಿಸಲಾಗಿದ್ದ 'ಶತ್ರು ಆಸ್ತಿ'ಗೆ ಸಂಬಂಧಿಸಿದ ನಿರ್ಬಂಧಗಳನ್ನು ಕೇರಳ ಹೈಕೋರ್ಟ್ ರದ್ದುಗೊಳಿಸಿದೆ.

ಉದ್ಯೋಗ ಅರಸಿ ಶತ್ರು ದೇಶಕ್ಕೆ ಹೋದಮಾತ್ರಕ್ಕೆ ಯಾವುದೇ ವ್ಯಕ್ತಿಯನ್ನು ಶತ್ರು ರಾಷ್ಟ್ರಕ್ಕೆ ಸೇರಿದವರು ಎಂದು ಪರಿಗಣಿಸಲು ಸಾಧ್ಯವಿಲ್ಲ ಎಂದು ನ್ಯಾಯಮೂರ್ತಿ ವಿಜು ಅಬ್ರಹಾಂ ಅವರಿದ್ದ ಏಕ ಸದಸ್ಯ ಪೀಠ ಸೋಮವಾರ ನೀಡಿದ ತೀರ್ಪಿನಲ್ಲಿ ಉಲ್ಲೇಖಿಸಿದೆ.

ಕೇರಳದಲ್ಲಿರುವ 68 ಸ್ಥಿರ ಆಸ್ತಿಗಳನ್ನು ಗೃಹ ಇಲಾಖೆಯ 'ಭಾರತ-ದಲ್ಲಿರುವ ಶತ್ರು ಆಸ್ತಿಯನ್ನು ಸುಪರ್ದಿಗೆ ಪಡೆಯುವ ವಿಭಾಗ'ವು (ಸಿಇಪಿಐ) 'ಶತ್ರು ಆಸ್ತಿ'ಗಳು ಎಂದು ಪಟ್ಟಿ ಮಾಡಿದೆ.

ಮಲಪುರದ ಚಿಟ್ಟಿಪ್ಪಾಡಿಯ ನಿವೃತ್ತ ಪೊಲೀಸ್ ಅಧಿಕಾರಿ ಪಿ. ಉಮ್ಮರ್ ಕೋಯಾ ಅವರು, ಪಾಕಿಸ್ತಾನದಲ್ಲಿ ಕೆಲ ಕಾಲ ಕೆಲಸ ಮಾಡಿದ್ದ ತನ್ನ ತಂದೆ ಕುಂಞ ಕೋಯಾ ಅವರಿಂದ 20.5 ಸೆಂಟ್ ಭೂಮಿಯನ್ನು ಪಡೆದಿದ್ದರು. ಆ ಆಸ್ತಿಗೆ ಭೂ ತೆರಿಗೆ ಪಾವತಿಸಲು ಹೋದಾಗ, ಪರಪ್ಪನಂಗಡಿ ಗ್ರಾಮಾಧಿಕಾರಿ ಅದನ್ನು ಸ್ವೀಕರಿಸಲು ನಿರಾಕರಿಸಿದರು.

ಈ ಆಸ್ತಿಯನ್ನು 'ಶತ್ರು ಆಸ್ತಿ ಕಾಯ್ದೆ–1968'ರ ವ್ಯಾಪ್ತಿಗೆ ತರಲಾಗಿದೆ. ಅರ್ಜಿದಾರರ ತಂದೆಯನ್ನು 'ಶತ್ರು' (ಪಾಕಿಸ್ತಾನ ಪ್ರಜೆ) ಎಂದು ಶಂಕಿಸಲಾಗಿದೆ. ಆ ಆಸ್ತಿಯ ಕುರಿತು ಸಿಇಪಿಐ ತನಿಖೆ ನಡೆಸುತ್ತಿದೆ ಎಂದು ಕಂದಾಯ ಅಧಿಕಾರಿಗಳು ಉಲ್ಲೇಖಿಸಿದ್ದಾರೆ.

ಇದನ್ನು ಉಮ್ಮರ್ ಅವರು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ಅವರ ವಕೀಲ ಎಂ.ಎ.ಆಸಿಫ್ ಅವರು, 'ಉಮ್ಮರ್ ಅವರ ತಂದೆ 1902ರಲ್ಲಿ ಮಲಪ್ಪುರದಲ್ಲಿ ಜನಿಸಿದರು. ಸಂವಿಧಾನ ಜಾರಿಯಾದ 1950ರಲ್ಲಿಯೂ ಅವರು ಭಾರತದಲ್ಲಿಯೇ ಇದ್ದರು. 1953ರಲ್ಲಿ ಅವರು ಉದ್ಯೋಗಕ್ಕಾಗಿ ಪಾಕಿಸ್ತಾನಕ್ಕೆ ಹೋಗಿದ್ದರು. ಅಲ್ಲಿ ಅಲ್ಪಕಾಲ ಹೋಟೆಲ್‌ನಲ್ಲಿ ಸಹಾಯಕರಾಗಿ ಕೆಲಸ ಮಾಡಿದ್ದರು' ಎಂದು ಹೇಳಿದರು.

'ಕುಂಞ ಅವರು ಪಾಕಿಸ್ತಾನದ ಪೌರತ್ವವನ್ನು ಪಡೆದುಕೊಳ್ಳದ ಕಾರಣ ಅವರು ಭಾರತೀಯ ಪ್ರಜೆಯಾಗಿ ಮುಂದುವರಿದಿದ್ದಾರೆ ಎಂದು ಕೇಂದ್ರವು ಆಗಲೇ ದೃಢಪಡಿಸಿತ್ತು. ಅಲ್ಲದೆ ಕುಂಞ ಅವರು ನಿಧನರಾಗಿದ್ದೂ ಭಾರತದಲ್ಲಿಯೇ. ಅವರ ಅಂತ್ಯಕ್ರಿಯೆಯೂ ಮಲಪ್ಪುರದಲ್ಲಿಯೇ ನಡೆದಿದೆ. ಇವೆಲ್ಲ ಕಾರಣಕ್ಕಾಗಿ ಅವರ ಆಸ್ತಿಯನ್ನು 'ಶತ್ರು ಆಸ್ತಿ' ಎಂದು ಪರಿಗಣಿಸಲು ಆಗುವುದಿಲ್ಲ' ಎಂದು ವಕೀಲ ಆಸಿಫ್ ಪ್ರತಿಪಾದಿಸಿದರು.

ವಾದವನ್ನು ಆಲಿಸಿದ ನ್ಯಾಯಮೂರ್ತಿಯವರು ಅರ್ಜಿದಾರರ ತಂದೆಯನ್ನು 'ಶತ್ರು' ಎಂದು ಕರೆಯಲಾಗದು. ಹಾಗೆಯೇ ಅವರ ಆಸ್ತಿಯನ್ನು 'ಶತ್ರು ಆಸ್ತಿ' ಎಂದೂ ಪರಿಗಣಿಸಲಾಗದು. ಅವರ ಜಮೀನಿನ ಮೇಲೆ ವಿಧಿಸಲಾಗಿರುವ ನಿರ್ಬಂಧವನ್ನು ರದ್ದುಗೊಳಿಸಬೇಕು ಎಂದು ಆದೇಶಿಸಿದರು.

ಸಂಕ್ಷಿಪ್ತ ಸುದ್ದಿ

ಆಸ್ಪತ್ರೆಯಿಂದ ಮನೆಗೆ ಅಡ್ವಾಣಿ

ನವದೆಹಲಿ (ಪಿಟಿಐ): ಆರೋಗ್ಯದಲ್ಲಿ ಏರುಪೇರು ಕಂಡುಬಂದ ಕರಣ ಇಲ್ಲಿನ ಏಮ್ಸ್‌ಗೆ ದಾಖಲಿಸಲಾಗಿದ್ದ, ಬಿಜೆಪಿಯ ಹಿರಿಯ ನಾಯಕ ಎಲ್.ಕೆ.ಅಡ್ವಾಣಿ ಅವರ ಆರೋಗ್ಯ ಸ್ಥಿತಿ ಸುಧಾರಿಸಿದ್ದು, ಗುರುವಾರ ಮನೆಗೆ ತೆರಳಿದ್ದಾರೆ.

96 ವರ್ಷ ವಯಸ್ಸಿನ ಅಡ್ವಾಣಿ ಅವರನ್ನು ಬುಧವಾರ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ (ಎಐಐಎಂಎಸ್) ದಾಖಲಿಸಲಾಗಿತ್ತು. ವಯೋಸಹಜ ಅನಾರೋಗದ್ಯ ಸಮಸ್ಯೆಗಳ ಕಾರಣಕ್ಕೆ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು ಎಂದು ಏಮ್ಸ್ ಅಧಿಕಾರಿಯೊಬ್ಬರು ತಿಳಿಸಿದರು.

'ಹೃದ್ರೋಗ ತಜ್ಞರು, ಮೂತ್ರಕೋಶ ತಜ್ಞರು ಸೇರಿ ವಿವಿಧ ಪರಿಣತರ ತಂಡ ಅಡ್ವಾಣಿ ಅವರ ಆರೋಗ್ಯ ಪರಿಸ್ಥಿತಿಯ ತಪಾಸಣೆ ನಡೆಸಿತು' ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

ಪಾತಕಿಗಳ ಸಹಚರರ ಬಂಧನ

ಚಂಡೀಗಢ (ಪಿಟಿಐ): ಪಾತಕಿಗಳಾದ ಲಾರೆನ್ಸ್ ಬಿಷ್ಣೋಯಿ ಮತ್ತು ಗೋಲ್ಡಿ ಬ್ರಾರ್ ಜೊತೆ ನಂಟು ಹೊಂದಿರುವ ಮೂವರನ್ನು ಪಂಜಾಬ್ ಪೊಲೀಸರು ಗುರುವಾರ ಬಂಧಿಸಿದ್ದಾರೆ. ಈ ಬಂಧನದ ಕಾರಣದಿಂದಾಗಿ ರಾಜ್ಯದಲ್ಲಿ ಕೆಲವರನ್ನು ಗುರಿಯಾಗಿಸಿಕೊಂಡು ನಡೆಯಬಹುದಿದ್ದ ಹತ್ಯೆಗಳನ್ನು ತಡೆದಂತೆ ಆಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಕರಣದೀಪ್ ಸಿಂಗ್ ಅಲಿಯಾಸ್ ಕಣ್ಣು, ರಘುವೀರ್ ಸಿಂಗ್ ಮತ್ತು ಕುಲ್ವಿಂದರ್ ಸಿಂಗ್ ಅಲಿಯಾಸ್ ಬಿಟ್ಟು ಬಂಧಿತರು.

ಲಾರೆನ್ಸ್ ಬಿಷ್ಣೋಯಿ ಮತ್ತು ಗೋಲ್ಡಿ ಬ್ರಾರ್ ಸಹಚರರು ಭಟಿಂಡಾ, ಮೊಹಾಲಿ ಮತ್ತು ಅದರ ಸುತ್ತಲಿನ ಕೆಲವು ಪ್ರದೇಶ-ಗಳಲ್ಲಿ ಹತ್ಯೆಗೆ ಸಂಚು ರೂಪಿಸಿದ್ದಾರೆ ಎಂಬ ಗುಪ್ತಚರ ಮಾಹಿತಿ ಪಡೆದ ಪೊಲೀಸರು ಕಾರ್ಯಾಚರಣೆ ನಡೆಸಿದ್ದರು.

ಡಿಜಿಪಿಗೆ ಮಾನವ ಹಕ್ಕುಗಳ ಆಯೋಗ ನೋಟಿಸ್

ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ಹಾಥರಸ್‌ನಲ್ಲಿ ಪೊಲೀಸ್ ದೌರ್ಜನ್ಯದಿಂದ ಬೇಸತ್ತು ಇಬ್ಬರು ಸಹೋದರರು ಆತ್ಮಹತ್ಯೆಗೆ ಶರಣಾಗಿರುವ ಪ್ರಕರಣ ಸಂಬಂಧ ಲಿಖಿತ ವರದಿ ನೀಡುವಂತೆ ರಾಷ್ಟ್ರೀಯ ಮಾನವ ಹಕ್ಕು ಆಯೋಗವು ಉತ್ತರ ಪ್ರದೇಶ ಡಿಜಿಪಿಗೆ ನೋಟಿಸ್ ನೀಡಿದೆ.

'ಜನರು ದೌರ್ಜನ್ಯಕ್ಕೆ ಒಳಗಾಗದಂತೆ ಪೊಲೀಸರು ರಕ್ಷಣೆ ನೀಡಬೇಕಿದೆ. ಆದರೆ ಈ ಪ್ರಕರಣದಲ್ಲಿ ಪೊಲೀಸರೇ ದೌರ್ಜನ್ಯ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಒಂದು ವೇಳೆ ಇದು ನಿಜವೇ ಆಗಿದ್ದಲ್ಲಿ ಪ್ರಕರಣವನ್ನು ಗಂಭೀರವಾಗಿ ಪರಿಗಣಿ-ಸಬೇಕಾಗುತ್ತದೆ' ಎಂದು ಮಾನವ ಹಕ್ಕು ಆಯೋಗ ತಿಳಿಸಿದೆ.

ಆಗ್ರಾದ ಇಬ್ಬರು ಸಹೋದರರು ಪೊಲೀಸ್ ಸಿಬ್ಬಂದಿಯಿಂದ ದೌರ್ಜನ್ಯಕ್ಕೊಳಗಾಗಿ, ಅದೇ ನೋವಿನಲ್ಲಿ ಆತ್ಮಹತ್ಯೆಗೆ ಶರಣಾಗಿರುವುದಾಗಿ ಜೂನ್ 25ರಂದು ಮಾಧ್ಯಮಗಳು ವರದಿ ಮಾಡಿವೆ. ಈ ಬಗ್ಗೆ ಮಾನವ ಹಕ್ಕು ಆಯೋಗ ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿದೆ.

ನಡ್ಡಾ ರಾಜ್ಯಸಭೆ ಸಭಾನಾಯಕ

ನವದೆಹಲಿ (ಪಿಟಿಐ): ರಾಜ್ಯಸಭೆಯ 264ನೇ ಅಧಿವೇಶನದ ಮೊದಲ ದಿನವಾದ ಗುರುವಾರ ಕೇಂದ್ರ ಆರೋಗ್ಯ ಸಚಿವ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜಗತ್ ಪ್ರಕಾಶ್ ನಡ್ಡಾ ಅವರನ್ನು ರಾಜ್ಯಸಭೆಯ ಸಭಾನಾಯಕರಾಗಿ ನೇಮಿಸಲಾಗಿದೆ.

'ಜೆ.ಪಿ.ನಡ್ಡಾ ಅವರನ್ನು ರಾಜ್ಯಸಭೆಯ ಸಭಾ ನಾಯಕರಾಗಿ ನೇಮಿಸಲಾಗಿದೆ' ಎಂದು ರಾಜ್ಯಸಭೆ ಸಭಾಪತಿ ಜಗದೀಪ್ ಧನ್‌ಕರ್ ಘೋಷಿಸುತ್ತಿದ್ದಂತೆಯೇ, ಸದಸ್ಯರು ಮೇಜು ಕುಟ್ಟಿ ಸ್ವಾಗತಿಸಿದರು.

ಅಮರನಾಥ: ನೋಂದಣಿ ಶುರು

ಜಮ್ಮು(ಪಿಟಿಐ): ದಕ್ಷಿಣ ಕಾಶ್ಮೀರದ ಹಿಮಾಲಯದಲ್ಲಿರುವ ಅಮರನಾಥ ಗುಹೆಯ ತೀರ್ಥಯಾತ್ರೆಗೆ ಆಗಮಿಸುವ ಭಕ್ತರ ನೋಂದಣಿಯನ್ನು ಸ್ಥಳದಲ್ಲೇ ನಡೆಸುವ ಪ್ರಕ್ರಿಯೆಯನ್ನು ಆಡಳಿತವು ಗುರುವಾರ ಆರಂಭಿಸಿದೆ.

ಬಿಗಿ ಭದ್ರತಾ ವ್ಯವಸ್ಥೆಗಳ ನಡುವೆ, 1600 ಯಾತ್ರಿಕರು ತಮ್ಮ ಮುಂದಿನ ಪ್ರಯಾಣಕ್ಕಾಗಿ ಕಾಶ್ಮೀರದ ಭಗವತಿ-ನಗರ ಬೇಸ್ ಕ್ಯಾಂಪ್‌ಗೆ ಆಗಮಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಹಿಳೆಯರು ಸೇರಿದಂತೆ 800ಕ್ಕೂ ಹೆಚ್ಚು ಸಾಧುಗಳು ರಾಮಮಂದಿರ ಮತ್ತು ಗೀತಾ ಭವನಕ್ಕೆ ಆಗಮಿಸಿದ್ದಾರೆ.

ಗುಂಡಿಕ್ಕಿ ದಲಿತ ಯುವಕನ ಹತ್ಯೆ

ಫರೀದಾಬಾದ್ (ಪಿಟಿಐ): ಹರಿಯಾಣದ ಫರೀದಾಬಾದ್ ಜಿಲ್ಲೆಯ ಫತೇಪುರ್ ಬಿಲ್ಲೋಚ್ ಗ್ರಾಮದಲ್ಲಿ ಎರಡು ಗುಂಪುಗಳ ನಡುವೆ ನಡೆದ ಘರ್ಷಣೆಯಲ್ಲಿ 25 ವರ್ಷದ ದಲಿತ ವ್ಯಕ್ತಿಯನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿದೆ. ಹಳೆಯ ದ್ವೇಷದ ಹಿನ್ನೆಲೆಯಲ್ಲಿ ನಡೆದ ಈ ಗಲಾಟೆಯಲ್ಲಿ ಇತರ ಆರು ಜನರು ಗಾಯಗೊಂಡಿದ್ದಾರೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ದೇವೇಂದ್ರ ಎಂಬ ಮೃತ ಯುವಕ 2010ರಲ್ಲಿ ಕೆಲವರ ಜೊತೆ ಗಲಾಟೆ ಮಾಡಿಕೊಂಡಿದ್ದನು. ಬುಧವಾರ ರಾತ್ರಿ 8 ಗಂಟೆ ಸುಮಾರಿಗೆ ದೇವೇಂದ್ರ ಮಾರುಕಟ್ಟೆ ಕಡೆಗೆ ಹೋಗುತ್ತಿದ್ದಾಗ ದಾರಿಯಲ್ಲಿ ನಿಂತಿದ್ದ ಯುವಕರು ಆತನಿಗೆ ಜಾತಿ ನಿಂದನೆ ಮಾಡಿದ್ದಾರೆ. ದೇವೇಂದ್ರ ಇದರ ವಿರುದ್ಧ ಪ್ರತಿಭಟಿ-ಸುತ್ತಿದ್ದಂತೆ ಅವನ ಆಮೇಲೆ ಹಲ್ಲೆ ನಡೆಸಲಾಗಿದೆ. ಆಗ ಆರೋಪಿಗಳು ದೇವೇಂದ್ರನ ಮೇಲೆ ಗುಂಡು ಹಾರಿಸಿದ್ದಾರೆ ಎಂದು ಗ್ರಾಮದ ನಿವಾಸಿ ಸುಂದರ್ ಲಾಲ್ ದೂರು ಅವರು ನೀಡಿದ್ದಾರೆ.

ಶುಕ್ರವಾರ, ಜೂನ್ 28, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 179 | ಪುಟ 18
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
'ಬಿಸಿ-ಬಿಸಿ ಐಸ್‌ಕ್ರೀಂ' ನಟಿಯಲು ಸಜ್ಜಾದ ನಟ ಸಿರಿ ರವಿಕುಮಾರ್



ಆಳ-ಅಗಲ
ವಿಪಕ್ಷ ಸಂಸದರ ಹೊಸ ಕಾರ್ಯತಂತ್ರ
ಹೊಸ ಎತ್ತರಕ್ಕೆ ಜಿಗಿದ ಷೇರುಪೇಟೆ 10
ಕೋಡೆ ರಮಣಯ್ಯ ವಂಚಿಸಿದ್ದು ₹250 ಕೋಟಿ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
79,243	24,044	₹73,300 (ಬೆಂಗಳೂರು)	₹89,300 (ಬೆಂಗಳೂರು)	83.45

ಸಿ.ಎಂ ಗದ್ದುಗೆ: ಸದ್ದುಗದ್ದಲ

ಶಿವಕುಮಾರ್‌ಗೆ ಸಿಎಂ ಸ್ಥಾನ ಬಿಟ್ಟು ಕೊಡಿ; ಸಿದ್ದರಾಮಯ್ಯ ಎದುರೇ ಬೇಡಿಕೆ ಮಂಡಿಸಿದ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಚ್ಚುವರಿಯಾಗಿ ಜಾತಿವಾರು ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂಬ ಕೂಗು ವಾರದೀಚೆಗೆ ಭುಗಿಲೆದ್ದಿದ್ದ ಬೆನ್ನಲ್ಲೇ, ಮುಖ್ಯಮಂತ್ರಿ ಸ್ಥಾನವನ್ನು ಡಿ.ಕೆ. ಶಿವಕುಮಾರ್ ಅವರಿಗೆ ಬಿಟ್ಟುಕೊಡಬೇಕು ಎಂದು ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಚಂದ್ರಶೇಖರ ನಾಥ ಸ್ವಾಮೀಜಿ ಅವರು ಸಿದ್ದರಾಮಯ್ಯನವರ ಎದುರೇ ಒತ್ತಡ ಹೇರಿರುವುದು ಚರ್ಚೆಯ ದಿಕ್ಕನ್ನು ಬದಲಿಸಿದೆ.

ಲೋಕಸಭಾ ಚುನಾವಣೆ ಮುಗಿದ ಬಳಿಕ, ಸಮುದಾಯವಾರು ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂಬ ವಿಚಾರವನ್ನು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಪ್ರಸ್ತಾವಿಸಿದ್ದರು. ಸಚಿವರಾದ ಜಿ. ಪರಮೇಶ್ವರ, ಕೆ.ಎನ್. ರಾಜಣ್ಣ, ಬಿ.ಜೆಡ್. ಜಮೀರ್ ಅಹಮದ್ ಖಾನ್, ಎಚ್.ಸಿ. ಮಹದೇವಪ್ಪ ಈ ಮಾತಿಗೆ ಸಹಮತ ಸೂಚಿಸಿದ್ದರು. ಸಿದ್ದರಾಮಯ್ಯನವರ ಬಣದಲ್ಲಿ ಗುರುತಿಸಿಕೊಂಡಿರುವ ಸಚಿವರು ಈ ವಿಷಯದಲ್ಲಿ ಮತ್ತೆ ಮತ್ತೆ ಮಾತನಾಡುತ್ತಿದ್ದರು.

ಇದಕ್ಕೆ ತಿರುಗೇಟು ನೀಡುವಂತೆ ಪ್ರತಿಕ್ರಿಯಿಸಿದ್ದ ಚನ್ನಗಿರಿ ಕ್ಷೇತ್ರದ ಶಾಸಕ ಬಸವರಾಜ್ ಶಿವಗಂಗಾ, 'ಕೆಪಿಸಿಸಿ ಅಧ್ಯಕ್ಷರನ್ನು ಮುಖ್ಯಮಂತ್ರಿ ಮಾಡುವುದು ಪದ್ಧತಿ. ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡಿ ಡಜನ್ ಉಪಮುಖ್ಯಮಂತ್ರಿ ಮಾಡಲಿ' ಎಂದು ಒತ್ತಾಯಿಸಿದ್ದರು.

ಈ ಬೆಳವಣಿಗೆಗಳು ಪಕ್ಷದ ಮೇಲೆ ಪರಿಣಾಮ ಬೀರುತ್ತಿರುವುದನ್ನು ಗಮನಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ವಿಷಯವನ್ನು ಪ್ರಸ್ತಾಪಿಸಿದಂತೆ ಸಚಿವ ರಾಜಣ್ಣ ಅವರಿಗೆ ಗುರುವಾರ ಬೆಳಿಗ್ಗೆಯಷ್ಟೇ ತಾಕೀತು ಮಾಡಿದ್ದರು.

ಸ್ವಾಮೀಜಿ ಸಿಡಿಸಿದ ಕಿಡಿ: ಸರ್ಕಾರದ ವತಿಯಿಂದ ಬೆಂಗಳೂರಿನಲ್ಲಿ ಗುರುವಾರ ನಡೆದ ನಾಡಪ್ರಭು ಕೆಂಪೇಗೌಡರ 515ನೇ ಜಯಂತಿ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಉಪಸ್ಥಿತರಿದ್ದರು. ಕಾರ್ಯಕ್ರಮದ ಕೊನೆಯಲ್ಲಿ ಮಾತನಾಡಿದ ಚಂದ್ರಶೇಖರ ಸ್ವಾಮೀಜಿ, ಸಿದ್ದರಾಮಯ್ಯನವರು ಇನ್ನು ಮುಂದೆ ಶಿವಕುಮಾರ್‌ಗೆ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡಲಿ ಎಂಬ ಬೇಡಿಕೆ ಮಂಡಿಸಿದರು.

8ನೇ ಪುಟ ನೋಡಿ



ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ 515ನೇ ಜಯಂತ್ಯುತ್ಸವ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ/ ಎಂ.ಎಸ್.ಮಂಜುನಾಥ್

> **ಎಲ್ಲ ವಿಚಾರಗಳ ಬಗ್ಗೆ ಹೈಕಮಾಂಡ್ ತೀರ್ಮಾನ ಕೈಗೊಳ್ಳುತ್ತದೆ. ಆ ತೀರ್ಮಾನದಂತೆ ನಾವು ನಡೆದುಕೊಳ್ಳುತ್ತೇವೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> **ರಾಜಕಾರಣದಲ್ಲಿ ಅಭಿಮಾನಪೂರ್ವಕವಾಗಿ ಇಂತಹ ಹೇಳಿಕೆಗಳನ್ನು ಮಧ್ಯೆ ಮಧ್ಯೆ ನೀಡುವುದು ಸಹಜ. ಅವರ ಮಾತಿಗೆ ಹೆಚ್ಚು ಗಮನ ಕೊಡಬಾರದು. ಹೈಕಮಾಂಡ್ ತೀರ್ಮಾನಕ್ಕೆ ಬದ್ಧ**
> **ಡಿ.ಕೆ. ಶಿವಕುಮಾರ್,** ಉಪಮುಖ್ಯಮಂತ್ರಿ

> **ಸಿ.ಎಂ ಸ್ಥಾನವನ್ನು ಶಿವಕುಮಾರ್‌ಗೆ ಬಿಟ್ಟುಕೊಡಬೇಕು ಎಂದು ಸ್ವಾಮೀಜಿ ಸ್ವಪ್ರೇರಣೆಯಿಂದ ಹೇಳಿಕೆ ನೀಡಿದರೋ ಅಥವಾ ಶಿವಕುಮಾರ್ ಅವರೇ ಹೇಳಿಸಿದರೋ ಗೊತ್ತಿಲ್ಲ**
> **ಆರ್.ಅಶೋಕ,** ವಿರೋಧ ಪಕ್ಷದ ನಾಯಕ

ಚಂದ್ರಶೇಖರ ನಾಥ ಸ್ವಾಮೀಜಿ ಹೇಳಿದ್ದೇನು?

'ಎಲ್ಲರೂ ಮುಖ್ಯಮಂತ್ರಿಯಾಗಿ ಅಧಿಕಾರವನ್ನು ಆಸ್ವಾದ ಮಾಡಿದ್ದಾರೆ. ನಮ್ಮ ಶಿವಕುಮಾರ್ ಒಬ್ಬರು ಮಾತ್ರ ಮುಖ್ಯಮಂತ್ರಿ ಆಗಿಲ್ಲ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಅನುಭವಿಸಿದ್ದಾರೆ. ಇನ್ನು ಮುಂದೆ ಶಿವಕುಮಾರ್ ಅವರಿಗೆ ಅಧಿಕಾರ ಬಿಟ್ಟುಕೊಟ್ಟು ಅವರಿಗೆ ಒಳ್ಳೆಯದಾಗಲಿ ಎಂದು ಹರಸಬೇಕು. ಸಿದ್ದರಾಮಯ್ಯ ಮನಸ್ಸು ಮಾಡಿದರೆ ಮಾತ್ರ ಇದು ಸಾಧ್ಯ' ಎಂದು ಕೆಂಗೇರಿಯ ವಿಶ್ವ ಒಕ್ಕಲಿಗರ ಮಹಾಸಂಸ್ಥಾ ಮಠದ ಚಂದ್ರಶೇಖರ ನಾಥ ಸ್ವಾಮೀಜಿ ಹೇಳಿದರು.

'ಶಿವಕುಮಾರ್ ಅವರು ಒಕ್ಕಲಿಗರು ಎಂಬ ಕಾರಣಕ್ಕೆ ನಾವು ಹೀಗೆ ಹೇಳಿದ್ದಲ್ಲ. ಅವರು ರಾಜ್ಯದಲ್ಲಿ ಓಡಾಡಿ ತುಂಬಾ ಒಳ್ಳೆಯ ಕೆಲಸ ಮಾಡಿದ್ದಾರೆ, ಮಾಡುತ್ತಿದ್ದಾರೆ. ಅವರ ನಂತರ ಕಾಂಗ್ರೆಸ್‌ನ ಇತರ ನಾಯಕರಿಗೂ ಅಧಿಕಾರ ಸಿಗಲಿ' ಎಂದು ಪ್ರತಿಪಾದಿಸಿದರು.



ಶಿವಮೊಗ್ಗ ತಾಲ್ಲೂಕಿನ ಗಾಜನೂರಿನ ತುಂಗಾ ಜಲಾಶಯ ಭರ್ತಿಯಾದ ಕಾರಣ ಗುರುವಾರ ಎರಡು ಕ್ರೆಸ್ಟ್‌ಗೇಟ್‌ಗಳನ್ನು ತೆರೆದು ನದಿಗೆ ನೀರು ಹರಿಸಲಾಯಿತು – ಪ್ರಜಾವಾಣಿ ಚಿತ್ರ/ಶಿವಮೊಗ್ಗ ನಾಗರಾಜ್

ಭದ್ರಾ, ಲಿಂಗನಮಕ್ಕಿಗೂ ಒಳಹರಿವು ಏರಿಕೆ

ಮತ್ತಷ್ಟು ಮಳೆ: 'ತುಂಗಾ' ಭರ್ತಿ

ಪ್ರಜಾವಾಣಿ ವಾರ್ತೆ

ಮಂಗಳೂರು/ ಮಡಿಕೇರಿ/ಶಿವಮೊಗ್ಗ: ಮಲೆನಾಡು, ಕರಾವಳಿ ಸೇರಿದಂತೆ ರಾಜ್ಯದ ವಿವಿಧೆಡೆ ಧಾರಾಕಾರ ಮಳೆಯು ಗುರುವಾರವೂ ಮುಂದುವರಿದಿದೆ. ಜಲಾಶಯಗಳಿಗೆ ನೀರಿನ ಒಳಹರಿವಿನ ಪ್ರಮಾಣ ಹೆಚ್ಚಳಗೊಂಡಿದೆ.

ಶಿವಮೊಗ್ಗ ಜಿಲ್ಲೆಯ ಗಾಜನೂರು ಬಳಿ ಇರುವ ತುಂಗಾ ಜಲಾಶಯ ಸಂಪೂರ್ಣ ಭರ್ತಿಯಾಗಿದೆ. ಈ ವರ್ಷದ ಮಳೆಗಾಲದಲ್ಲಿ ರಾಜ್ಯದಲ್ಲಿ ಮೊದಲು ಭರ್ತಿಯಾದ ಜಲಾಶಯ ಇದು.

7ನೇ ಪುಟ ನೋಡಿ

ಕಬಿನಿ ಒಳಹರಿವು ಹೆಚ್ಚಳ

ಮೈಸೂರು: ಕೇರಳದ ವಯನಾಡು ಭಾಗದಲ್ಲಿ ಉತ್ತಮ ಮಳೆಯಿಂದಾಗಿ ಜಿಲ್ಲೆಯ ಎಚ್.ಡಿ. ಕೋಟೆ ತಾಲ್ಲೂಕಿನ ಕಬಿನಿ ಜಲಾಶಯಕ್ಕೆ ಒಳಹರಿವು ಇನ್ನಷ್ಟು ಹೆಚ್ಚಿದ್ದು, ಗುರುವಾರ ಮುಂಜಾನೆ ಜಲಾಶಯಕ್ಕೆ 16,977 ಕ್ಯುಸೆಕ್ ಪ್ರಮಾಣದ ನೀರು ಹರಿದು ಬಂದಿತ್ತು.

2284 ಅಡಿ ಸಂಗ್ರಹ ಸಾಮರ್ಥ್ಯದ ಜಲಾಶಯದಲ್ಲಿ ಈಗ 2269.22 ಅಡಿಯಷ್ಟು ನೀರು ಸಂಗ್ರಹವಾಗಿದೆ. ಜಲಾಶಯದಿಂದ ನದಿಗೆ 1 ಸಾವಿರ ಕ್ಯುಸೆಕ್ ನೀರು ಹರಿಯುತ್ತಿದೆ.

ಕಳೆದ ವರ್ಷ ಇದೇ ಅವಧಿಯಲ್ಲಿ ಜಲಾಶಯದ ಒಳಹರಿವು ಕೇವಲ 115 ಕ್ಯುಸೆಕ್‌ನಷ್ಟಿತ್ತು. ಮೈಸೂರಿನಲ್ಲಿ ಗುರುವಾರ ದಿನವಿಡೀ ಜಿಟಿಜಿಟಿ ಮಳೆಯಾಗಿದ್ದು, ತಂಪು ವಾತಾವರಣವಿತ್ತು.

ಸಿನಿ ಸಮ್ಮಾನ ಇಂದು ಪ್ರದಾನ




ಕರ್ನಾಟಕದ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಸಂಭ್ರಮಿಸುವ, ಬೆಸೆಯುವ ವೇದಿಕೆಯಾಗಿರುವ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ಎರಡನೇ ಆವೃತ್ತಿಯ ಪ್ರಶಸ್ತಿ ಪ್ರದಾನ ಸಮಾರಂಭ ಶುಕ್ರವಾರ (ಜೂನ್ 28ಕ್ಕೆ) ನಡೆಯಲಿದೆ. ಹಲವಾರು ಸಿನಿ ತಾರೆಯರು, ಗಣ್ಯರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. 2023ರಲ್ಲಿ ತೆರೆಕಂಡ ಸಿನಿಮಾಗಳನ್ನು ಈ ಬಾರಿಯ ಪ್ರಶಸ್ತಿಗೆ ಪರಿಗಣಿಸಲಾಗಿದ್ದು, 25 ವಿಭಾಗಗಳಲ್ಲಿ ತಲಾ ಐವರಂತೆ ಪ್ರಶಸ್ತಿಗೆ ನೂರಕ್ಕೂ ಅಧಿಕ ಜನರು ನಾಮನಿರ್ದೇಶನಗೊಂಡಿದ್ದಾರೆ. ಈ ಪೈಕಿ ಯಾರ ಮುಡಿಗೆ ಚೆಂದದ ಸಮ್ಮಾನ ಎನ್ನುವ ಕುತೂಹಲಕ್ಕೆ ತೆರೆ ಬೀಳಲಿದೆ.

ಬಾಲಕಿಗೆ ಕಿರುಕುಳ, ವಿಡಿಯೊ–ಫೋಟೊ ಅಳಿಸಲು ₹2 ಲಕ್ಷ

ಬಿಎಸ್‌ವೈ ವಿರುದ್ಧ ಚಾರ್ಜ್‌ಶೀಟ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಸೇರಿದಂತೆ ನಾಲ್ವರ ವಿರುದ್ಧ ಹದಿನೇಳು ವರ್ಷದ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಪ್ರಕರಣದಲ್ಲಿ ಸಿಐಡಿ ಅಧಿಕಾರಿಗಳು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ (ಚಾರ್ಜ್‌ಶೀಟ್) ಸಲ್ಲಿಸಿದ್ದಾರೆ.

ಬಾಲಕಿ ತಾಯಿ ನೀಡಿದ್ದ ದೂರಿನಡಿ ಸದಾಶಿವನಗರ ಠಾಣೆಯಲ್ಲಿ ಮಾರ್ಚ್ 14ರಂದು ದಾಖಲಾಗಿದ್ದ ಪ್ರಕರಣದ ವಿಚಾರಣೆ ನಡೆಸಿದ್ದ ಸಿಐಡಿ ಅಧಿಕಾರಿಗಳು, ಇತ್ತೀಚೆಗಷ್ಟೇ ಯಡಿಯೂರಪ್ಪ ಅವರನ್ನು ವಿಚಾರಣೆಗೆ ಒಳಪಡಿಸಿ ಹೇಳಿಕೆ ಪಡೆದಿದ್ದರು.

8ನೇ ಪುಟ ನೋಡಿ

ಪ್ರಕರಣ ಏನು ಎತ್ತ?

- ಫೆ.2ರಂದು ನ್ಯಾಯ ಕೇಳಿ ಬಿ.ಎಸ್.ಯಡಿಯೂರಪ್ಪ ಮನೆಗೆ ತೆರಳಿದ್ದ ಸಂತ್ರಸ್ತೆ ಹಾಗೂ ಆಕೆಯ ತಾಯಿ
- ಮಾ. 3ರಂದು ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ಸಂತ್ರಸ್ತೆಯ ತಾಯಿಯಿಂದ ದೂರು ದಾಖಲು
- ಮಾ. 14ರಂದು ಸದಾಶಿವನಗರ ಠಾಣೆಯಲ್ಲಿ ಬಿಎಸ್‌ವೈ ವಿರುದ್ಧ ಪೋಕ್ಸೊ ಪ್ರಕರಣ ದಾಖಲು. ನಂತರ, ಎಸಿಎಂಎಂ 25ನೇ ನ್ಯಾಯಾಧೀಶರ ಎದುರು ಸಂತ್ರಸ್ತೆಯ ಹೇಳಿಕೆ ದಾಖಲು
- ಮಾ. 14ರಂದೇ ಪ್ರಕರಣವನ್ನು ಸಿಐಡಿಗೆ ಹಸ್ತಾಂತರಿಸಿದ್ದ ಸರ್ಕಾರ
- ಏ. 12ರಂದು ವಿಚಾರಣೆಗೆ ಹಾಜರಾಗುವಂತೆ ಬಿಎಸ್‌ವೈಗೆ ಸಿಐಡಿ ನೋಟಿಸ್, ನಂತರ ತನಿಖಾಧಿಕಾರಿಗಳು ಧ್ವನಿ ಮಾದರಿ ಸಂಗ್ರಹಿಸಿದ್ದರು
- ಏ. 27ರಂದು ಬಿಎಸ್‌ವೈ ವಿರುದ್ಧ ದೂರು ನೀಡಿದ್ದ ಸಂತ್ರಸ್ತೆಯ ತಾಯಿ ಮೃತಪಟ್ಟಿದ್ದರು
- ಜೂನ್. 12ರಂದು ಬಂಧನ ವಾರಂಟ್ ಜಾರಿಗೊಂಡಿತ್ತು
- ಜೂನ್. 14ರಂದು ಮುಂದಿನ ವಿಚಾರಣೆ ನಡೆಯುವವರೆಗೂ ಯಡಿಯೂರಪ್ಪ ಅವರನ್ನು ಬಂಧಿಸದಂತೆ ಸೂಚಿಸಿದ್ದ ಹೈಕೋರ್ಟ್, ಸಿಐಡಿ ವಿಚಾರಣೆಗೆ ಹಾಜರಾಗಲು ಸೂಚಿಸಿತ್ತು
- ಜೂನ್ 17ರಂದು ಹೈಕೋರ್ಟ್ ಸೂಚನೆ ಮೇರೆಗೆ ಬಿಎಸ್‌ವೈ ಅವರು ಸಿಐಡಿ ವಿಚಾರಣೆಗೆ ಹಾಜರಾಗಿದ್ದರು

'70 ವರ್ಷ ಮೇಲ್ಪಟ್ಟವರಿಗೆ ಉಚಿತ ಚಿಕಿತ್ಸೆ'

ನವದೆಹಲಿ (ಪಿಟಿಐ): 70 ವರ್ಷ ಮೇಲ್ಪಟ್ಟ ಎಲ್ಲ ನಾಗರಿಕರಿಗೆ 'ಆಯುಷ್ಮಾನ್ ಭಾರತ' ಯೋಜನೆಯಡಿ ಉಚಿತ ಚಿಕಿತ್ಸೆಯ ಸೌಲಭ್ಯ ಒದಗಿಸಲಾಗುವುದು ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಗುರುವಾರ ಹೇಳಿದರು.

ಸಂಸತ್ತಿನ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಿದ ಅವರು, 'ದೇಶದಾದ್ಯಂತ 25 ಸಾವಿರ ಜನೌಷಧ ಕೇಂದ್ರಗಳನ್ನು ಆರಂಭಿಸುವ ಕೆಲಸ ತ್ವರಿತಗತಿಯಲ್ಲಿ ಸಾಗುತ್ತಿದೆ. ಆಯುಷ್ಮಾನ್ ಭಾರತ- ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆಯಡಿ 55 ಕೋಟಿ ಫಲಾನುಭವಿಗಳಿಗೆ ಉಚಿತ ಆರೋಗ್ಯ ಸೇವೆಗಳನ್ನು ಒದಗಿಸಲಾಗುತ್ತಿದೆ' ಎಂದರು.

'ಉಚಿತ ಆರೋಗ್ಯ ಸೌಲಭ್ಯ ಒದಗಿಸುವ ವಿಚಾರದಲ್ಲಿ ಸರ್ಕಾರ ಇನ್ನೂ ಒಂದು ಹೆಜ್ಜೆ ಮುಂದಿಟ್ಟಿದೆ. 70 ವರ್ಷ ಮೇಲ್ಪಟ್ಟ ಎಲ್ಲರೂ ಆಯುಷ್ಮಾನ್ ಭಾರತ ಯೋಜನೆಯ ವ್ಯಾಪ್ತಿಗೆ ಒಳಪಡಲಿದ್ದು, ಉಚಿತ ಚಿಕಿತ್ಸೆ ಸೌಲಭ್ಯದ ಪ್ರಯೋಜನ ಪಡೆಯಲಿದ್ದಾರೆ' ಎಂದು ತಿಳಿಸಿದರು.

'ಭಾರತವು ಆಯುಷ್ (ಆಯುರ್ವೇದ, ಯೋಗ ಮತ್ತು ನ್ಯಾಚುರೋಪಥಿ, ಯುನಾನಿ, ಸಿದ್ಧ ಹಾಗೂ ಹೋಮಿಯೋಪಥಿ) ಮೂಲಕ ಆರೋಗ್ಯಕರ ಜಗತ್ತನ್ನು ರೂಪಿಸಲು ನೆರವಾಗುತ್ತಿದೆ' ಎಂದರು. ಈಚೆಗಿನ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆಯಾಗುವುದನ್ನು ಖಚಿತಪಡಿಸಿ ಕೊಳ್ಳಲು ಸರ್ಕಾರವು ಬದ್ಧವಾಗಿದೆ ಎಂದೂ ಹೇಳಿದರು

ಚಿನಕುರುಳಿ

ಪ್ರಕಾಶ್ ಶೆಟ್ಟಿ



'ಹೊಸೂರಿನಲ್ಲಿ ವಿಮಾನ ನಿಲ್ದಾಣ'

ಚೆನ್ನೈ (ಪಿಟಿಐ): 'ತಮಿಳುನಾಡು ಸರ್ಕಾರವು 2 ಸಾವಿರ ಎಕರೆ ಪ್ರದೇಶದಲ್ಲಿ ಹೊಸೂರಿನಲ್ಲಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿಸಲು ಉದ್ದೇಶಿಸಿದ್ದು, ವಾರ್ಷಿಕ 3 ಕೋಟಿ ಪ್ರಯಾಣಿಕರನ್ನು ನಿರ್ವಹಿಸುವ ಸಾಮರ್ಥ್ಯ ಹೊಂದಿರಲಿದೆ. ಹೊಸ ನಿಲ್ದಾಣವು ಕೃಷ್ಣಗಿರಿ, ಧರ್ಮಪುರಿ ಜಿಲ್ಲೆಗಳ ಕೈಗಾರಿಕಾ ಅಗತ್ಯಗಳನ್ನು ಪೂರೈಸಲಿದೆ' ಎಂದು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಅಧಿವೇಶನದಲ್ಲಿ ಗುರುವಾರ ಪ್ರಕಟಿಸಿದರು.

ಸದನದಲ್ಲಿದ್ದ ಎಲ್ಲ ರಾಜಕೀಯ ಪಕ್ಷಗಳು ಈ ನಿರ್ಧಾರವನ್ನು ಸ್ವಾಗತಿಸಿದವು.



> **2030ರ ವೇಳೆಗೆ ರಾಜ್ಯವನ್ನು 1 ಟ್ರಿಲಿಯನ್ ಡಾಲರ್ (ಸುಮಾರು ₹83 ಲಕ್ಷ ಕೋಟಿ) ಆರ್ಥಿಕತೆಯನ್ನಾಗಿಸಲು ಎಲ್ಲ ಪ್ರಯತ್ನ ಮಾಡಲಾಗುತ್ತಿದೆ**
> **ಎಂ.ಕೆ.ಸ್ಟಾಲಿನ್,** ತಮಿಳುನಾಡು ಮುಖ್ಯಮಂತ್ರಿ

8ನೇ ಪುಟ ನೋಡಿ

ಪೂರ್ವಭಾವಿ ಪರೀಕ್ಷೆ ಆ. 25ಕ್ಕೆ ಮರುನಿಗದಿ

ಬೆಂಗಳೂರು: 2023-24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಗ್ರೂಪ್ 'ಎ' ಮತ್ತು 'ಬಿ' ವೃಂದದ ಒಟ್ಟು 384 ಹುದ್ದೆಗಳಿಗೆ ಜುಲೈ 21ರಂದು ನಡೆಸಲು ಉದ್ದೇಶಿಸಿದ್ದ ಪೂರ್ವಭಾವಿ ಪರೀಕ್ಷೆಯನ್ನು ಆಗಸ್ಟ್ 25ಕ್ಕೆ ಮುಂದೂಡಲು ಕೆಪಿಎಸ್‌ಸಿ ನಿರ್ಧರಿಸಿದೆ.

ಈ ಕುರಿತು ಪ್ರಕಟಣೆ ನೀಡಿರುವ ಕೆಪಿಎಸ್‌ಸಿ, '2017-18ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ನೇಮಕಾತಿ ಪರೀಕ್ಷೆಗೆ ಅರ್ಜಿ ಸಲ್ಲಿಸಿದ್ದ ಎಲ್ಲ ಅಭ್ಯರ್ಥಿ ಗಳಿಗೆ ವಯಸ್ಸಿನ ನಿರ್ಬಂಧವಿಲ್ಲದೆ ಒಂದು ಬಾರಿಗೆ ಸೀಮಿತಗೊಳಿಸಿ ಅರ್ಜಿ ಸಲ್ಲಿಸಲು ಹೆಚ್ಚುವರಿ ಅವಕಾಶ ನೀಡಲಾಗಿದೆ.

ಕೋರ್ಸ್‌ಗಳ ಜೊತೆಗೆ ಒಂದು ಕೌಶಲ ಅಧ್ಯಯನಕ್ಕೆ ಶಿಷ್ಯವೇತನ

ಪದವಿ ವಿದ್ಯಾರ್ಥಿಗಳಿಗೆ ₹17 ಸಾವಿರ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಸರ್ಕಾರಿ ಪದವಿ ಕಾಲೇಜುಗಳಲ್ಲಿ ಸಾಮಾನ್ಯ ಕೋರ್ಸ್‌ಗಳ ಜೊತೆಗೆ ಒಂದು ಕೌಶಲ ವಿಷಯ ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳಿಗೆ ಒಂದು ವರ್ಷದವರೆಗೆ (ಎರಡು ಸೆಮಿಸ್ಟರ್) ಪ್ರತಿ ತಿಂಗಳು ₹11 ಸಾವಿರದಿಂದ ₹17 ಸಾವಿರವರೆಗೆ ಶಿಷ್ಯವೇತನ ಸಿಗಲಿದೆ.

ರಾಜ್ಯದ ಉನ್ನತ ಶಿಕ್ಷಣದಲ್ಲಿ ಸಾಮಾನ್ಯ ಪದವಿ ಕೋರ್ಸ್‌ಗಳ ಜೊತೆಗೇ ಕೌಶಲಾಧಾರಿತ ವಿಷಯಗಳ ಅಧ್ಯಯನಕ್ಕೂ ಅವಕಾಶ ಮಾಡಿಕೊಡಲಾಗಿದ್ದು, ಇದೇ ಶೈಕ್ಷಣಿಕ ಸಾಲಿನಿಂದ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಕೊನೆಯ ಐದು ಮತ್ತು ಆರನೇ ಸೆಮಿಸ್ಟರ್‌ನಲ್ಲಿ ಶಿಷ್ಯ ವೇತನದ ಸೌಲಭ್ಯ ದೊರಕಲಿದೆ.

ಹತ್ತು ಮಂದಿ ನಿವೃತ್ತ ಐಎಎಸ್ ಅಧಿಕಾರಿಗಳು ಸ್ಥಾಪಿಸಿರುವ 'ಕ್ರಿಸ್ಪ್' (ಸೆಂಟರ್ ಫಾರ್ ರಿಸರ್ಚ್ ಇನ್ ಸ್ಕೀಮ್ಸ್ ಆ್ಯಂಡ್ ಪಾಲಿಸೀಸ್) ಜೊತೆ ಉನ್ನತ ಶಿಕ್ಷಣದಲ್ಲಿ ಕೌಶಲಾಧಾರಿತ ಕೋರ್ಸ್‌ಗಳನ್ನು ಪರಿಚಯಿಸುವ ಒಪ್ಪಂದಕ್ಕೆ ರಾಜ್ಯ ಸರ್ಕಾರ ಸಹಿ ಹಾಕಿದೆ. ಮೊದಲ ವರ್ಷ 60 ಕಾಲೇಜುಗಳಲ್ಲಿ 3,600 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುತ್ತಿದೆ. ಮೂರು ವರ್ಷಗಳಲ್ಲಿ 239 ಕಾಲೇಜುಗಳಿಗೆ ಯೋಜನೆ ವಿಸ್ತರಿಸಲಾಗುವುದು. 2026-27ರ ವೇಳೆಗೆ 14,340 ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ ಗುರಿ ಹೊಂದಲಾಗಿದೆ.

ಮೊದಲ ಹಂತದಲ್ಲಿ ಬಿ.ಎಸ್‌ಸಿ, ಬಿ.ಕಾಂ, ಬಿ.ಬಿ.ಎಂ, ಬಿ.ಸಿ.ಎ ವಿದ್ಯಾರ್ಥಿಗಳಿಗೆ ಇ-ಕಾಮರ್ಸ್, ಆಹಾರ ಸರಪಳಿ ನಿರ್ವಹಣೆ, ಸರಕು ಸಾಗಣೆ ಉದ್ಯಮ, ರಿಟೇಲ್, ಹೆಲ್ತ್‌ಕೇರ್, ಪ್ರವಾಸೋದ್ಯಮ ಮತ್ತು ಆತಿಥ್ಯ ನಿರ್ವಹಣೆ, ಜೀವನ ವಿಜ್ಞಾನ, ಔಷಧ ಮಾರುಕಟ್ಟೆ ಮತ್ತು ಮಾರಾಟ ಕೋರ್ಸ್‌ಗಳನ್ನು ಪರಿಚಯಿಸಲಾಗಿದೆ.

11ನೇ ಪುಟ ನೋಡಿ

3,600	14,340	239
ಪ್ರಸಕ್ತ ವರ್ಷ ಪ್ರವೇಶ ಪಡೆಯುವ ವಿದ್ಯಾರ್ಥಿಗಳು	ಮೂರು ವರ್ಷದಲ್ಲಿ ಹೆಚ್ಚಳವಾಗಲಿರುವ ವಿದ್ಯಾರ್ಥಿಗಳ ಸಂಖ್ಯೆ	ಆಯ್ಕೆ ಮಾಡಿಕೊಂಡ ರಾಜ್ಯದ ಪದವಿ ಕಾಲೇಜುಗಳು

ಆಗಸ್ಟ್‌ನಿಂದ ಪ್ರವೇಶ

ಸಾಮಾನ್ಯ ಶಿಕ್ಷಣದ ಜೊತೆಗೆ ಕೌಶಲ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಲು ಬಯಸುವ ವಿದ್ಯಾರ್ಥಿಗಳಿಗೆ ಇದೇ ತಿಂಗಳು 30ರಿಂದ ಅರ್ಜಿಗಳನ್ನು ವಿತರಿಸಲಾಗುತ್ತದೆ. ಆಗಸ್ಟ್‌ನಿಂದ ಪ್ರವೇಶ ಪ್ರಕ್ರಿಯೆಗಳು ಆರಂಭವಾಗಲಿವೆ.

ಕೌಶಲ ವಿಷಯಗಳ ಬೋಧನೆಗೆ ಗುರುತಿಸಿದ ಪ್ರತಿ ಕಾಲೇಜಿನ ಇಬ್ಬರು ಅಧ್ಯಾಪಕರಿಗೆ ಆಯಾ ವಿಷಯಗಳ ಬೋಧನೆಗೆ ತರಬೇತಿ ನೀಡಲಾಗುತ್ತದೆ. ಅಲ್ಲದೇ, ಆಯಾ ವಿಷಯಗಳಿಗೆ ಸಂಬಂಧಿಸಿದ ಕಂಪನಿಗಳ ಅಧಿಕಾರಿಗಳು ಹಾಗೂ ತಜ್ಞರು ವಿಶೇಷ ತರಗತಿಗಳನ್ನು ತೆಗೆದುಕೊಳ್ಳಲಿದ್ದಾರೆ. ಕೊನೆಯ ಎರಡು ಸೆಮಿಸ್ಟರ್‌ನಲ್ಲಿ ಶಿಷ್ಯ ವೇತನ ನೀಡಲಾಗುತ್ತದೆ. ವಿದ್ಯಾರ್ಥಿಗಳು ಪದವಿ ಶಿಕ್ಷಣ ಪೂರೈಸಿದ ತಕ್ಷಣ ಅವರಿಗೆ ಉದ್ಯೋಗ ದೊರಕಿಸುವ ಭರವಸೆಯನ್ನೂ 'ಕ್ರಿಸ್ಪ್' ನೀಡಿದೆ.

> **ಪದವಿ ವಿದ್ಯಾರ್ಥಿಗಳು ಬೋಧನೆಯ ಜತೆಗೆ, ಕೈಗಾರಿಕೆ, ಕಂಪನಿಗಳಲ್ಲಿ ಅಪ್ರೆಂಟಿಸ್‌ಗಳಾಗಿ ಕೆಲಸ ಮಾಡುವರು. ಅವರಿಗೆ ಒಂದು ವರ್ಷ ಶಿಷ್ಯ ವೇತನವೂ ದೊರಕಲಿದೆ**
> **ಡಾ.ಎಂ.ಸಿ. ಸುಧಾಕರ್**
> ಉನ್ನತ ಶಿಕ್ಷಣ ಸಚಿವ

ಅಜ್ಜನಿಂದಲೇ ಮೊಮ್ಮಗಳ ಮೇಲೆ ಲೈಂಗಿಕ ದೌರ್ಜನ್ಯ

ಬೆಂಗಳೂರು: ಆರು ವರ್ಷದ ಮೊಮ್ಮಗಳ ಮೇಲೆ ಆಕೆಯ ಅಜ್ಜನೇ ಲೈಂಗಿಕ ದೌರ್ಜನ್ಯ ಎಸಗಿರುವ ಘಟನೆ ಹುಳಿಮಾವು ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಡೆದಿದೆ.

ಬಾಲಕಿಯ ತಾಯಿ ನೀಡಿದ ದೂರಿನ ಆಧಾರದಲ್ಲಿ ಹುಳಿಮಾವು ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ. ಆರೋಪಿ ತಪ್ಪಿಸಿಕೊಳ್ಳಲು ಸಹಕಾರ ನೀಡಿದ ಆರೋಪದ ಮೇಲೆ ಬಾಲಕಿಯ ತಂದೆ ರಂಜಿತ್ ಕುಮಾರ್ (35) ಅವರನ್ನು ಬಂಧಿಸಲಾಗಿದೆ. ಆರೋಪಿ ಚಕ್ರವರ್ತಿ (60), ರಂಜಿತ್ ಕುಮಾರ್ ಅವರ ಅತ್ತೆ ವಿಜಯಮ್ಮ ಹಾಗೂ ಇಬ್ಬರು ಸಹೋದರರು ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ಬಾಲಕಿಯ ತಾಯಿ ಕೆಲಸಕ್ಕೆ ತೆರಳಿದ್ದ ಸಂದರ್ಭದಲ್ಲಿ ಲೈಂಗಿಕ ದೌರ್ಜನ್ಯ ಎಸಗಲಾಗಿದೆ. ಘಟನೆ ಬಗ್ಗೆ ಯಾರಿಗೂ ಹೇಳದಂತೆ ಬಾಲಕಿಯ ತಾಯಿಗೆ ಚಿನ್ನದ ಒಡವೆ, ಬಾಲಕಿಯ ಹೆಸರಿನಲ್ಲಿ ಮನೆ ನೀಡುವುದಾಗಿ ಆಮಿಷ ಒಡ್ಡಲಾಗಿತ್ತು. ಆದರೆ, ಸಂತ್ರಸ್ತೆಯ ತಾಯಿ ಕೆಲಸದ ನೆಪದಲ್ಲಿ ಮನೆಯಿಂದ ಹೊರ ಬಂದು, ಅಕ್ಕಪಕ್ಕದವರ ನೆರವಿನಿಂದ ಮಗಳನ್ನು ಆಸ್ಪತ್ರೆಗೆ ಸೇರಿಸಿದ್ದಾರೆ.

ಬಿಟ್ ಕಾಯಿನ್ ಹಗರಣ: ಹೈಕೋರ್ಟ್‌ನಲ್ಲಿ ವಿಚಾರಣೆ

ಶ್ರೀಧರ್ ಪೂಜಾರ್‌ಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟ್ ಕಾಯಿನ್ ಪ್ರಕರಣದಲ್ಲಿ ಆರೋಪಿಗಳನ್ನು ಅಕ್ರಮವಾಗಿ ತಮ್ಮ ವಶದಲ್ಲಿಟ್ಟುಕೊಂಡು ಹ್ಯಾಕಿಂಗ್, ಬಿಟ್ ಕಾಯಿನ್‌ಗಳ ವರ್ಗಾವಣೆ ಮತ್ತು ಪಾಸ್ ವರ್ಡ್ ಬದಲಾವಣೆ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಬಂಧನ ಭೀತಿ ಎದುರಿಸುತ್ತಿದ್ದ ರಾಜ್ಯ ಆಂತರಿಕ ಭದ್ರತಾ ವಿಭಾಗದ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ (ಡಿವೈಎಸ್‌ಪಿ) ಶ್ರೀಧರ್ ಕೆ. ಪೂಜಾರ್ ಅವರಿಗೆ ಹೈಕೋರ್ಟ್ ಷರತ್ತು ಬದ್ಧ ನಿರೀಕ್ಷಣಾ ಜಾಮೀನು ನೀಡಿದೆ.

ಈ ಸಂಬಂಧ ಶ್ರೀಧರ್ ಕೆ. ಪೂಜಾರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಜಿ. ಉಮಾ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ. 'ತನಿಖಾಧಿಕಾರಿ ಕರೆದಾಗ ವಿಚಾರಣೆಗೆ ಹಾಜರಾಗಬೇಕು. ತನಿಖೆಗೆ ಸಹಕರಿಸಬೇಕು' ಎಂದು ಅರ್ಜಿದಾರರಿಗೆ ತಾಕೀತು ಮಾಡಿದೆ. ಇದೇ ವೇಳೆ ನ್ಯಾಯಪೀಠವು, ಅರ್ಜಿದಾರರ ವಿರುದ್ಧ ಎರಡು ಬಾರಿ ಎಫ್‌ಐಆರ್ ದಾಖಲಿಸಿರುವ ಪೊಲೀಸರ ಕ್ರಮಕ್ಕೆ ಅಸಮಾಧಾನ ವ್ಯಕ್ತಪಡಿಸಿತು.

ಜಾಮೀನು ಅರ್ಜಿಗೆ ಬಲವಾದ ಆಕ್ಷೇಪ ವ್ಯಕ್ತಪಡಿಸಿದ್ದ ರಾಜ್ಯ ಪ್ರಾಸಿಕ್ಯೂಷನ್, 'ಬಿಟ್ ಕಾಯಿನ್ ಹಗರಣದ ಸಂಚುಕೋರ ಶ್ರೀಕಾಂತ್ ಅಲಿಯಾಸ್ ಶ್ರೀಕಿ ಭಾಗಿಯಾಗಿರುವ ಈ ಪ್ರಕರಣದಲ್ಲಿ ಶ್ರೀಕಿಯನ್ನು ಅಕ್ರಮವಾಗಿ ಬಂಧನದಲ್ಲಿ ಇರಿಸಿಕೊಂಡು ಕೆಲವು ಲೈವ್ ಸರ್ವರ್ ಗಳನ್ನು ಹ್ಯಾಕ್ ಮಾಡಿ ಅಲ್ಲಿಂದ ಬಿಟ್ ಕಾಯಿನ್ ಕದಿಯಲಾಗಿದೆ. ಇದು ಸಾವಿರಾರು ಕೋಟಿ ರೂಪಾಯಿ ಮೊತ್ತದ ಹಗರಣ. ಶ್ರೀಕಿ ಹಾಗೂ ಇನ್ನುಳಿದ ಆರೋಪಿಗಳ ವಿಚಾರದಲ್ಲಿ ಅರ್ಜಿದಾರ ಪೂಜಾರ್ ಸಮರ್ಪಕ ತನಿಖೆ ನಡೆಸಿಲ್ಲ. ಅವರೊಂದಿಗೆ ಶಾಮೀಲಾಗಿದ್ದಾರೆ. ಸದ್ಯ ಎಸ್‌ಐಟಿ ಸಮರ್ಪಕ ತನಿಖೆ ನಡೆಸುತ್ತಿದೆ. ಅಂತೆಯೇ, ಅರ್ಜಿದಾರರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುವ ಅಗತ್ಯವಿದೆ. ಆದ್ದರಿಂದ, ಅರ್ಜಿದಾರರಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಬಾರದು' ಎಂದು ಮನವಿ ಮಾಡಿತ್ತು. ಅರ್ಜಿದಾರರ ಪರ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್ ವಾದ ಮಂಡಿಸಿದರು.

ಪ್ರಕರಣವೇನು?

ಡಾರ್ಕ್ ನೆಟ್ ಮೂಲಕ ಮಾದಕ ವಸ್ತು ಖರೀದಿಸಿದ ಆರೋಪದಡಿ 2020ರ ನವೆಂಬರ್‌ನಲ್ಲಿ ಶ್ರೀಕಿಯನ್ನು ಬೆಂಗಳೂರಿನ ಸಿಸಿಬಿ ಪೊಲೀಸರು ಬಂಧಿಸಿದ್ದರು. ಆಗ ಸಿಸಿಬಿಯಲ್ಲಿ ಪೂಜಾರ್ ತನಿಖಾಧಿಕಾರಿ ಆಗಿದ್ದರು. ಇದೇ ಸಂದರ್ಭದಲ್ಲಿ; 2019ರ ಜುಲೈ-ಆಗಸ್ಟ್ ಅವಧಿಯಲ್ಲಿ ಕರ್ನಾಟಕ ಸರ್ಕಾರದ ಇ-ಆಡಳಿತ ಘಟಕದ ₹11.5 ಕೋಟಿ ದೋಚಿದ್ದ ಪ್ರಕರಣ ಬೆಳಕಿಗೆ ಬಂದಿತ್ತು. ಈ ಪ್ರಕರಣದಲ್ಲಿ 10ನೇ ಆರೋಪಿಯಾದ ಶ್ರೀಕಿಯನ್ನು 2020ರ ಏಪ್ರಿಲ್ 14ರಿಂದ 17ರವರೆಗೆ ಅಕ್ರಮವಾಗಿ ವಶದಲ್ಲಿಟ್ಟುಕೊಂಡು ಬಿಟ್ ಕಾಯಿನ್ ವರ್ಗಾವಣೆ, ಪಾಸ್ ವರ್ಡ್ ಬದಲಾವಣೆಯಂತಹ ಕೃತ್ಯಗಳಿಗೆ ಬಳಕೆ ಮಾಡಿದ ಆರೋಪಗಳನ್ನು ಪೂಜಾರ್ ಎದುರಿಸುತ್ತಿದ್ದಾರೆ.

ಈ ಆರೋಪಗಳ ಅನ್ವಯ ಪೊಲೀಸರು 2024ರ ಜನವರಿ 24ರಂದು ದಾಖಲಿಸಿದ್ದ ದೂರಿನಡಿ ಪೂಜಾರ್ ನಿರೀಕ್ಷಣಾ ಜಾಮೀನು ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಐದು ಮಕ್ಕಳ ರಕ್ಷಣೆ; ಏಳು ಮಂದಿ ಆರೋಪಿಗಳ ಬಂಧನ

ಮಕ್ಕಳ ಮಾರಾಟ ಜಾಲ ಪತ್ತೆ

ಪ್ರಜಾವಾಣಿ ವಾರ್ತೆ

ತುಮಕೂರು: ಜಿಲ್ಲೆಯಲ್ಲಿ ಸಕ್ರಿಯವಾಗಿದ್ದ ಮಕ್ಕಳ ಮಾರಾಟ ಜಾಲವನ್ನು ಭೇದಿಸಿರುವ ಪೊಲೀಸರು ಐವರು ಮಕ್ಕಳನ್ನು ರಕ್ಷಿಸಿದ್ದಾರೆ. ಆರೋಗ್ಯ ಇಲಾಖೆ ಫಾರ್ಮಾಸಿಸ್ಟ್, ಇಬ್ಬರು ಸ್ಟಾಫ್ ನರ್ಸ್ ಸೇರಿದಂತೆ ಮಕ್ಕಳ ಮಾರಾಟ ಜಾಲದ ಏಳು ಮಂದಿಯನ್ನು ಬಂಧಿಸಿದ್ದಾರೆ.

ಮಕ್ಕಳ ಮಾರಾಟ ಜಾಲ ಇನ್ನಷ್ಟು ವಿಸ್ತರಿಸಿರುವ ಸಾಧ್ಯತೆಗಳಿದ್ದು, ಈವರೆಗೆ ಮಾರಾಟ ಮಾಡಿದ್ದ ಒಂಬತ್ತು ಮಕ್ಕಳಲ್ಲಿ ಐವರು ಮಕ್ಕಳನ್ನು ರಕ್ಷಿಸಲಾಗಿದೆ. ಉಳಿದ ಮಕ್ಕಳ ಪತ್ತೆಗೆ ಪ್ರಯತ್ನ ಮುಂದುವರಿದಿದೆ.

ಅವಿವಾಹಿತ ಮಹಿಳೆಗೆ ಜನಿಸಿದ ಮಗುವನ್ನು ಪಡೆದುಕೊಂಡು ಅದನ್ನು ಮಧ್ಯವರ್ತಿಗಳ ಮೂಲಕ ₹2 ಲಕ್ಷದಿಂದ ₹3 ಲಕ್ಷದ ವರೆಗೂ ಮಾರಾಟ ಮಾಡುವ ದಂಧೆಯಲ್ಲಿ ಈ ತಂಡ ತೊಡಗಿತ್ತು. ಆರೋಗ್ಯ ಇಲಾಖೆ ಸಿಬ್ಬಂದಿ ಜತೆಗೆ ಸೇರಿಕೊಂಡು ಈ ತಂಡ ದೊಡ್ಡ ಜಾಲವನ್ನೇ ನಿರ್ಮಿಸಿಕೊಂಡು ಮಕ್ಕಳ ಮಾರಾಟದಲ್ಲಿ ಸಕ್ರಿಯವಾಗಿತ್ತು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಅಶೋಕ್ ಪತ್ರಿಕಾಗೋಷ್ಠಿಯಲ್ಲಿ ಬುಧವಾರ ತಿಳಿಸಿದರು.

ಮದುವೆಗೆ ಮುನ್ನ ಹಾಗೂ ಅಕ್ರಮ ಸಂಬಂಧದಿಂದ ಗರ್ಭಿಣಿಯಾದ ಮಹಿಳೆ ಹೆರಿಗೆಗಾಗಿ ಆಸ್ಪತ್ರೆಗೆ ದಾಖಲಾಗುವ ಸಮಯ ನೋಡಿಕೊಂಡು ಮಗು ಅಗತ್ಯವಿದ್ದ ಮಹಿಳೆಯನ್ನು ಕರೆತಂದು ಅದೇ ಆಸ್ಪತ್ರೆಗೆ ದಾಖಲಿಸಿಕೊಳ್ಳುತ್ತಿದ್ದರು. ಆ ಮಹಿಳೆಗೆ ಮಗು ಜನಿಸಿದೆ ಎಂಬಂತೆ ಆಸ್ಪತ್ರೆಯಲ್ಲಿ ದಾಖಲೆ ಸೃಷ್ಟಿಸಿ ಅವರ ಹೆಸರಿನಲ್ಲೇ ಜನನ ಪ್ರಮಾಣ ಪತ್ರ ಪಡೆದುಕೊಳ್ಳಲು ನೆರವಾಗುತ್ತಿದ್ದರು. ಮಗು ಪಡೆದುಕೊಂಡ ಪೋಷಕರಿಂದ ಲಕ್ಷಾಂತರ ರೂಪಾಯಿ ಪಡೆದುಕೊಳ್ಳುತ್ತಿದ್ದರು.

ಪ್ರಕರಣ ಪತ್ತೆಯಾಗಿದ್ದು ಹೇಗೆ?

ಗುಬ್ಬಿ ಚನ್ನಬಸವೇಶ್ವರ ದೇವಸ್ಥಾನದ ಬಳಿ ಮಹಾದೇವಿ ಎಂಬುವರು ತಮ್ಮ ಕುಟುಂಬದವರ ಜತೆ ಮಲಗಿದ್ದ ಸಮಯದಲ್ಲಿ ಜೂನ್ 9ರಂದು 11 ತಿಂಗಳ ಗಂಡು ಮಗುವನ್ನು ಅಪಹರಿಸಲಾಗಿತ್ತು. ತನಿಖಾ ತಂಡ ಬೆನ್ನು ಹತ್ತಿದ ಸಮಯದಲ್ಲಿ ಕೆ.ಎನ್.ರಾಮಕೃಷ್ಣ, ಹನುಮಂತರಾಜು ಸಿಕ್ಕಿ ಬಿದ್ದರು. ಇವರ ವಿಚಾರಣೆ ವೇಳೆ ಸತ್ಯಾಂಶ ಬೆಳಕಿಗೆ ಬಂದಿದೆ.

ಇದಕ್ಕೆ ಮಧ್ಯವರ್ತಿಯಾಗಿ ತುಮಕೂರಿನ ಯು.ಡಿ.ಮಹೇಶ ಕೆಲಸ ಮಾಡುತ್ತಿದ್ದು, ಹುಳಿಯಾರಿನ ಫಾರ್ಮಸಿಸ್ಟ್ ಮಹಬೂಬ್ ಷರೀಫ್ ಸಹಕರಿಸುತ್ತಿದ್ದ. ಷರೀಫ್ ತನ್ನ ಪತ್ನಿ ಹೆಸರಿನಲ್ಲಿ ಹುಳಿಯಾರಿನಲ್ಲಿ ಖಾಸಗಿ ಆಸ್ಪತ್ರೆ ನಡೆಸುತ್ತಿದ್ದಾರೆ. ಅಲ್ಲೇ ಹೆರಿಗೆ ಮಾಡಿಸಿ, ಮಕ್ಕಳನ್ನು ಮಾರಾಟ ಮಾಡಲಾಗುತ್ತಿತ್ತು. ಬೆಳ್ಳೂರು ಕ್ರಾಸ್, ಹುಳಿಯಾರು, ಹಾಸನ ಜಿಲ್ಲೆ ಸಾಣೆಹಳ್ಳಿ, ಬೆಂಗಳೂರಿನ ಸಿಂಗಾಪುರ ಲೇಔಟ್, ಮಧುಗಿರಿ ತಾಲ್ಲೂಕು ಎಸ್.ಎಂ.ಗೊಲ್ಲಹಳ್ಳಿಯ ಜನರಿಗೆ ಮಕ್ಕಳನ್ನು ಮಾರಾಟ ಮಾಡಿದ್ದರು.

ಬಂಧಿತ ಆರೋಪಿಗಳು

ನಗರದ ಶೆಟ್ಟಿಹಳ್ಳಿಗೇಟ್‌ನಲ್ಲಿರುವ ನರ್ಸಿಂಗ್ ಕಾಲೇಜು ವ್ಯವಸ್ಥಾಪಕ (ಕುಣಿಗಲ್ ತಾಲ್ಲೂಕು ಉಜ್ಜನಿ ಗ್ರಾಮ) ಯು.ಡಿ.ಮಹೇಶ (39), ಚಿಕ್ಕನಾಯಕನಹಳ್ಳಿ ತಾಲ್ಲೂಕು ಗೂಬೆಹಳ್ಳಿ ಪಿಎಚ್‌ಸಿಯ ಫಾರ್ಮಾಸಿಸ್ಟ್ ಹುಳಿಯಾರಿನ ಮಹಬೂಬ್ ಷರೀಫ್ (52), ಮಧುಗಿರಿ ತಾಲ್ಲೂಕು ದೊಡ್ಡೇರಿ ಪಿಎಚ್‌ಸಿಯ ಗುತ್ತಿಗೆ ಸ್ಟಾಫ್ ನರ್ಸ್ ಪೂರ್ಣಿಮಾ (39), ಶಿರಾ ಆಸ್ಪತ್ರೆ ಗುತ್ತಿಗೆ ಸ್ಟಾಫ್ ನರ್ಸ್ ಸೌಜನ್ಯ (48), ಗುಬ್ಬಿ ತಾಲ್ಲೂಕು ಬಿಕ್ಕೇಗುಡ್ಡ ಗ್ರಾಮದ ಕೆ.ಎನ್.ರಾಮಕೃಷ್ಣಪ್ಪ (53), ತುಮಕೂರಿನ ಭಾರತಿನಗರದ ಹನುಮಂತರಾಜು (45), ಮಗು ಖರೀದಿಸಿದ್ದ ನಾಗಮಂಗಲ ತಾಲ್ಲೂಕು ಬೆಳ್ಳೂರು ಕ್ರಾಸ್ ಆಟೊ ಚಾಲಕ ಮುಬಾರಕ್ ಪಾಷಾ (44) ನನ್ನು ಪೊಲೀಸರು ಬಂಧಿಸಿದ್ದಾರೆ.

ಬರಗೂರು ರಾಮಚಂದ್ರಪ್ಪ ಅವರಿಗೆ ಬರೆದ ಪತ್ರದಲ್ಲಿ ಕನ್ನಡ ಬೋಧನೆ ಬಗ್ಗೆ ಸ್ಪಷ್ಟನೆ

4 ಗಂಟೆ ಬೋಧನೆ: ಸುಧಾಕರ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿ ಕಾಲೇಜುಗಳಲ್ಲಿ ಕನ್ನಡ ಭಾಷಾ ವಿಷಯ ಬೋಧನೆಗೆ ವಾರಕ್ಕೆ ನಾಲ್ಕು ಗಂಟೆ ಅವಧಿ ಮೀಸಲಿಡಲು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಿಗೂ ಸೂಚನೆ ನೀಡಿದ್ದಾರೆ.

ಈ ಕುರಿತು ಸಾಹಿತಿ ಬರಗೂರು ರಾಮಚಂದ್ರಪ್ಪ ಅವರಿಗೆ ಪತ್ರ ಬರೆದಿರುವ ಅವರು, 'ರಾಷ್ಟ್ರೀಯ ಶಿಕ್ಷಣ ನೀತಿ ಹಾಗೂ ಸಿಬಿಎಸ್‌ಇ ನೀತಿ, ವಿಶ್ವವಿದ್ಯಾಲಯ ಅನುದಾನ ಆಯೋಗದ ಶಿಫಾರಸಿನಂತೆ ಭಾಷಾ ವಿಷಯಗಳ ಬೋಧನಾ ಅವಧಿ ಕಡಿಮೆ ಮಾಡಲಾಗಿತ್ತು. ಕನ್ನಡಿಗರ ಒತ್ತಡದ ನಂತರ ನಾಲ್ಕು ಗಂಟೆಗಳಿಗೆ ಹೆಚ್ಚಿಸಲಾಯಿತು. ಭಾಷಾ ಕಲಿಕೆಗೆ ಮೊದಲ ನಾಲ್ಕು ಸೆಮಿಸ್ಟರ್‌ನಲ್ಲಿ ನಾಲ್ಕು ಗಂಟೆಗಳ ಅವಧಿ ಮೀಸಲಿಡಲು ಸ್ಪಷ್ಟ ಸೂಚನೆ ನೀಡಿದ್ದರೂ, ಕೆಲ ವಿಶ್ವವಿದ್ಯಾಲಯಗಳು ಪಾಲಿಸಿಲ್ಲ. ಹಾಗಾಗಿ, ಕಡ್ಡಾಯವಾಗಿ ಪಾಲಿಸುವಂತೆ ಸ್ಪಷ್ಟ ಸೂಚನೆ ನೀಡಿದ್ದೇನೆ' ಎಂದು ವಿವರಿಸಿದ್ದಾರೆ.

ರಾಷ್ಟ್ರೀಯ ಶಿಕ್ಷಣ ನೀತಿಗೆ (ಎನ್‌ಇಪಿ) ಪರ್ಯಾಯವಾಗಿ ರೂಪಿಸುತ್ತಿರುವ ರಾಜ್ಯ ಶಿಕ್ಷಣ ನೀತಿಯಲ್ಲೂ (ಎಸ್‌ಇಪಿ) ಕನ್ನಡಕ್ಕೆ ಅನ್ಯಾಯವಾಗುತ್ತಿದೆ. ಕೆಲ ವಿಶ್ವವಿದ್ಯಾಲಯಗಳು ಕನ್ನಡವನ್ನೂ ಒಳಗೊಂಡಂತೆ ಭಾಷಾ ವಿಷಯಗಳಿಗೆ ವಾರಕ್ಕೆ ಮೂರು ಗಂಟೆ ಬೋಧನಾ ಅವಧಿ ನಿಗದಿ ಮಾಡಿರುವುದು ಅನ್ಯಾಯ ಎಂದು ಅಸಮಾಧಾನ ವ್ಯಕ್ತಪಡಿಸಿ ಬರಗೂರು ಅವರು ಎರಡು ದಿನಗಳ ಹಿಂದೆ ಉನ್ನತ ಶಿಕ್ಷಣ ಸಚಿವರಿಗೆ ಪತ್ರ ಬರೆದಿದ್ದರು.

'ಕನ್ನಡಿಗರಿಗೆ ಸಿಂಹಪಾಲು ಬೇಕು'

ಬೆಂಗಳೂರು: 'ಕರ್ನಾಟಕದಲ್ಲಿ ಎಲ್ಲ ಬಗೆಯ ಉದ್ಯೋಗದಲ್ಲಿಯೂ ಕನ್ನಡಿಗರಿಗೇ ಸಿಂಹಪಾಲು ಇರಬೇಕು' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಆಗ್ರಹಿಸಿದ್ದಾರೆ.

ಕನ್ನಡಿಗರಿಗೆ ಉದ್ಯೋಗದ ಸಂಬಂಧ ಕರ್ನಾಟಕ ರಕ್ಷಣಾ ವೇದಿಕೆ ಜುಲೈ 1ರಂದು ರಾಜ್ಯದಾದ್ಯಂತ ಹಮ್ಮಿಕೊಂಡಿರುವ ಧರಣಿ ಸತ್ಯಾಗ್ರಹವನ್ನು ಬೆಂಬಲಿಸಿರುವ ಅವರು, 'ಸರೋಜಿನಿ ಮಹಿಷಿ ವರದಿಯು ಉದ್ಯೋಗದಲ್ಲಿ ಕನ್ನಡಿಗರಿಗೆ ಆದ್ಯತೆ ನೀಡಬೇಕೆಂದು ಹೇಳಿತ್ತು. ಇತ್ತೀಚೆಗೆ ಜಾರಿಯಾದ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಕಾಯ್ದೆ–2022 ರಲ್ಲಿಯೂ ಕನ್ನಡಿಗರಿಗೇ ಉದ್ಯೋಗವೆಂಬ ಸಂಗತಿಯನ್ನು ಸ್ಪಷ್ಟವಾಗಿ ಹೇಳಲಾಗಿದೆ' ಎಂದಿದ್ದಾರೆ.

'ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಉದ್ಯೋಗದಲ್ಲಿ ಮಾತ್ರವಲ್ಲದೆ, ಖಾಸಗಿ ಕ್ಷೇತ್ರದಲ್ಲಿಯೂ ಕನ್ನಡಿಗರಿಗೆ ಉದ್ಯೋಗಗಳು ದೊರಕಬೇಕು. ಕನ್ನಡಿಗ ಎನ್ನಿಸಿಕೊಳ್ಳಲು 15 ವರ್ಷ ಕರ್ನಾಟಕದಲ್ಲಿ ವಾಸವಾಗಿರಬೇಕು ಎನ್ನುವ ನಿಯಮದ ಜೊತೆಗೆ ಕನ್ನಡ ಓದಲು-ಬರೆಯಲು-ಸಂವಹನ ನಡೆಸಲು ಬರಬೇಕು ಎಂಬುದನ್ನೂ ಸೇರಿಸಬೇಕು' ಎಂದು ತಿಳಿಸಿದ್ದಾರೆ.

ದೇವದಾರಿ ಯೋಜನೆ: ರಾಜ್ಯ ಸರ್ಕಾರದ ನಡೆಗೆ ಎಚ್‌ಡಿಕೆ ಬೇಸರ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕೇಂದ್ರ ಸಚಿವರು, ಸಂಸದರು ಕೆಲಸ ಮಾಡಲ್ಲ ಅಂತೀರಿ. ಕೆಲಸ ಮಾಡಲು ಹೋದರೆ ಅಡ್ಡಿ ಮಾಡುತ್ತೀರಿ. ರಾಜ್ಯಕ್ಕೆ ಒಳ್ಳೆಯದಾಗಲಿ ಎಂದು ದೇವದಾರಿ ಗಣಿ ಯೋಜನೆಗೆ ಸಹಿ ಹಾಕಿದೆ' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಹೇಳಿದರು.

ನವದೆಹಲಿಯಲ್ಲಿ ಗುರುವಾರ ನಡೆದ ರಾಜ್ಯದ ಸಂಸದರ ಜತೆಗಿನ ಸಭೆಯಲ್ಲಿ ಮಾತನಾಡಿದ ಅವರು, 'ರಾಜ್ಯ ಸರ್ಕಾರಕ್ಕೆ ₹2,500 ಕೋಟಿ ಆದಾಯ ಬರುತ್ತದೆ. ಆದರೆ, ಇದಕ್ಕೆ ಬೇರೆ ಅರ್ಥ ಕಲ್ಪಿಸಿ, ಅರಣ್ಯ ನಾಶವಾಗುತ್ತದೆ ಎಂದು ಹುಯಿಲೆಬ್ಬಿಸಲಾಗುತ್ತಿದೆ' ಎಂದರು.

'ಕುದುರೆಮುಖ ಕಂಪನಿಗೆ ಅರಣ್ಯ ತೀರುವಳಿ ಪತ್ರ ಕೊಡಲು ರಾಜ್ಯ ಸರ್ಕಾರ ನಿರಾಕರಿಸಿದೆ. ಈ ಬಗ್ಗೆ ಮಾಹಿತಿ ಪಡೆಯಲು ಅರಣ್ಯ ಸಚಿವರಿಗೆ ಕರೆ ಮಾಡಿದೆ. ಸಚಿವರು ಕರೆ ಸ್ವೀಕರಿಸಲಿಲ್ಲ. ನಂತರ, ಪಿಸಿಸಿಎಫ್ ಅವರಿಗೆ ಕರೆ ಮಾಡಿ ಮಾಹಿತಿ ಪಡೆದೆ. ಈ ಯೋಜನೆಗೆ ನಿಮ್ಮ ಪಕ್ಷದ ಸರ್ಕಾರವೇ ಅನುಮತಿ ನೀಡಿದೆ. ಆದರೆ, ಈಗ ಅರಣ್ಯ ನಾಶ ಆಗುತ್ತದೆ ಎಂದು ನೆಪ ಹೇಳುತ್ತಿದ್ದೀರಿ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಕೆಐಒಸಿಎಲ್ ₹390 ಕೋಟಿ ಕಟ್ಟಿದೆ. ಮರು ಅರಣ್ಯೀಕರಣ ಮಾಡುವುದಕ್ಕೆ ₹194 ಕೋಟಿ ಪಾವತಿಸಿದೆ. 400 ಎಕರೆ ಪ್ರದೇಶಕ್ಕೆ ಗಣಿಗಾರಿಕೆಗೆ ಅನುಮತಿ ಕೊಡಲಾಗಿದೆ. 800 ಎಕರೆಗೂ ಹೆಚ್ಚು ಜಾಗದಲ್ಲಿ ಕಾಡು ಬೆಳೆಸಲು ಹಣ ಪಾವತಿಸಿದೆ. ಆದರೆ, ಕುದುರೆಮುಖ ಸಂಸ್ಥೆ ಲಕ್ಯಾ ಅಣೆಕಟ್ಟೆಯನ್ನು ಒಂದು ಅಡಿ ಎತ್ತರಿಸಿದೆ ಎನ್ನುವ ಕಾರಣಕ್ಕೆ, ಕೆಲ ಭಾಗದಷ್ಟು ಭೂಮಿಯನ್ನು ಅರಣ್ಯ ಇಲಾಖೆಗೆ ವಾಪಸ್ ಹಸ್ತಾಂತರ ಮಾಡಿಲ್ಲ ಎಂದು ಕೊಕ್ಕೆ ಹಾಕಿದ್ದೀರಿ. ಕೆಲಸ ನಿಲ್ಲಿಸಿ ₹137 ಕೋಟಿ ನಷ್ಟದಲ್ಲಿ ಇದೆ ಆ ಕಂಪನಿ. ಇದೇ ಮಾನದಂಡ ಅನ್ವಯ ಮಾಡುವುದಾದರೆ ಮೇಕೆದಾಟು ಯೋಜನೆಗೆ ಹೇಗೆ ಅನುಮತಿ ಸಿಗುತ್ತದೆ? ಅಲ್ಲಿ ಕಾಡು ನಾಶ ಆಗುವುದಿಲ್ಲವೇ' ಎಂದು ಪ್ರಶ್ನಿಸಿದರು.

'ಒಂದು ಸಭೆ ಕರೆಯಿರಿ. ನಾನು ನಿಮ್ಮ ಅನುಮಾನ ನಿವಾರಿಸುತ್ತೇನೆ. ರಾಜ್ಯಕ್ಕೆ ಲಾಭವಾಗುವ ಯೋಜನೆ ನನೆಗುದಿಗೆ ಬೀಳುವುದು ಬೇಡ' ಎಂದರು.

'ಜಾತಿಗಣತಿ ವರದಿ ಅಂಗೀಕರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಎಚ್. ಕಾಂತರಾಜ ಅವರ ಅವಧಿಯಲ್ಲಿ ನಡೆದಿದ್ದ, ಈಗಾಗಲೇ ಸರ್ಕಾರಕ್ಕೆ ಸಲ್ಲಿಕೆಯಾಗಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ವರದಿಯನ್ನು (ಜಾತಿ ಜನಗಣತಿ) ಅಂಗೀಕರಿಸಿ ಜಾರಿಗೊಳಿಸಬೇಕು' ಎಂದು ಶೋಷಿತ ಸಮುದಾಯಗಳ ಮಹಾ ಒಕ್ಕೂಟ ಆಗ್ರಹಿಸಿದೆ.

ಜಂಟಿ ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಒಕ್ಕೂಟದ ಪ್ರಧಾನ ಸಂಚಾಲಕರ ಕೆ.ಎಂ. ರಾಮಚಂದ್ರಪ್ಪ, ಸಂಚಾಲಕರಾದ ಮಾವಳ್ಳಿ ಶಂಕರ್ ಮತ್ತು ಎನ್. ಅನಂತನಾಯಕ್, 'ದೇವರಾಜು ಅರಸು ಅಭಿವೃದ್ಧಿ ನಿಗಮಕ್ಕೆ ₹ 1,000 ಕೋಟಿ ಅನುದಾನ ನೀಡಬೇಕು. ಎಸ್‌ಸಿ, ಎಸ್‌ಟಿ ಆಯೋಗಕ್ಕೆ ಅಧ್ಯಕ್ಷರು, ಸದಸ್ಯರನ್ನು ನೇಮಿಸಬೇಕು. ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿರುವ ನಿಗಮಗಳಿಗೆ ಕನಿಷ್ಠ ತಲಾ ₹100 ಕೋಟಿ ಅನುದಾನ ನೀಡಬೇಕು' ಎಂದು ಆಗ್ರಹಿಸಿದರು.

'ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ (ಕೆಪಿಎಸ್) ಆಂಗ್ಲ ಮಾಧ್ಯಮ ತರಗತಿ ಆರಂಭಿಸಿರುವುದು ಸ್ವಾಗತಾರ್ಹ. ಈ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ಕ್ರಮ ವಹಿಸಬೇಕು. ಈ ಶಾಲೆಗಳ ವಿರುದ್ಧ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಏಕಪಕ್ಷೀಯ ಹೇಳಿಕೆ ನೀಡಿ, ಭಾಷಾ ಮಾಧ್ಯಮ ಗೊಂದಲ ಸೃಷ್ಟಿಸುವುದನ್ನು ನಿಲ್ಲಿಸಬೇಕು' ಎಂದು ಒತ್ತಾಯಿಸಿದರು.



ಅಪಘಾತ

ಬಿಡದಿ ಹೊರವಲಯದ ಕೇತಗಾನಹಳ್ಳಿ ಸಮೀಪದ ಬೆಂಗಳೂರು–ಮೈಸೂರು ಹೆದ್ದಾರಿ ಬಳಿ ಸಂಭವಿಸಿದ ಅಪಘಾತದಲ್ಲಿ ಕೆಎಸ್‌ಆರ್‌ಟಿಸಿಯ 'ಐರಾವತ' ಬಸ್ ಜಖಂಗೊಂಡಿದೆ. ಬಸ್ಸಿನ ಚಾಲಕ, ನಿರ್ವಾಹಕ ಸೇರಿ 11 ಮಂದಿಗೆ ಗಾಯಗಳಾಗಿವೆ.

ವಿಶ್ವನಾಥ್, ಜಯರಾಮ್‌ಗೆ ಡಾಕ್ಟರೇಟ್

ಬೆಂಗಳೂರು ನಗರ ವಿಶ್ವವಿದ್ಯಾಲಯದ ಮೂರನೇ ಘಟಿಕೋತ್ಸವ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಕೆಟಿಗ ಜಿ.ಆರ್. ವಿಶ್ವನಾಥ್, ಗೋಕುಲ ಶಿಕ್ಷಣ ದತ್ತಿ ಸಂಸ್ಥೆಯ ಅಧ್ಯಕ್ಷ ಎಂ.ಆರ್. ಜಯರಾಮ್ ಅವರಿಗೆ ಬೆಂಗಳೂರು ನಗರ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿದೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕುಲಪತಿ ಲಿಂಗರಾಜ ಗಾಂಧಿ, ಶಿಕ್ಷಣ ಮತ್ತು ಕ್ರೀಡೆಯಲ್ಲಿ ಗಣನೀಯ ಸಾಧನೆ ಮಾಡಿದ ಇಬ್ಬರಿಗೆ ಈ ಬಾರಿ ಡಾಕ್ಟರೇಟ್ ನೀಡಲಾಗಿದೆ. ಜ್ಞಾನಜ್ಯೋತಿ ಸಭಾಂಗಣದಲ್ಲಿ ಜೂನ್ 29ರಂದು ಬೆಳಿಗ್ಗೆ 11.30ಕ್ಕೆ ನಡೆಯುವ ವಿಶ್ವವಿದ್ಯಾಲಯದ ಮೂರನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಗೌರವ ಡಾಕ್ಟರೇಟ್ ಪ್ರದಾನ ಮಾಡುವರು. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ ಅಧ್ಯಕ್ಷ ಟಿ.ಜಿ. ಸೀತಾರಾಮ್ ಘಟಿಕೋತ್ಸವ ಭಾಷಣ ಮಾಡುವರು. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಉಪಸ್ಥಿತರಿರುವರು ಎಂದು ಮಾಹಿತಿ ನೀಡಿದರು.

ವಿಶ್ವವಿದ್ಯಾಲಯದ ಕಾಲೇಜುಗಳಲ್ಲಿ ಒಟ್ಟು 1.40 ಲಕ್ಷ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. 6,424 ಸ್ನಾತಕೋತ್ತರ ವಿದ್ಯಾರ್ಥಿಗಳು, 29,484 ಪದವಿ ವಿದ್ಯಾರ್ಥಿಗಳಿಗೆ ಮೂರನೇ ಘಟಿಕೋತ್ಸವದಲ್ಲಿ ಪದವಿ ಹಾಗೂ ನಾಲ್ವರಿಗೆ ಪಿಎಚ್‌.ಡಿ ಪ್ರದಾನ ಮಾಡಲಾಗುವುದು. ವಿವಿಧ ವಿಭಾಗಗಳ ಒಟ್ಟು 63 ವಿದ್ಯಾರ್ಥಿಗಳು ಚಿನ್ನದ ಪದಕ, ನಗದು ಪುರಸ್ಕಾರಕ್ಕೆ ಪಾತ್ರರಾಗಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕುಲಸಚಿವ ಟಿ.ಜವರೇಗೌಡ, ಪರಿಕ್ಷಾಂಗ ಕುಲಸಚಿವ ಸಿ.ಎಸ್. ಆನಂದ ಕುಮಾರ್, ಹಣಕಾಸು ಅಧಿಕಾರಿ ಎಂ.ವಿಜಯಲಕ್ಷ್ಮಿ ಅವರು ಉಪಸ್ಥಿತರಿದ್ದರು.



ಎಂ.ಆರ್. ಜಯರಾಮ್



ಜಿ.ಆರ್. ವಿಶ್ವನಾಥ್

ಯಶಸ್‌ಗೆ ನಾಲ್ಕು ಚಿನ್ನದ ಪದಕ

ಸ್ನಾತಕೋತ್ತರ ರಸಾಯನ ಶಾಸ್ತ್ರದಲ್ಲಿ ಸೆಂಟ್ರಲ್ ಎಂ.ಯಶಸ್ ನಾಲ್ಕು ಚಿನ್ನದ ಪದಕ ಪಡೆದಿದ್ದಾರೆ. ಬಿ.ಬಿ.ಎನಲ್ಲಿ ಬನಶಂಕರಿ ಕೃಷ್ಣ ಕಾಲೇಜಿನ ಆರ್. ರುತ್ ಮೂರು, ಬಿ.ಕಾಂನಲ್ಲಿ ಆರ್. ಜೆ.ಎಸ್. ಪ್ರಥಮ ದರ್ಜೆ ಕಾಲೇಜಿನ ಎಸ್.ಎಸ್. ಧನ್ಯತಾ, ಎಂ.ಎ. ಫ್ರೆಂಚ್ ಭಾಷಾ ವಿಷಯದಲ್ಲಿ ಸೆಂಟ್ರಲ್ ಕಾಲೇಜಿನ ಮೀನಲ್ ತಿವಾರಿ, ಅಪ್ಲೈಡ್ ಆರ್ಟ್ಸ್‌ನಲ್ಲಿ ಬೆಂಗಳೂರು ದೃಶ್ಯ ಕಲಾ ಶಾಲೆಯ ಬಿ. ಹರ್ಷಿತಾ, ಎಂ.ಬಿ.ಎನಲ್ಲಿ ಆದರ್ಶ ಕಾಲೇಜಿನ ಬಿ. ಸಹನಶ್ರೀ, ಜೀವ ರಸಾಯನ ಶಾಸ್ತ್ರದಲ್ಲಿ ಎಂ.ಎಸ್. ರಾಮಯ್ಯ ಕಾಲೇಜಿನ ಎಚ್.ಪಿ. ಗಗನಶ್ರೀ ಮತ್ತು ಸೂಕ್ಷ್ಮ ಜೀವ ವಿಜ್ಞಾನದಲ್ಲಿ ಬಿ.ಪ್ರಕೃತಿ ತಲಾ ಎರಡು ಪದಕ ಪಡೆದಿದ್ದಾರೆ.

ತಸ್ತೀಕ್ ಹೆಚ್ಚಿಸಲು ಅರ್ಚಕರ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಜರಾಯಿ ಇಲಾಖೆಯ ಅಡಿಯಲ್ಲಿ ಇರುವ 'ಸಿ' ವರ್ಗದ ದೇವಾಲಯಗಳ ತಸ್ತೀಕ್ ಅನ್ನು ₹10 ಸಾವಿರಕ್ಕೆ ಹೆಚ್ಚಿಸಬೇಕು ಎಂದು ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟವು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಮನವಿ ಮಾಡಿದೆ.

ಗ್ರಾಮೀಣ ಪ್ರದೇಶದಲ್ಲಿರುವ 'ಸಿ' ವರ್ಗದ ದೇವಸ್ಥಾನಗಳಿಗೆ ಪೂಜಾ ಸಾಮಗ್ರಿಗಳ ವೆಚ್ಚ ಮತ್ತು ಅರ್ಚಕರ ಗೌರವಧನ ಸೇರಿ ತಸ್ತೀಕ್ ₹ 5000 ನೀಡಲಾಗುತ್ತಿದೆ. ಅದನ್ನು ಹೆಚ್ಚಿಸಬೇಕು. 'ಎ' ಮತ್ತು 'ಬಿ' ವರ್ಗದ ಅರ್ಚಕರ ಮತ್ತು ದೇವಸ್ಥಾನದ ನೌಕರರ ವೇತನಗಳು ಅದರ ಒಟ್ಟು ವಾರ್ಷಿಕ ವರಮಾನದ ಶೇ 35 ಮೀರಬಾರದು ಎಂಬ ಆದೇಶ ಇದೆ. ಅದನ್ನು ಪರಿಷ್ಕರಿಸಿ ಶೇ 50ರವರೆಗೆ ಹೆಚ್ಚಿಸಲು ಅವಕಾಶ ನೀಡಬೇಕು ಎಂದು ಮನವಿಯಲ್ಲಿ ತಿಳಿಸಲಾಗಿದೆ.

ದೇವಸ್ಥಾನಗಳ ನಿರ್ವಹಣೆಗೆ ಪ್ರತ್ಯೇಕ ಪ್ರಾಧಿಕಾರ ಮಾಡುವ ಚಿಂತನೆಯನ್ನು ಸರ್ಕಾರ ಕೈಬಿಡಬೇಕು. ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿಯೇ ದೇವಾಲಯಗಳನ್ನು ಉಳಿಸಿಕೊಳ್ಳಬೇಕು ಎಂದು ಆಗ್ರಹಿಸಲಾಗಿದೆ.

ಒಕ್ಕೂಟದ ಪ್ರಧಾನ ಸಲಹೆಗಾರ ರಾಧಾಕೃಷ್ಣ ಕೆ.ಇ., ಮುಖ್ಯ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಎನ್. ದೀಕ್ಷಿತ್ ಹಾಗೂ ಇತರರು ಈ ನಿಯೋಗದಲ್ಲಿ ಇದ್ದರು.



ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟದ ಪದಾಧಿಕಾರಿಗಳು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಮನವಿ ಸಲ್ಲಿಸಿದರು

ಬಣ್ಣದ ಲೋಕದ ಸಿರಿ


ಸಿರಿ ರವಿಕುಮಾರ್

‘ಸಕುಟುಂಬ ಸಮೇತ’, ‘ಸ್ವಾತಿ ಮುತ್ತಿನ ಮಳೆ ಹನಿಯೇ’ ಚಿತ್ರದಲ್ಲಿನ ನಟನೆ ಮೂಲಕ ಚಂದನವನದಲ್ಲಿ ಗುರುತಿಸಿಕೊಂಡಿರುವ ನಟಿ ಸಿರಿ ರವಿಕುಮಾರ್, ಭಿನ್ನ ಭಿನ್ನ ಪಾತ್ರಗಳನ್ನು ಅರಸುತ್ತಾ ಹೆಜ್ಜೆ ಹಾಕಿದವರು. ಸಿನಿಮಾ ಜೊತೆಗೆ ರಂಗಭೂಮಿಯಲ್ಲಿಯೂ ಸಕ್ರಿಯವಾಗಿರುವ ಸಿರಿ ನಟನೆಯ ‘ಬಿಸಿ– ಬಿಸಿ ಐಸ್‌ಕ್ರೀಂ’ ಸಿನಿಮಾ ಜುಲೈ 5ಕ್ಕೆ ಬಿಡುಗಡೆಯಾಗುತ್ತಿದೆ. ಈ ಹೊಸ್ತಿಲಲ್ಲಿ ಅವರೊಂದಿಗೆ ಮಾತುಕತೆ.

ಅಭಿಲಾಷ್ ಪಿ.ಎಸ್.

- **‘ಪ್ರೇರಣಾ’ ಎಂಬ ಪಾತ್ರ ಸಿರಿ ಮೇಲೆ ಬೀರಿದ ಪರಿಣಾಮ...**

‘ಸ್ವಾತಿ ಮುತ್ತಿನ ಮಳೆ ಹನಿಯೇ’ ಸಿನಿಮಾದಲ್ಲಿನ ಈ ಪಾತ್ರ ನನ್ನ ಮೇಲೆ ಎರಡು ರೀತಿಯ ಪ್ರಭಾವ ಬೀರಿದೆ. ‘ಪ್ರೇರಣಾ’ ಎಂಬ ಪಾತ್ರ ಯಶಸ್ಸಿಗೆ ಹಾಗೂ ವೈಯಕ್ತಿಕ ಬೆಳವಣಿಗೆಗೂ ಕಾರಣವಾಗಿದೆ. ಈ ಸಿನಿಮಾ ನನ್ನ ಸಿನಿಪಯಣದಲ್ಲಿ ಒಂದು ಛಾಪು ಮೂಡಿಸಲು ಸಹಾಯ ಮಾಡಿದೆ. ‘ಪ್ರೇರಣಾ’ ಎಂಬ ಪಾತ್ರದ ಮೇಲೆ ಇಡೀ ಸಿನಿಮಾ ನಿಂತಿತ್ತು. ಚಿತ್ರಕಥೆಯಲ್ಲಿ ಆ ಪಾತ್ರ ದೊಡ್ಡ ಪ್ರಮಾಣದಲ್ಲಿ ವಿಸ್ತರಿಸಿಕೊಂಡಿತ್ತು. ಈ ಪಾತ್ರವನ್ನು ಹೇಗೆ ನಿಭಾಯಿಸುವುದು, ಯಾವ ರೀತಿ ನಟಿಸುವುದು ಎನ್ನುವ ದೊಡ್ಡ ಜವಾಬ್ದಾರಿ ನನ್ನ ಮೇಲಿತ್ತು. ಸಕಾರಾತ್ಮಕವಾಗಿ ಈ ಸಿನಿಮಾ ನನ್ನ ಮೇಲೆ ಪರಿಣಾಮ ಬೀರಿದೆ. ಈ ಹಿಂದೆ ಜನರು ನನ್ನನ್ನು ‘ನೀವು ಆ್ಯಂಕರ್ ಅಲ್ವಾ’ ಎಂದು ಗುರುತು ಹಿಡಿಯುತ್ತಿದ್ದರು. ಇದೀಗ ‘ಸ್ವಾತಿ ಮುತ್ತಿನ ಮಳೆ ಹನಿಯೇ ಸಿನಿಮಾದಲ್ಲಿ ನಟಿಸಿದ್ರಲ್ವಾ?’ ಎಂದು ಕೇಳುತ್ತಾರೆ.

ಈ ಸಿನಿಮಾದ ಸ್ಕ್ರಿಪ್ಟ್ ಓದುತ್ತಿರುವಾಗ ‘ನಾನೇ ಈ ಪಾತ್ರ ಮಾಡುತ್ತಿದ್ದೇನೆಯೇ?’ ಎಂದು ರಾಜ್ ಅವರನ್ನು ಕೇಳಿದ್ದೆ. ‘ಪ್ರೇರಣಾ’ ಎಂಬ ಪಾತ್ರದ ಬರವಣಿಗೆ ಅಷ್ಟು ಸದೃಢವಾಗಿತ್ತು. ಏನೂ ಹೇಳದೆಯೇ, ದುಃಖ ತೋರ್ಪಡಿಸದೇ ಎರಡು ರೀತಿಯ ಜೀವನವನ್ನು ‘ಪ್ರೇರಣಾ’ ನಡೆಸುತ್ತಿರುತ್ತಾಳೆ. ಅವಳಲ್ಲಿ ಆಗುವ ಸಣ್ಣ ಬದಲಾವಣೆಯ ಪರಿಣಾಮ ಹಿರಿದು. ಹೀಗಾಗಿ ‘ಪ್ರೇರಣಾ’ ಆ ಸಿನಿಮಾ ಹೀರೊ ಎಂದುಕೊಳ್ಳುತ್ತೇನೆ. ಜೊತೆಗೆ ಕಥೆಯೂ ಈ ಸಿನಿಮಾ ನಾಯಕ.

- **‘ಬಿಸಿ ಬಿಸಿ ಐಸ್‌ಕ್ರೀಂ’ನಲ್ಲಿ ನಿಮ್ಮ ಪಾತ್ರವೇನು?**

ಒಂಟಿ ಕ್ಯಾಬ್ ಚಾಲಕನ ಜೀವನದಲ್ಲಿ ಆಗಿರುವ ನೋವಿಗೆ ಒಂದು ರೀತಿ ಮುಲಾಮು ಹಚ್ಚಲು ಬರುವ ಪಾತ್ರವಿದು. ಕುಗ್ಗಿದ ಆತನ ಜೀವನವನ್ನು ಕೊಂಚ ನವಿರು ಮಾಡುವಾಕೆ. ಆಕೆ ಒಂದು ರೀತಿ ಮಿಸ್ಟೀರಿಯಸ್ ಗರ್ಲ್. ಡಾರ್ಕ್ ಕಾಮಿಡಿ ರೊಮ್ಯಾನ್ಸ್ ಕಥಾಹಂದರದ ಸಿನಿಮಾವಿದು. ಮಿಸ್ಟೀರಿಯಸ್ ಹುಡುಗಿ ಒಬ್ಬ ಕ್ಯಾಬ್ ಚಾಲಕನ ಜೀವನದೊಳಗೆ ಬಂದಾಗ ಏನಾಗುತ್ತದೆ, ಅವನ ಜೀವನದಲ್ಲಿ ಆಗುವ ಬದಲಾವಣೆಗಳೇ ಸಿನಿಮಾದ ಕಥೆ. ಈಕೆ ಏತಕ್ಕಾಗಿ ಮಿಸ್ಟೀರಿಯಸ್ ಹುಡುಗಿ ಎನ್ನುವುದನ್ನು ಪ್ರೇಕ್ಷಕರು ಸಿನಿಮಾದಲ್ಲೇ ನೋಡಬೇಕು. ನಿಜ ಜೀವನದ ವಾಸ್ತವವನ್ನೂ ತೋರಿಸಲಾಗಿದೆ. ಜೊತೆಗೆ ಹಾಸ್ಯದ ಮಿಶ್ರಣವೂ ಸಿನಿಮಾದಲ್ಲಿದೆ.


- **ಸಿನಿಮಾ ಜೊತೆಗೆ ಸಿರಿ ರಂಗಭೂಮಿ, ಮಾಡೆಲಿಂಗ್‌ನತ್ತ ಹೆಚ್ಚು ವಾಲಿದಂತಿದೆ...**

Sd/- **DR. M R VENKATESH** (PRESIDENT)

Subject to our report of even date
M/s Babu and Badat, Chartered Accountants,
Firm Regn. No. 321009E

Sd/- **(K.Chandrababu),** Partner
Membership No. 29130
UDIN: 24029130BKEDJV7010

"ಲೆಕ್ಕಪರಿಶೋಧನಾ ಪ್ರಮಾಣಪತ್ರ"

ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ನಂ.5, 9ನೇ ಅಡ್ಡರಸ್ತೆ ಎನ್.ಆರ್.ಕಾಲೋನಿ, ಬೆಂಗಳೂರು-19. ಪ್ರಧಾನ ಕಛೇರಿ ಮತ್ತು 12 ಶಾಖೆಗಳ 2023-24 ನೇ ಸಾಲಿನ ಲೆಕ್ಕಪರಿಶೋಧನೆಯನ್ನು ನಾವು ಪೂರೈಸಿದ್ದೇವೆ. ನಮ್ಮ ಅರಿವಿಗೆ ಮತ್ತು ನಂಬಿಕೆಗೆ ಅನುಸಾರವಾಗಿ ಲೆಕ್ಕಪರಿಶೋಧನೆಗೆ ಅಗತ್ಯವಾದ ಮಾಹಿತಿ ಮತ್ತು ವಿವರಗಳನ್ನು ಪಡೆದು ನಮ್ಮ ಅಭಿಪ್ರಾಯ ಮತ್ತು ತಿಳುವಳಿಕೆಯಂತೆ ನಮಗೆ ನೀಡಿದ ಮಾಹಿತಿ ಮತ್ತು ವಿವರಗಳ ಪ್ರಕಾರ ಈ ಪ್ರಮಾಣ ಪತ್ರಕ್ಕೆ ಲಗತ್ತಿಸಿರುವ ನಮ್ಮ ವಿವರವಾದ ಲೆಕ್ಕಪರಿಶೋಧನಾ ವರದಿಯ ಷರಾಗಳಿಗೆ ಮತ್ತು ನಿಬಂಧನೆಗಳಿಗೊಳಪಟ್ಟು ದಿನಾಂಕ: 31-03-2024 ರಲ್ಲಿದ್ದಂತೆ ಬ್ಯಾಂಕಿನ ಆಸ್ತಿ-ಜವಾಬ್ದಾರಿ ತ:ಖ್ತೆ ಲಾಭ-ನಷ್ಟ ತ:ಖ್ತೆ ಮತ್ತು ಜಮಾ-ಖರ್ಚು ತ:ಖ್ತೆಗಳು ಬ್ಯಾಂಕಿನ ನೈಜ ಮತ್ತು ನ್ಯಾಯೋಚಿತವಾದ ಆರ್ಥಿಕ ಅವಲೋಕನವನ್ನು ನೀಡುತ್ತಿದೆ.

ದಿನಾಂಕ: 24-06-2024
ಸ್ಥಳ: ಬೆಂಗಳೂರು

ಮೆ: ಬಾಬು ಅಂಡ್ ಬಡತ್,
ಸನ್ನದು ಲೆಕ್ಕಪರಿಶೋಧಕರು
ಸಂಸ್ಥೆಯ ನೋಂದಣಿ ಸಂಖ್ಯೆ: 321009ಇ

ಸಹಿ/- (ಚಂದ್ರಬಾಬು ಕೆ) ಪಾಲುದಾರರು,
ಸದಸ್ಯತ್ವದ ಸಂಖ್ಯೆ :029130
UDIN:24029130BKEDJV7010

515ನೇ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮತ

ಕೆಂಪೇಗೌಡರ ಜಾತ್ಯತೀತ ತತ್ವ ಮಾದರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಂದು ಜಾತಿಗೆ ಸೀಮಿತವಾಗದೇ ಎಲ್ಲ ಸಮುದಾಯಗಳ ಅಭಿವೃದ್ಧಿಗೆ ಕೆಂಪೇಗೌಡರು ಶ್ರಮಿಸಿದ್ದರು. ಅಂಥ ಜಾತ್ಯತೀತ ತತ್ವದಲ್ಲಿ ಜನರು ಬದುಕುವ ಮೂಲಕ ಕೆಂಪೇಗೌಡರನ್ನು ಸ್ಮರಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣ ಅಭಿವೃದ್ಧಿ ಪ್ರಾಧಿಕಾರ, ಬಿಬಿಎಂಪಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ 515ನೇ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನದಿಗಳಿಲ್ಲದ ಬೆಂಗಳೂರಿನ ಸುತ್ತಮುತ್ತ ಕೆರೆಗಳನ್ನು ಕಟ್ಟಿಸಿದರು. ಎಲ್ಲ ವಿಧದ ವ್ಯಾಪಾರ ನಡೆಯಬೇಕು ಎಂದು ಪೇಟೆಗಳನ್ನು ನಿರ್ಮಿಸಿದರು. ಅವರ ಆಡಳಿತ ನೋಡಿದರೆ ಜಾತಿ, ಧರ್ಮಕ್ಕೆ ಸೀಮಿತವಾಗದೇ ಸಮಾಜಮುಖಿ ಆಗಿರುವುದು ಗೊತ್ತಾಗುತ್ತದೆ ಎಂದು ವಿವರಿಸಿದರು.

ಡಿಸಿಎಂ ಡಿ.ಕೆ. ಶಿವಕುಮಾರ್ ಮಾತನಾಡಿ, 'ಕೆಂಪೇಗೌಡರನ್ನು ಜಾತಿಗೆ ಸೀಮಿತ ಮಾಡಬಾರದು. ವಿಶ್ವಮಾನ್ಯ ಬೆಂಗಳೂರನ್ನು ಕಟ್ಟಿದ ಅವರು ಎಲ್ಲ ಜಾತಿ, ಧರ್ಮಕ್ಕೂ ನಾಡಪ್ರಭು' ಎಂದು ಬಣ್ಣಿಸಿದರು.

ಕೆಂಪೇಗೌಡರ ಬಗ್ಗೆ ಮಕ್ಕಳೂ ತಿಳಿದುಕೊಳ್ಳಬೇಕು ಎಂಬ ಕಾರಣಕ್ಕೆ ಬಿಬಿಎಂಪಿ ವ್ಯಾಪ್ತಿಯ ಎಲ್ಲ ಶಾಲೆಗಳಲ್ಲಿ ಚರ್ಚಾಸ್ಪರ್ಧೆ ಏರ್ಪಡಿಸಲು ಅನುದಾನ ನೀಡಲಾಗಿದೆ. ಸರ್ಕಾರವು 25ಕ್ಕೂ ಅಧಿಕ ಮಹನೀಯರ ಜಯಂತಿ ಆಚರಿಸುತ್ತಿದೆ. ಅದಕ್ಕೆ ನೀಡುತ್ತಿರುವ ಹಣ ಕಡಿಮೆ ಇದೆ. ಹಣದ ಕೊರತೆ ತಪ್ಪಿಸಲು ಬಿಬಿಎಂಪಿ ವ್ಯಾಪ್ತಿಯ ಪ್ರತಿ ತಾಲ್ಲೂಕಿಗೆ ₹ 1 ಲಕ್ಷ ಅನುದಾನ ನೀಡಲಾಗುತ್ತಿದೆ' ಎಂದು ವಿವರಿಸಿದರು.

ಸುಮನಹಳ್ಳಿ ರಸ್ತೆ ಬಳಿಯ 5 ಎಕರೆ ಜಾಗದಲ್ಲಿ ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರದ ಕಚೇರಿಯನ್ನು ಅತ್ಯುತ್ತಮ ಸ್ವರೂಪದಲ್ಲಿ ನಿರ್ಮಾಣ ಮಾಡಲಾಗುವುದು. ಆವತಿಯಲ್ಲಿ 10 ಎಕರೆ ವಿಸ್ತೀರ್ಣದ ಜಾಗದಲ್ಲಿ ಅಧ್ಯಯನ ಕೇಂದ್ರ ಸ್ಥಾಪಿಸಲಾಗುವುದು ಎಂದು ಹೇಳಿದರು.

ಬೆಂಗಳೂರು ಒಡೆಯಬೇಡಿ: 'ಬೆಂಗಳೂರು ನಗರವನ್ನು ಭಾಗ ಮಾಡುವ ಪ್ರಯತ್ನ ಹಿಂದೆ ನಡೆದಿತ್ತು. ಹೋರಾಟದ ಮೂಲಕ ಆಗ ತಡೆಯಲಾಗಿತ್ತು. ಈಗ ಮತ್ತೆ ಭಾಗ ಮಾಡುವ ಕೂಗು ಎದ್ದಿದೆ. ಬೆಂಗಳೂರನ್ನು ಭಾಗ ಮಾಡಲು ಯಾರೂ ಮುಂದಾಗಬಾರದು. ನಗರ ಒಂದಾಗಿ ಉಳಿಯಬೇಕು' ಎಂದು ವಿಶ್ವ ಒಕ್ಕಲಿಗರ ಸಂಸ್ಥಾನದ ಚಂದ್ರಶೇಖರ ಸ್ವಾಮೀಜಿ ಆಗ್ರಹಿಸಿದರು.

ಇಬ್ಭಾಗ ಮಾಡಬೇಕು ಎಂದಿದ್ದರೆ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಎಂದು ಮಾಡಿ. ಆಗ ಉತ್ತರ ಕರ್ನಾಟಕ ಅಭಿವೃದ್ಧಿ ಆಗುತ್ತದೆ. ಈಗ ಉತ್ತರ ಕರ್ನಾಟಕದವರು ಬೆಂಗಳೂರು ಸೇರಿರುವುದರಿಂದ ಆ ಭಾಗದಲ್ಲಿ ಅಭಿವೃದ್ಧಿ ಆಗಿಲ್ಲ ಎಂದು ತಿಳಿಸಿದರು.



ನಗರದಲ್ಲಿ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ 515ನೇ ಜಯಂತ್ಯುತ್ಸವದಲ್ಲಿ ನಾಡಪ್ರಭು ಕೆಂಪೇಗೌಡ ಪ್ರಶಸ್ತಿಯನ್ನು ಗಾಂಧಿಭವನದ ಪರವಾಗಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಉಪಾಧ್ಯಕ್ಷ ಎನ್‌.ಆರ್‌. ವಿಶುಕುಮಾರ್, ಅಧ್ಯಕ್ಷ ವೂಡೇ ಪಿ. ಕೃಷ್ಣ, ಬೆಂಗಳೂರು ಸೈನ್ಸ್ ಫೋರಂ ಪರವಾಗಿ ಕಾರ್ಯದರ್ಶಿ ವಿ. ವೆಂಕಟಶಿವಾರೆಡ್ಡಿ, ಅಧ್ಯಕ್ಷ ಎಚ್‌.ಎನ್‌. ಸುಬ್ರಹ್ಮಣ್ಯ ಮತ್ತು ಸುಮಂಗಲಿ ಸೇವಾ ಆಶ್ರಮದ ಪರವಾಗಿ ಅಧ್ಯಕ್ಷೆ ಎಸ್‌.ಜಿ. ಸುಶೀಲಮ್ಮ, ಕಾರ್ಯದರ್ಶಿ ಎಂ. ಕಾಂತಮ್ಮ ಸ್ವೀಕರಿಸಿದರು. ಪ್ರಶಸ್ತಿ ಮೊತ್ತ ₹5 ಲಕ್ಷ. ಸಚಿವರಾದ ಕೃಷ್ಣ ಬೈರೇಗೌಡ, ಶಿವರಾಜ್ ತಂಗಡಗಿ, ಶಾಸಕ ಸಲೀಮ್ ಅಹ್ಮದ್, ವಿಶ್ವ ಒಕ್ಕಲಿಗ ಸಂಸ್ಥಾನದ ಚಂದ್ರಶೇಖರ ಸ್ವಾಮೀಜಿ, ಸ್ಫಟಿಕಪುರಿ ಮಠದ ನಂಜಾವಧೂತ ಸ್ವಾಮೀಜಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಆದಿಚುಂಚನಗಿರಿ ನಿರ್ಮಲಾನಂದನಾಥ ಸ್ವಾಮೀಜಿ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜ್, ಶಾಸಕರಾದ ರಿಜ್ವಾನ್ ಅರ್ಷದ್, ಎಸ್‌.ಆರ್‌.ವಿಶ್ವನಾಥ್ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಮುಂದಿನ ಬಾರಿ ಹೆಸರು ಬಿಡಲ್ಲ; ಡಿ.ಕೆ.ಶಿವಕುಮಾರ್ ಭರವಸೆ

ನಾಡಪ್ರಭು ಕೆಂಪೇಗೌಡರ ಜಯಂತ್ಯುತ್ಸವದ ಆಹ್ವಾನ ಪತ್ರಿಕೆಯಲ್ಲಿ ಕೆಲವರ ಹೆಸರು ಬಿಟ್ಟುಹೋಗಿದೆ. ಇದು ಉದ್ದೇಶಪೂರ್ವಕವಾಗಿ ಆಗಿರುವುದಲ್ಲ. ಅವರ ಹೆಸರನ್ನು ಮುಂದಿನ ಬಾರಿ ಸೇರಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಸ್ಪಷ್ಟನೆ ನೀಡಿದರು.

ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಶೋಭಾ ಕರಂದ್ಲಾಜೆ, ವಿ. ಸೋಮಣ್ಣ ಹೆಸರಿದ್ದರೂ ಎಚ್‌.ಡಿ. ಕುಮಾರಸ್ವಾಮಿ ಹೆಸರು ಹಾಕಿರಲಿಲ್ಲ. ಅಲ್ಲದೇ ಒಕ್ಕಲಿಗ ಸಮಾಜದ ಹಿರಿಯರಾದ ದೇವೇಗೌಡರ ಹೆಸರೂ ಇಲ್ಲ ಎಂದು ಒಕ್ಕಲಿಗರ ಸಮಾಜದ ಕೆಲವರು ಬುಧವಾರ ಆಕ್ಷೇಪ ವ್ಯಕ್ತಪಡಿಸಿದ್ದರು.

ಲೋಪ: 'ಅಧಿಕಾರಿಗಳು ಶಿಷ್ಟಾಚಾರ ಅನುಸರಿಸಿದ್ದಾರೆ. ದೇವೇಗೌಡರು ಹಾಸನ ಜಿಲ್ಲೆ ವ್ಯಾಪ್ತಿಗೆ ಸೇರಿದವರು. ಕುಮಾರಸ್ವಾಮಿ ಮಂಡ್ಯ ಸಂಸದರು. ನಿರ್ಮಲಾ ಸೀತಾರಾಮನ್ ಬೆಂಗಳೂರಿನಿಂದ ಆಯ್ಕೆ ಆಗಿರುವುದರಿಂದ ಅವರ ಹೆಸರು ಸೇರಿಸಲಾಗಿದೆ. ನಾವು ಯಾರಿಗೂ ಅಗೌರವ ತೋರಿಲ್ಲ. ದೇವೇಗೌಡ–ಕುಮಾರಸ್ವಾಮಿ ಹೆಸರು ಹಾಕಬೇಕಿತ್ತು. ಲೋಪವಾಗಿದೆ, ಮುಂದೆ ಸರಿಪಡಿಸುತ್ತೇವೆ' ಎಂದು ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿದರು.

'ಬಿಜಿನೆಸ್ ಕಾರಿಡಾರ್'

ಪೆರಿಫೆರಲ್ ರಿಂಗ್ ರಸ್ತೆ (ಪಿಆರ್‌ಆರ್) ಕಾರ್ಯರೂಪಕ್ಕೆ ಬಾರದೆ ನಿಂತುಹೋಗಿತ್ತು. ಏಳೆಂಟು ಬಾರಿ ಟೆಂಡರ್ ಕರೆದರೂ ಯಾರೂ ಭಾಗವಹಿಸಿರಲಿಲ್ಲ. ಈಗ ಬಿಡಿಎ ಮೂಲಕ ಇದಕ್ಕೆ ಹೊಸ ರೂಪ ನೀಡಲಾಗಿದೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

'ಇದನ್ನು ಕ್ಯಾಬಿನೆಟ್ ಮುಂದೆ ಇಟ್ಟು ಬಿಜಿನೆಸ್ ಕಾರಿಡಾರ್ ಎಂದು ಪರಿವರ್ತನೆ ಮಾಡಲಾಗುವುದು. ಸಂಚಾರ ದಟ್ಟಣೆ ನಿವಾರಣೆಗೆ 150 ಕಿ.ಮೀ.ನಷ್ಟು ಮೇಲ್ಸೇತುವೆಗಳನ್ನು ನಿರ್ಮಿಸಿ ಸಿಗ್ನಲ್ ಫ್ರೀ ಕಾರಿಡಾರ್ ಮಾಡಲಾಗುವುದು. ಸುರಂಗ ಮಾರ್ಗಗಳನ್ನು ನಿರ್ಮಿಸುವ ಯೋಜನೆ ಕೂಡ ಇದೆ' ಎಂದು ವಿವರಿಸಿದರು.

ಬೆಳ್ಳಿ ರಥದಲ್ಲಿ ಮೆರವಣಿಗೆ

ಯಲಹಂಕ: ನಾಡಪ್ರಭು ಕೆಂಪೇಗೌಡರ ಜಯಂತಿ ಪ್ರಯುಕ್ತ ಮಿನಿ ವಿಧಾನಸೌಧದ ಮುಂಭಾಗದಲ್ಲಿರುವ ಕೇಂಪೇಗೌಡರ ಪ್ರತಿಮೆಗೆ ಶಾಸಕ ಎಸ್‌.ಆರ್. ವಿಶ್ವನಾಥ್ ಮಾಲಾರ್ಪಣೆ ಮಾಡಿದರು.

'ಬೆಂಗಳೂರಿನ ಹೆಸರಿನಲ್ಲಿ ಇಂದು ನಾವು ನಮ್ಮ ಕುಟುಂಬಗಳನ್ನು ಪೋಷಣೆ ಮಾಡಿಕೊಂಡು ವ್ಯಾಪಾರ ಮತ್ತು ವ್ಯವಹಾರಗಳನ್ನು ಮಾಡುತ್ತಿರುವುದಕ್ಕೆ ನಾಡಪ್ರಭು ಕೆಂಪೇಗೌಡರು ಮೂಲ ಕಾರಣಕರ್ತರು' ಎಂದು ಶಾಸಕರು ಸ್ಮರಿಸಿದರು.

ಕೆಂಪೇಗೌಡರ ಪ್ರತಿಮೆಯನ್ನು ಬೆಳ್ಳಿರಥದಲ್ಲಿ ಇಟ್ಟು, ಮಿನಿವಿಧಾನ ಸೌಧದಿಂದ ಪೊಲೀಸ್ ಠಾಣೆ ವೃತ್ತ, ಸಂತೆ ವೃತ್ತದ ಮೂಲಕ ಕೋಗಿಲು ವೃತ್ತದವರೆಗೆ ಮೆರವಣಿಗೆ ಮಾಡಲಾಯಿತು.

ಸುದ್ದಿ 2 ನಿಮಿಷ

'ದಕ್ಷಿಣ ಭಾರತದ ಸಾಂಸ್ಕೃತಿಕ ನಾಯಕ'

ದಾಬಸ್‌ಪೇಟೆ: ಕೆಂಪೇಗೌಡರು ದಕ್ಷಿಣ ಭಾರತದ ಸಾಂಸ್ಕೃತಿಕ ನಾಯಕರು ಎಂದು ರಾಜ್ಯ ಒಕ್ಕಲಿಗರ ಜಾಗೃತಿ ಸಂಘದ ಅಧ್ಯಕ್ಷ ಗಂಗರುದ್ರಯ್ಯ ತಿಳಿಸಿದರು.

ದಾಬಸ್ ಪೇಟೆ ಪಟ್ಟಣದ ಶಿವಗಂಗೆ ರಸ್ತೆಯ ಕೆಂಪೇಗೌಡ ವೃತ್ತದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕೆಂಪೇಗೌಡರ ಜಯಂತಿ ಕಾರ್ಯಕ್ರಮದಲ್ಲಿ ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದರು.

ಒಕ್ಕಲಿಗ ನಾಯಕ ಬಿ.ಎಂ. ಮೋಹನ್ ಕುಮಾರ ಮಾತನಾಡಿ, 'ಕೆಂಪೇಗೌಡರು ದಕ್ಷ ಹಾಗೂ ದೂರದೃಷ್ಟಿಯುಳ್ಳ ಆಡಳಿತಗಾರನಾಗಿದ್ದು, ಕೆರೆಗಳ ನಿರ್ಮಾಣಗಳ ಮೂಲಕ ಕೃಷಿ ಅಭಿವೃದ್ಧಿ ಹಾಗೂ ಅಂತರ್ಜಲದ ವೃದ್ಧಿಗೆ ಶ್ರಮಿಸಿದವರು. ಪ್ರಕೃತಿ ಸಮತೋಲನ, ನಿಸರ್ಗ ಸಂರಕ್ಷಣೆ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು' ಎಂದು ಹೇಳಿದರು.

ಕಾರ್ಯಾಧ್ಯಕ್ಷ ಬಿ.ಎನ್. ಮನೋಹರ್, ಎಸ್‌.ಟಿ. ಸಿದ್ದರಾಜು, ಬಿ.ಪಿ. ಶ್ರೀನಿವಾಸಮೂರ್ತಿ, ಬಿ.ಎಂ. ಶ್ರೀನಿವಾಸ, ನಾಗರಾಜು, ತಿಮ್ಮರಾಜು, ಹನುಮಂತರಾಜು, ಬಿ.ಮಂಜುನಾಥ, ದೇವರಾಜು, ನರಸಿಂಹಮೂರ್ತಿ, ಮಧುಸೂದನ್, ತಿಮ್ಮೇಗೌಡ, ನಾಗವವೇಣಿ, ರಾಘವೇಂದ್ರ, ನಳಿನಾ, ಶಿವರಾಮಯ್ಯ, ಭಾಗವಹಿಸಿದ್ದರು.

ರಜೆಗಾಗಿ ಮುಖ್ಯಮಂತ್ರಿಗೆ ಪತ್ರ



ಬೆಂಗಳೂರು: ಚಾಮರಾಜಪೇಟೆಯ ಆಜಾದ್ ನಗರದಲ್ಲಿ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ 515ನೇ ಜಯಂತಿ ಕಾರ್ಯಕ್ರಮವನ್ನು ಸಚಿವ ಜಮೀರ್ ಅಹಮದ್ ಖಾನ್ ಉದ್ಘಾಟಿಸಿದರು.

ಕನಕ ಜಯಂತಿ, ವಾಲ್ಮೀಕಿ ಜಯಂತಿ, ಬಸವ ಜಯಂತಿಗೆ ಸರ್ಕಾರಿ ರಜೆ ನೀಡಿದಂತೆ ಕೆಂಪೇಗೌಡರ ಜಯಂತಿಗೂ ಸರ್ಕಾರಿ ರಜೆ ಘೋಷಿಸಬೇಕು. ಈ ಕುರಿತು ನಾನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ಪತ್ರ ಬರೆಯುತ್ತೇನೆ ಎಂದು ಜಮೀರ್ ಅಹಮದ್ ಖಾನ್ ತಿಳಿಸಿದರು.

ಕೆಎಂಡಿಸಿ ಅಧ್ಯಕ್ಷ ಅಲ್ತಾಫ್ ಖಾನ್, ಮುಖಂಡರಾದ ಡಿ.ಸಿ. ರಮೇಶ್, ಬಿ.ಟಿ. ಶ್ರೀನಿವಾಸ ಮೂರ್ತಿ, ಅಪ್ಪೋಡ ಚಂದ್ರಶೇಖರ್, ಸೋಮಶೇಖರ್, ಗೋಪಾಲಣ್ಣ, ನಾರಾಯಣ, ಗೌಸಿ, ವಿನಾಯಕ್, ಸರ್ವರ್ ಬೇಗ್, ರವಿ, ಮಾಧವ್ ಉಪಸ್ಥಿತರಿದ್ದರು.

ಜಯನಗರದಲ್ಲಿ ಜಯಂತಿ: ಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ಪೌರಕಾರ್ಮಿಕರೊಂದಿಗೆ ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಸಿಹಿ ಹಂಚಿ ಆಚರಿಸಲಾಯಿತು.



ನಗರದ ಗಾಂಧಿ ಭವನದಲ್ಲಿ ಗುರುವಾರ ನಡೆದ ಬಿ.ಆರ್‌. ಮಮತಾ–60' ಅಭಿನಂದನಾ ಕಾರ್ಯಕ್ರಮದಲ್ಲಿ ಐಎಎಸ್ ಅಧಿಕಾರಿ ಬಿ.ಆರ್‌. ಮಮತಾ ಅವರನ್ನು ಅಭಿನಂದಿಸಲಾಯಿತು. ಕರ್ನಾಟಕ ಸರ್ಕಾರದ ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಂ.ಆರ್‌. ಶ್ರೀನಿವಾಸಮೂರ್ತಿ, ವಾರ್ತಾ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಎಚ್‌.ಬಿ.ದಿನೇಶ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ, ನಿವೃತ್ತ ಪ್ರಧಾನ ಕಾರ್ಯದರ್ಶಿ ಎಂ.ಕೆ. ಶಂಕರಲಿಂಗೇಗೌಡ ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ

'ನಾಡಪ್ರಭುವಿನ ಆದರ್ಶ ಪಾಲಿಸಿ'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡರ ಆದರ್ಶ, ತತ್ವ, ಸಂಸ್ಕೃತಿ, ಪರಂಪರೆಯನ್ನು ಉಳಿಸಿ, ಬೆಳೆಸುವ ಕೆಲಸವನ್ನು ಎಲ್ಲರೂ ಮಾಡಬೇಕಾಗಿದೆ' ಎಂದು ಬಿಜೆಪಿ ಮುಖಂಡ ಎನ್‌.ಸಿ. ಕುಮಾರ್ ತಿಳಿಸಿದರು.

ನಾಗದೇವನಹಳ್ಳಿಯಲ್ಲಿ ಹಮ್ಮಿಕೊಂಡಿದ್ದ ನಾಡಪ್ರಭುವಿನ 515ನೇ ಜಯಂತಿ ಕಾರ್ಯಕ್ರಮದಲ್ಲಿ ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಅನ್ನದಾನಕ್ಕೆ ಚಾಲನೆ ನೀಡಿದ ಅವರು ಮಾತನಾಡಿದರು.

'ಕೆಂಪೇಗೌಡರು, ಎಲ್ಲ ವರ್ಗದ. ಧರ್ಮದವರು ವ್ಯಾಪಾರ ವಹಿವಾಟು ನಡೆಸಲು ಬೆಂಗಳೂರಿನಲ್ಲಿ ಪೇಟೆಗಳನ್ನು ನಿರ್ಮಿಸಿದರು. ನೆಮ್ಮದಿ, ಸಹಬಾಳ್ವೆಯ ಮಹತ್ವ ಸಾರಿದವರು. ಪ್ರಕೃತಿ, ಸಂಸ್ಕೃತಿ, ಭಾಷೆಯ ರಕ್ಷಕರಾಗಿ, ನಾಡಿನ ಅಭಿವೃದ್ಧಿಗಾಗಿ ದುಡಿದವರು' ಎಂದು ಸ್ಮರಿಸಿದರು.



ನಾಗದೇವನಹಳ್ಳಿಯಲ್ಲಿ ಹಮ್ಮಿಕೊಂಡಿದ್ದ ಜಯಂತಿ ಕಾರ್ಯಕ್ರಮದಲ್ಲಿ ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.

ಕೆಂಪೇಗೌಡ ಯುವಶಕ್ತಿ ವೇದಿಕೆ ಅಧ್ಯಕ್ಷ ಬಿ.ಆರ್‌. ಮಹೇಶ್, ಜಯ ಕರ್ನಾಟಕ ಯಶವಂತಪುರ ಕ್ಷೇತ್ರದ ಅಧ್ಯಕ್ಷ ವಿಜಯ ಕುಮಾರ್, ನಿವೃತ್ತ ಪೊಲೀಸ್ ಅಧಿಕಾರಿ ಕುಮಾರಸ್ವಾಮಿ, ಚಂದ್ರಶೇಖರ್, ವೆಂಕಟೇಶಪ್ಪ, ಚಂದ್ರಕಲಾ, ಜಿ.ಎಂ.ಅನಿತಾ, ಜ್ಯೋತಿ ಗೌಡ, ನಾಗಲಕ್ಷ್ಮಿ, ಈರಣ್ಣ, ಆಟೊ ಪುಟ್ಟೇಗೌಡ, ಕನಕಪುರ ಗೋವಿಂದಪ್ಪ, ಶ್ರೀನಿವಾಸಗೌಡ, ಬೋರೇಗೌಡ, ರಕ್ಷಿತ್ ಇದ್ದರು.

'ಹಸಿರು ಬೆಂಗಳೂರು ಉಳಿಸಬೇಕಿದೆ'

'ನಾಡಪ್ರಭು ಕೆಂಪೇಗೌಡರು 500 ವರ್ಷಗಳ ಹಿಂದೆ ಬೆಂಗಳೂರು ನಗರದಲ್ಲಿ ಕೆರೆ, ಕುಂಟೆ, ವಿವಿಧ ಪೇಟೆಗಳನ್ನು ನಿರ್ಮಿಸಿ ಸರ್ವಜನಾಂಗದ ಅಭಿವೃದ್ಧಿ, ಏಳಿಗೆಗಾಗಿ ಶ್ರಮಿಸಿದ್ದರು' ಎಂದು ಕಾಂಗ್ರೆಸ್ ಮುಖಂಡ ಬಿ.ಆರ್. ಶಿವಮಾದಯ್ಯ ಸ್ಮರಿಸಿದರು.

ಪಟ್ಟಣಗೆರೆ ಸಮೀಪದ ಕೃಷ್ಣ ಗಾರ್ಡನ್‌ನಲ್ಲಿ ಕೆಂಪೇಗೌಡ ಸಂಘದ ವತಿಯಿಂದ ನಡೆದ ನಾಡಪ್ರಭು ಕೆಂಪೇಗೌಡರ ಜಯಂತಿ ಕಾರ್ಯಕ್ರಮ ದಲ್ಲಿ ಮಾತನಾಡಿದ ಅವರು. ಕೆಂಪೇಗೌಡರ ಅವಧಿಯಲ್ಲಿದ್ದ ಹಸಿರು ನಗರ, ಕೆರೆ, ಕುಂಟೆಗಳನ್ನು ಉಳಿಸಬೇಕಾಗಿದೆ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಮೃತ್ ಗೌಡ, ಕೆಂಪೇಗೌಡ ಸಂಘದ ಅಧ್ಯಕ್ಷ ಲಿಂಗೇಗೌಡ, ಖಜಾಂಚಿ ಅರುಣ್ ಕುಮಾರ್, ಎ.ಟಿ. ವೆಂಕಟೇಶ್, ಮಾರುತಿ ಇದ್ದರು.



ನವದೆಹಲಿಯ ಕರ್ನಾಟಕ ಭವನದಲ್ಲಿ ಕೆಂಪೇಗೌಡ ಜಯಂತಿ ಅಂಗವಾಗಿ ಕೇಂದ್ರ ಸಚಿವರಾದ ಎಚ್‌.ಡಿ. ಕುಮಾರಸ್ವಾಮಿ ಹಾಗೂ ವಿ.ಸೋಮಣ್ಣ ಅವರು ನಾಡಪ್ರಭು ಕೆಂಪೇಗೌಡ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು



ನಾಗವಾರ ಮುಖ್ಯರಸ್ತೆಯ ಗ್ಲಾಸ್ ಫ್ಯಾಕ್ಟರಿ ಬಳಿ ನಡೆಯುತ್ತಿರುವ ಮೆಟ್ರೊ ಸುರಂಗ ಕೆಲಸದ ವೇಳೆ ರಸ್ತೆ ಕುಸಿದಿತ್ತು. ಬಳಿಕ ಬಿಎಂಆರ್‌ಸಿಎಲ್ ಸಿಬ್ಬಂದಿಯು ಗುಂಡಿಯನ್ನು ಮುಚ್ಚಿದರು

ಮೆಟ್ರೊ ಕಾಮಗಾರಿ: ಕುಸಿದ ರಸ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ಗುಲಾಬಿ ಮಾರ್ಗದ ಕೆ.ಜಿ. ಹಳ್ಳಿ ಮತ್ತು ನಾಗವಾರ ನಡುವಿನ 'ತುಂಗಾ' ಸುರಂಗ ಕೊರೆಯುವ ಸಂದರ್ಭ ಗುರುವಾರ ರಸ್ತೆಯಲ್ಲಿ ಹೊಂಡ ಬಿದ್ದಿದೆ.

ಬೆಳಿಗ್ಗೆ 8.30ರ ಸಮಯದಲ್ಲಿ ರಸ್ತೆ ಕುಸಿದು ಮಧ್ಯೆ ಹೊಂಡ ಸೃಷ್ಟಿಯಾಯಿತು. ವಾಹನ ಸಂಚಾರಕ್ಕೆ ತೊಡಕು ಉಂಟಾಯಿತು.

ಬಿಎಂಆರ್‌ಸಿಎಲ್ ಸಿಬ್ಬಂದಿ ಕಾಂಕ್ರೀಟ್ ಹಾಕಿ ಹೊಂಡ ಮುಚ್ಚಿದರು. ತಾತ್ಕಾಲಿಕವಾಗಿ ಈ ರಸ್ತೆಯಲ್ಲಿ ಒಂದು ಕಡೆಯಿಂದ ವಾಹನ ಸಂಚಾರವನ್ನು ನಿಷೇಧಿಸಲಾಗಿದೆ. ವಾಹನ ಸಂಚಾರಕ್ಕೆ ಬದಲಿ ವ್ಯವಸ್ಥೆ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜೆಡಿಎಸ್-ಕಾಂಗ್ರೆಸ್ ಕಾರ್ಯಕರ್ತರ ಜಗಳ

ಪ್ರಜಾವಾಣಿ ವಾರ್ತೆ

ಕೋಲಾರ: ನಾಡಪ್ರಭು ಕೆಂಪೇಗೌಡ ಜಯಂತಿಗೆ ರಾಜ್ಯಸಭೆ ಸದಸ್ಯ, ಮಾಜಿ ಪ್ರಧಾನಿ ಎಚ್‌.ಡಿ.ದೇವೇಗೌಡ ಹಾಗೂ ಕೇಂದ್ರ ಸಚಿವ ಎಚ್‌.ಡಿ.ಕುಮಾರ-ಸ್ವಾಮಿ ಅವರಿಗೆ ರಾಜ್ಯ ಕಾಂಗ್ರೆಸ್ ಸರ್ಕಾರ ಆಹ್ವಾನ ನೀಡಿಲ್ಲವೆಂದು ಜೆಡಿಎಸ್ ಕಾರ್ಯಕರ್ತರು ನಗರದಲ್ಲಿ ಗುರುವಾರ ಸ್ತಬ್ಧಚಿತ್ರ ಮೆರವಣಿಗೆ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಧಿಕ್ಕಾರ ಕೂಗಿದರು.

ಪ್ರವಾಸಿ ಮಂದಿರದ ಬಳಿ ಮೆರವಣಿಗೆಗೆ ಚಾಲನೆ ನೀಡುವ ವೇಳೆ ಶಾಸಕ ಕೊತ್ತೂರು ಮಂಜುನಾಥ್ ಹಾಗೂ ವಿಧಾನ ಪರಿಷತ್ ಸದಸ್ಯ ಎಂ.ಎಲ್‌.ಅನಿಲ್ ಕುಮಾರ್ ಮುಂದೆಯೇ ಜೆಡಿಎಸ್ ಹಾಗೂ ಕಾಂಗ್ರೆಸ್ ಕಾರ್ಯಕರ್ತರ ನಡುವೆ ಜಗಳ ನಡೆಯಿತು. ಪರಸ್ಪರ ಹೊಡೆದಾಟಕ್ಕೂ ಮುಂದಾದರು. ಪೊಲೀಸರು ಮಧ್ಯ ಪ್ರವೇಶಿಸಿ ಲಾಠಿಯಿಂದ ಕಾರ್ಯಕರ್ತ ರನ್ನು ತಳ್ಳಿ ಜಗಳ ತಡೆದರು.

'ಅಭ್ಯಾಸ್' ಪರೀಕ್ಷೆ ಯಶಸ್ವಿ

ನವದೆಹಲಿ(ಪಿಟಿಐ): ಕ್ಷಿಪಣಿ ವ್ಯವಸ್ಥೆಗಳ ಕಾರ್ಯಕ್ಷಮತೆ ಒರೆಗೆ ಹಚ್ಚಲು ಬಳಸುವ, 'ಅಧಿಕ ವೇಗದಲ್ಲಿ ಹಾರಬಲ್ಲ ವೈಮಾನಿಕ ಗುರಿ' (ಎಚ್‌ಇಎಟಿ) 'ಅಭ್ಯಾಸ್'ನ ಸರಣಿ ಪರೀಕ್ಷೆಗಳನ್ನು ಒಡಿಶಾ ಕರಾವಳಿಯ ಚಾಂದಿಪುರದಲ್ಲಿರುವ ಸಮಗ್ರ ಪರೀಕ್ಷಾ ವಲಯದಲ್ಲಿ ನಡೆಸಲಾಗಿದೆ.

ಪರೀಕ್ಷಾರ್ಥ ಪ್ರಯೋಗದ ನಂತರ ಈ ಗುರಿಯನ್ನು (ಅಭ್ಯಾಸ್) ಮತ್ತೆ ಬಳಕೆ ಮಾಡಲಾಗುವುದಿಲ್ಲ. ಡಿಆರ್‌ಡಿಒ ಈ 'ಅಭ್ಯಾಸ್' ಅನ್ನು ಅಭಿವೃದ್ಧಿಪಡಿಸಿದೆ. ಕ್ಷಿಪಣಿ ವ್ಯವಸ್ಥೆಯ ಕಾರ್ಯಕ್ಷಮತೆ ಪರಿಶೀಲಿಸುವ ಪರೀಕ್ಷೆಗಳು ಯಶಸ್ವಿ-ಆಗಿರುವ ಹಿನ್ನೆಲೆಯಲ್ಲಿ, 'ಅಭ್ಯಾಸ್' ವ್ಯವಸ್ಥೆಗಳನ್ನು ತಯಾರಿಸಲು ದಾರಿ ಸುಗಮವಾದಂತಾಗಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಪರೀಕ್ಷೆ ನಂತರ ನಡೆಸುವ ವಿಶ್ಲೇಷಣೆಗೆ ಅನುವಾಗುವಂತೆ ದತ್ತಾಂಶ ದಾಖಲಿಸುವ ವ್ಯವಸ್ಥೆಯನ್ನು ಸಹ 'ಅಭ್ಯಾಸ್'ನಲ್ಲಿ ಅಳವಡಿಸಲಾಗಿದೆ. ಈ ವ್ಯವಸ್ಥೆಯ ಕಾರ್ಯಕ್ಷಮತೆಯನ್ನು ಪರೀಕ್ಷಾರ್ಥ ಪ್ರಯೋಗಗಳು ದೃಢಪಡಿಸಿವೆ ಎಂದು ಸಚಿವಾಲಯ ತಿಳಿಸಿದೆ.



ಡಿಆರ್‌ಡಿಒ ಅಭಿವೃದ್ಧಿಪಡಿಸಿರುವ 'ಅಧಿಕ ವೇಗದಲ್ಲಿ ಹಾರಬಲ್ಲ ವೈಮಾನಿಕ ಗುರಿ' (ಎಚ್‌ಇಎಟಿ) 'ಅಭ್ಯಾಸ್'

ಈ ಪರೀಕ್ಷೆಗಳು ಯಶಸ್ವಿಯಾಗಿರುವುದಕ್ಕಾಗಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಡಿಆರ್‌ಡಿಒ, ಸಶಸ್ತ್ರ ಪಡೆಗಳು ಹಾಗೂ ಉದ್ದಿಮೆಗಳನ್ನು ಅಭಿನಂದಿಸಿದ್ದಾರೆ.

ಬಿಇಎಂಎಲ್ ಅಧಿಸೂಚನೆಗೆ ತಡೆ

ಬೆಂಗಳೂರು: ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ (ಬಿಇಎಂಎಲ್) ಕಂಪನಿಯು ಗ್ರೂಪ್-ಸಿ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿ ಹೊರಡಿಸಿದ್ದ ಅಧಿಸೂಚನೆಯನ್ನು ಅಮಾನತ್ತಿನಲ್ಲಿ ಇರಿಸುವಂತೆ ಹೈಕೋರ್ಟ್ ಆದೇಶಿಸಿದೆ. ಇದರಿಂದಾಗಿ, ಗ್ರೂಪ್-ಸಿ ಹುದ್ದೆಗಳ ನೇಮಕಾತಿಗೆ ತಾತ್ಕಾಲಿಕ ತಡೆ ನೀಡಿದಂತಾಗಿದೆ.

ಬಿಇಎಂಎಲ್ ಹೊರಡಿಸಿದ್ದ ಸುತ್ತೋಲೆ ಪ್ರಶ್ನಿಸಿ ಹಾಗೂ 'ನಮ್ಮ ಸೇವೆಯನ್ನೇ ಕಾಯಂಗೊಳಿಸಲು ಆದೇಶಿಸಬೇಕು' ಎಂದು ಕೋರಿ ಗುತ್ತಿಗೆ ಕಾರ್ಮಿಕರ ಸಂಘ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ಎಸ್.ಹೇಮಲೇಖಾ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಮಧ್ಯಂತರ ಆದೇಶ ಹೊರಡಿಸಿದೆ.

'ಗುತ್ತಿಗೆ ಕಾರ್ಮಿಕರ ಸ್ಥಿತಿಗತಿಯನ್ನು ಪರಿಶೀಲಿಸಿ ನಿಯಮಾನುಸಾರ ಅವರ ಅರ್ಹತೆಯನ್ನು ನಿರ್ಣಯಿಸುವುದು ಮತ್ತು ನೇಮಕಾತಿ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ನಡೆಸುವುದು ಮುಖ್ಯ' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ.

ಮೇಕಪ್‌ಗೆ ಅವಕಾಶ ನೋಟಿಸ್‌ಗೆ ವಿವರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೇಣುಕಸ್ವಾಮಿ ಕೊಲೆ ಪ್ರಕರಣದ ಮೊದಲ ಆರೋಪಿ ಪವಿತ್ರಾಗೌಡ ಅವರಿಗೆ ಮೇಕಪ್ ಮಾಡಿಕೊಳ್ಳಲು ಅವಕಾಶ ನೀಡಿ ಕರ್ತವ್ಯ ಲೋಪ ಎಸಗಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ನೀಡಲಾಗಿದ್ದ ನೋಟಿಸ್‌ಗೆ ಮಹಿಳಾ ಪಿಎಸ್‌ಐಯೊಬ್ಬರು ವಿವರಣೆ ನೀಡಿದ್ದಾರೆ.

ಸ್ಥಳ ಮಹಜರು ಹಾಗೂ ಮಹಿಳಾ ಸಾಂತ್ವನ ಕೇಂದ್ರದಿಂದ ಅನ್ನಪೂರ್ಣೇಶ್ವರಿನಗರ ಠಾಣೆಗೆ ಆರೋಪಿಯನ್ನು ಕರೆತರಲು ಕರ್ತವ್ಯಕ್ಕೆ ನಿಯೋಜಿಸಿದ್ದ ಮಹಿಳಾ ಪಿಎಸ್‌ಐ ಒಬ್ಬರಿಗೆ ಪಶ್ಚಿಮ ವಿಭಾಗದ ಡಿಸಿಪಿ ನೋಟಿಸ್ ಜಾರಿ ಮಾಡಿದ್ದರು. ಪವಿತ್ರಾಗೌಡ ಅವರ ಬಳಿ ಮೇಕಪ್ ಬಾಕ್ಸ್ ಇದ್ದ ಮಾಹಿತಿ ಇರಲಿಲ್ಲ ಎಂಬುದಾಗಿ ಅವರು ಉತ್ತರಿಸಿದ್ದಾರೆ ಎಂದು ಗೊತ್ತಾಗಿದೆ.

'ಪ್ರಜಾವಾಣಿ'ಯ ಜೂನ್ 27ರ (ಗುರುವಾರ) ಸಂಚಿಕೆಯ ಪುಟ 6ರಲ್ಲಿ ಪ್ರಕಟವಾಗಿದ್ದ ವರದಿಯಲ್ಲಿದ್ದ ಹೆಸರಿನ ಮಹಿಳಾ ಪಿಎಸ್‌ಐಗೆ ಯಾವುದೇ ನೋಟಿಸ್ ಜಾರಿಯಾಗಿಲ್ಲ. ಅಂದು ಆರೋಪಿಯ ಜತೆಗೆ ಕರ್ತವ್ಯದಲ್ಲಿದ್ದ ಮತ್ತೊಬ್ಬ ಮಹಿಳಾ ಅಧಿಕಾರಿಗೆ ನೋಟಿಸ್ ಜಾರಿ ಮಾಡಲಾಗಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸೂರಜ್ ರಕ್ತದ ಮಾದರಿ ಸಂಗ್ರಹ

ಬೆಂಗಳೂರು: ಯುವಕನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ಬಂಧನದಲ್ಲಿರುವ ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಸೂರಜ್ ರೇವಣ್ಣ ಅವರ ರಕ್ತದ ಮಾದರಿಯನ್ನು ಡಿಎನ್‌ಎ ಪರೀಕ್ಷೆಗಾಗಿ ವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರ ಸಮ್ಮುಖದಲ್ಲಿ ಗುರುವಾರ ಪಡೆಯಲಾಯಿತು.

ಸಿಐಡಿ ಪೊಲೀಸರು ಸೂರಜ್ ರೇವಣ್ಣ ಅವರನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕೆ.ಎನ್. ಶಿವಕುಮಾರ್ ಅವರ ಮುಂದೆ ಹಾಜರು ಪಡಿಸಿದರು.

ಈ ವೇಳೆ ಪ್ರಕರಣದ ಸಂತ್ರಸ್ತ ಮತ್ತು ಸೂರಜ್ ರೇವಣ್ಣ ಅವರ ರಕ್ತದ ಮಾದರಿಯನ್ನು ವೈದ್ಯರು ಪಡೆದುಕೊಂಡರು.

ಸಚಿವ ಎಂ.ಬಿ. ಪಾಟೀಲ ನೇತೃತ್ವದ ನಿಯೋಗದಿಂದ ಸಭೆ


ನೀರಿನ ಸಮಸ್ಯೆ ನಿವಾರಣೆಗೆ ಜಪಾನ್ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ವಿವಿಧ ಭಾಗಗಳಲ್ಲಿ ತಲೆದೋರುವ ನೀರಿನ ಕೊರತೆ, ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಜಪಾನ್ ಕಂಪನಿಗಳು ನೆರವಾಗಲಿವೆ.

ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ನೇತೃತ್ವದ ರಾಜ್ಯದ ಉನ್ನತ ಮಟ್ಟದ ನಿಯೋಗ ಜಪಾನಿನ ಬಹುರಾಷ್ಟ್ರೀಯ ಕಂಪನಿಗಳಾದ ಯಮಹಾ ಮೋಟರ್ ಕಾರ್ಪ್ (ವೈಎಂಸಿ), ಐಚಿ ತೋಕೆ ಹಾಗೂ ಬ್ರದರ್ ಇಂಡಸ್ಟ್ರೀಸ್‌ನ ಮುಖ್ಯಸ್ಥರ ಜೊತೆ ನಗೋಯಾ ನಗರದಲ್ಲಿ ಗುರುವಾರ ನಡೆಸಿದ ಸಭೆಯಲ್ಲಿ ನೀರಿನ ಸಮಸ್ಯೆಗಳಿಗೆ ಪರಿಹಾರ ದೊರಕಿಸುವ ಭರವಸೆ ಸಿಕ್ಕಿದೆ.

ಬೆಂಗಳೂರಿನಲ್ಲಿ ಕಾವೇರಿ ನೀರು ಪೂರೈಕೆಯಲ್ಲಿ ಲೆಕ್ಕಕ್ಕೆ ಸಿಗದ ಪೋಲು ತಪ್ಪಿಸಿ, ನೀರಿನ ಕೊರತೆಗೆ ಕಡಿವಾಣ ಹಾಕಲು ನೆರವು ಪಡೆಯಲಾಗು-ತ್ತಿದೆ. ಅನಿಲ, ನೀರಿನ ಮೀಟರ್ ಸೇರಿದಂತೆ ಅತ್ಯಾಧುನಿಕ ಅಳತೆ ಹಾಗೂ ನಿಯಂತ್ರಣ ಸಾಧನಗಳ ತಯಾರಿಸುವ ಐಚಿ ತೋಕೆ ಡೆಂಕಿ ಕಂಪನಿಯ ಗರಿಷ್ಠ ಸಾಮರ್ಥ್ಯದ ಯುವಿ ತಂತ್ರಜ್ಞಾನದ ನೀರಿನ ಮೀಟರ್‌ಗಳು ನೀರಿನ ಅಭಾವ ನಿವಾರಿಸಲು ನೆರವಾಗಲಿವೆ.



ಜಪಾನ್‌ನ ನಗೋಯಾದಲ್ಲಿ ಗುರುವಾರ ನಡೆಸಿದ ಸಭೆಯಲ್ಲಿ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ 'ಬ್ರದರ್ ಇಂಡಸ್ಟ್ರೀಸ್' ಮುಖ್ಯಸ್ಥರ ಜೊತೆ ಒಪ್ಪಂದ ಮಾಡಿಕೊಂಡರು

ಬೆಂಗಳೂರು ನೀರು ಪೂರೈಕೆ ಮತ್ತು ಒಳಚರಂಡಿ ಮಂಡಳಿ ಹಾಗೂ ನಗರಾಭಿವೃದ್ಧಿ ಇಲಾಖೆಯ ಜೊತೆಗೆ ಪಾಲುದಾರಿಕೆ ಮಾಡಿಕೊಳ್ಳಲು ರಾಜ್ಯ ಸರ್ಕಾರವು ಅಗತ್ಯ ನೆರವು ನೀಡಲಿದೆ ಎಂದು ಸಚಿವ ಪಾಟೀಲ ಭರವಸೆ ನೀಡಿದ್ದಾರೆ.

ತುಮಕೂರಿನ ಬಳಿ ಇರುವ ಜಪಾನ್ ಕೈಗಾರಿಕಾ ಟೌನ್‌ಶಿಪ್‌ನಲ್ಲಿ (ಜೆಐಟಿ) ಕಂಪನಿಯ ಕಾರ್ಖಾನೆಯು ಈ ವರ್ಷದ ಡಿಸೆಂಬರ್‌ನಲ್ಲಿ ಕಾರ್ಯಾರಂಭ ಮಾಡಲಿದೆ. ಮಷಿನ್ ಟೂಲ್ಸ್ ವಲಯದಲ್ಲಿ ವಹಿವಾಟು ವಿಸ್ತರಣೆಯಾಗಲಿದೆ. ಇಂಧನ ದಕ್ಷತೆಯ ಯಂತ್ರೋಪಕರಣಗಳು ವಾಹನ ಬಿಡಿಭಾಗ ತಯಾರಿಕೆಯ ಉದ್ಯಮಗಳ ಸ್ಥಾಪನೆ ಕುರಿತು ಚರ್ಚೆ ನಡೆಸಲಾಗಿದೆ. ಆಟೊಮೊಬೈಲ್ ಹಾಗೂ ವಿದ್ಯುತ್‌ಚಾಲಿತ ವಾಹನ ತಯಾರಿಕಾ ವಲಯಕ್ಕೆ ರಾಜ್ಯ ಸರ್ಕಾರ ಒದಗಿಸುತ್ತಿರುವ ಉತ್ತೇಜಕರ ರಿಯಾಯ್ತಿ ಹಾಗೂ ಸೌಲಭ್ಯಗಳನ್ನು ಬಳಸಿಕೊಳ್ಳಲು ಮುಂದಾಗಬೇಕು ಎಂದು ಯಮಹಾ ಕಂಪನಿಗೆ ಸಚಿವರು ಮನವಿ ಮಾಡಿದ್ದಾರೆ.

ವೈಎಂಸಿ ಹೊಸ ಉದ್ದಿಮೆ ಅಭಿವೃದ್ಧಿ ಕೇಂದ್ರದ ಮುಖ್ಯ ವ್ಯವಸ್ಥಾಪಕ ಹಜಿಮೆ ಆವೊಟಾ, ಸಂಚಾರ ಸೇವಾ ವಹಿವಾಟಿನ ಪ್ರಧಾನ ವ್ಯವಸ್ಥಾಪಕ ಶುಂಗೊ ತೆರಜಿಮಾ, ನೀರಿನ ಸಲಕರಣೆ ಮಾರಾಟ ವಿಭಾಗದ ಪ್ರಧಾನ ವ್ಯವಸ್ಥಾಪಕ ಕಜುಹಿಸಾ ಇಸೊಮುರಾ, ಹಿರಿಯ ಕಾರ್ಯನಿರ್ವಾಹಕ ಅಧಿಕಾರಿ ಕಜುಹಿಸಾ ಮೊರಿ, ಕರ್ನಾಟಕದ ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಆಯುಕ್ತೆ ಗುಂಜನ್ ಕೃಷ್ಣ, ವಿಧಾನ ಪರಿಷತ್ ಸದಸ್ಯ ಮಂಜುನಾಥ ಭಂಡಾರಿ ಭಾಗವಹಿಸಿದ್ದರು.



ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ನಿವೃತ್ತ ಇಪಿಎಸ್–95 ಸದಸ್ಯರ ಸಂಘ ಮತ್ತು ಇತರೆ ಸಂಘಟನೆಗಳ ವತಿಯಿಂದ ಕೇಂದ್ರ ಪ್ರಾದೇಶಿಕ ಭವಿಷ್ಯನಿಧಿ ಕಚೇರಿ ಎದುರು ಗುರುವಾರ ಪ್ರತಿಭಟನಾ ಸಭೆ ನಡೆಸಲಾಯಿತು

ಇಪಿಎಸ್ ನಿವೃತ್ತ ನೌಕರರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಸಂಘರ್ಷ ಸಮಿತಿ, ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ನಿವೃತ್ತ ಇಪಿಎಸ್-95 ಸದಸ್ಯರ ಸಂಘಗಳ ವತಿಯಿಂದ ಕೇಂದ್ರ ಪ್ರಾದೇಶಿಕ ಭವಿಷ್ಯನಿಧಿ ಕಚೇರಿ ಎದುರು ಗುರುವಾರ ಪ್ರತಿಭಟನೆ ನಡೆಸಲಾಯಿತು.

ಕನಿಷ್ಠ ₹7,500 ಪಿಂಚಣಿ ಹಾಗೂ ಭತ್ಯೆ, ವೈದ್ಯಕೀಯ ಸೌಲಭ್ಯ ನೀಡಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಸಂಘದ ಕಾರ್ಯಾಧ್ಯಕ್ಷ ನಂಜುಂಡೇಗೌಡ, 'ಇಪಿಎಸ್ ನಿವೃತ್ತರ ಪರವಾಗಿ 2022ರ ನವೆಂಬರ್ 4ರಂದು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ಇಪಿಎಫ್‌ಒ ಅಧಿಕಾರಿಗಳು ಇದುವರೆಗೂ ಅನುಷ್ಠಾನಗೊಳಿಸಿಲ್ಲ' ಎಂದು ದೂರಿದರು.

ರಾಷ್ಟ್ರೀಯ ಸಂಯೋಜಕ ರಮಕಾಂತ್ ನರಗುಂದ, ಅಧ್ಯಕ್ಷ ಶಂಕರ್ ಕುಮಾರ್, ವೀರ ಕುಮಾರ್ ಗಡದ್, ಡೋಲಪ್ಪ, ಸುಬ್ಬಣ್ಣ ಮಾತನಾಡಿದರು.

ಕೇಂದ್ರ ಕಾರ್ಮಿಕ ಸಚಿವ ಮನ್ಸೂಖ್ ಮಾಂಡಲೀಯ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರಿಗೆ ಮನವಿಯ ಪ್ರತಿಯನ್ನು ರವಾನಿಸಲಾಯಿತು.

ಬೆಂಗಳೂರು–ಮಂಗಳೂರು ಸಂಪರ್ಕಿಸುವ ಹೆದ್ದಾರಿ; ಕಳಪೆ ಕಾಮಗಾರಿಯೇ ಕಾರಣ– ಆರೋಪ

ಧಾರಾಕಾರ ಮಳೆ: ಕುಸಿದ ಹೆದ್ದಾರಿ

ಪ್ರಜಾವಾಣಿ ವಾರ್ತೆ

ಸಕಲೇಶಪುರ (ಹಾಸನ ಜಿಲ್ಲೆ): ಹಾಸನ–ಬಂಟ್ವಾಳ ನಡುವೆ ನಡೆಯುತ್ತಿರುವ ಬೆಂಗಳೂರು–ಮಂಗಳೂರು ಚತುಷ್ಪಥ ರಾಷ್ಟ್ರೀಯ ಹೆದ್ದಾರಿ ತಾಲ್ಲೂಕಿನ ಆನೆಮಹಲ್ ಗ್ರಾಮದಲ್ಲಿ ಗುರುವಾರ ಸುರಿದ ಒಂದೇ ಮಳೆಗೆ ಕುಸಿದಿದೆ.

ಸಕಲೇಶಪುರ ಬೈಪಾಸ್ ಟೋಲ್‌ಗೇಟ್‌ನಿಂದ ಮಾರನಹಳ್ಳಿ ವರೆಗೆ ಚತುಷ್ಪಥ ಕಾಮಗಾರಿ ಪ್ರಗತಿಯಲ್ಲಿದ್ದು, ಗ್ರಾಮದಲ್ಲಿ ಕಾಂಕ್ರಿಟ್ ರಸ್ತೆಯ ಕೆಳಗೆ ಅಳವಡಿಸಿರುವ ಮೋರಿಯ ಪೈಪ್ ತುಂಡಾಗಿ ರಸ್ತೆಯ ಒಂದು ಬದಿ ಕುಸಿದಿದೆ. ಮತ್ತೊಂದು ಬದಿಯಲ್ಲಿ ವಾಹನ ಸಂಚಾರಕ್ಕೆ ಅಡ್ಡಿಯಾಗಲಿಲ್ಲ.

‘ರಸ್ತೆಯ ಕೆಳಭಾಗದಲ್ಲಿ ಅಳವಡಿಸಿರುವ ಚರಂಡಿಯ ಪೈಪುಗಳು ಉತ್ತಮ ಗುಣಮಟ್ಟದಿಂದ ಕೂಡಿಲ್ಲ’ ಎಂದು ಗ್ರಾಮದ ಭಾಸ್ಕರ್, ಹಸೈನಾರ್ ಅವರು ಕಾಮಗಾರಿ ಸಂದರ್ಭದಲ್ಲೇ ಆಕ್ಷೇಪ ವ್ಯಕ್ತಪಡಿಸಿದ್ದರು. ಆದರೆ, ಗುತ್ತಿಗೆದಾರರು ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಎಂಜಿನಿಯರ್‌ಗಳು ಅದನ್ನುಗಂಭೀರವಾಗಿ ಪರಿಗಣಿಸದೆ ಕಳಪೆ ಕಾಮಗಾರಿ ಮಾಡಿದ್ದೇ ಕುಸಿಯಲು ಕಾರಣ’ ಎಂದು ಗ್ರಾಮಸ್ಥರು ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.

ಶಾಸಕ ಭೇಟಿ: ಸ್ಥಳಕ್ಕೆ ಗುರುವಾರ ಸಂಜೆ ಶಾಸಕ ಸಿಮೆಂಟ್ ಮಂಜು ಭೇಟಿ ನೀಡಿ ಪರಿಶೀಲಿಸಿದರು.

‘ಹಾಸನದಿಂದ ಮಾರನಹಳ್ಳಿವರೆಗೆ ಹೆದ್ದಾರಿ ಕಾಮಗಾರಿ ಉತ್ತಮ ಗುಣಮಟ್ಟದಿಂದ ಕೂಡಿಲ್ಲ ಎಂದು ಗುತ್ತಿಗೆದಾರರಿಗೆ ಹಾಗೂ ಎಂಜಿನಿಯರ್‌ಗಳಿಗೆ ಹಲವು ಬಾರಿ ಹೇಳಿದ್ದೆ. ನಿತ್ಯ 30 ಸಾವಿರಕ್ಕೂ ಹೆಚ್ಚು ವಾಹನಗಳು ಸಂಚರಿಸುವ ಹೆದ್ದಾರಿಯು ಕುಸಿದರೆ ಆಗುವ ಅನಾಹುತ ಊಹಿಸಲೂ ಸಾಧ್ಯವಿಲ್ಲ’ ಎಂದರು.

‘ಎಂಜಿನಿಯರ್‌ಗಳು, ಗುತ್ತಿಗೆದಾರರು ಇಂತಹ ಸಮಸ್ಯೆಗಳಾಗದಂತೆ ಗಂಭೀರವಾಗಿ ಪರಿಗಣಿಸಿ, ತ್ವರಿತವಾಗಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು’ ಎಂದರು.



ಸಕಲೇಶಪುರ ತಾಲ್ಲೂಕು ಆನೆಮಹಲ್ ಗ್ರಾಮದಲ್ಲಿ ಇತ್ತೀಚೆಗೆ ನಿರ್ಮಿಸಿರುವ ಬೆಂಗಳೂರು–ಮಂಗಳೂರು ಚತುಷ್ಪಥ ರಾಷ್ಟ್ರೀಯ ಹೆದ್ದಾರಿ ಕುಸಿದಿದೆ

ವಿದ್ಯುತ್ ಸ್ಪರ್ಶ: ರಿಕ್ಷಾ ಚಾಲಕರಿಬ್ಬರ ಸಾವು

ಮಂಗಳೂರು: ನಗರದ ರೊಸಾರಿಯೊದಲ್ಲಿ ಭಾರಿ ಮಳೆ ವೇಳೆ ತುಂಡಾಗಿ ನೆಲಕ್ಕುರುಳಿದ್ದ ವಿದ್ಯುತ್ ತಂತಿ ಸ್ಪರ್ಶಿಸಿ ರಿಕ್ಷಾ ಚಾಲಕರಿಬ್ಬರು ಮೃತಪಟ್ಟಿದ್ದಾರೆ.

ಹಾಸನ ಜಿಲ್ಲೆಯ ಆಲೂರು ತಾಲ್ಲೂಕಿನ ಪಾಳ್ಯ ಹೋಬಳಿಯ ರಾಜು (50) ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ರಾಮಕುಂಜದ ದೇವರಾಜ್ (46) ಮೃತರು ಎಂದು ಪೊಲೀಸರು ತಿಳಿಸಿದರು.

ಬಾಡಿಗೆ ಆಟೊ ರಿಕ್ಷಾವನ್ನು ಚಲಾಯಿಸುತ್ತಿದ್ದ ರಾಜು ಹಾಗೂ ದೇವರಾಜ್ ಇಬ್ಬರು ರೊಸಾರಿಯೊದಲ್ಲಿ ಬಾಡಿಗೆ ಮನೆಯೊಂದರಲ್ಲಿ ವಾಸವಿದ್ದರು.

ಆಗುಂಬೆ ಘಾಟಿ; ಸೆ.15ರವರೆಗೆ ಭಾರಿ ವಾಹನ ಸಂಚಾರ ನಿಷೇಧ

ಶಿವಮೊಗ್ಗ: ಭಾರಿ ಮಳೆ ಸುರಿಯುತ್ತಿರುವ ಕಾರಣ ಆಗುಂಬೆ ಘಾಟಿಯಲ್ಲಿ ಭೂಕುಸಿತ ಆಗುವ ಸಾಧ್ಯತೆ ಇರುವುದರಿಂದ ಮುಂಜಾಗ್ರತಾ ಕ್ರಮವಾಗಿ ಸೆಪ್ಟೆಂಬರ್ 15ರವರೆಗೆ ಭಾರಿ ವಾಹನಗಳ ಸಂಚಾರ ನಿಷೇಧಿಸಿ ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ಆದೇಶಿಸಿದ್ದಾರೆ.

ಶಿವಮೊಗ್ಗ ರಾಷ್ಟ್ರೀಯ ಹೆದ್ದಾರಿ ವಿಭಾಗದ ಮನವಿಯ ಹಿನ್ನೆಲೆಯಲ್ಲಿ ತೀರ್ಥಹಳ್ಳಿ–ಮಲ್ಪೆ ರಸ್ತೆಯ ಆಗುಂಬೆ ಘಾಟಿಯಲ್ಲಿ ಭಾರಿ ವಾಹನ ಹಾಗೂ ಸರಕು ಸಾಗಾಣಿಕೆ ವಾಹನಗಳ ಸಂಚಾರ ನಿಷೇಧಿಸಲಾಗಿದೆ.

ಆಗುಂಬೆ ಘಾಟಿಯ ಬದಲಿಗೆ ತೀರ್ಥಹಳ್ಳಿ–ಮಾಸ್ತಿಕಟ್ಟೆ–ಸಿದ್ದಾಪುರ–ಕುಂದಾಪುರ ಮಾರ್ಗವಾಗಿ ಉಡುಪಿಗೆ ತೆರಳಬಹುದು. ಉಡುಪಿಯಿಂದ ತೀರ್ಥಹಳ್ಳಿಗೂ ಅದೇ ಮಾರ್ಗವಾಗಿ ಬರಬಹುದು ಎಂದು ಜಿಲ್ಲಾಧಿಕಾರಿ ಆದೇಶದಲ್ಲಿ ತಿಳಿಸಿದ್ದಾರೆ.

ವಿದ್ಯುತ್ ಪ್ರವಹಿಸಿ ಯುವತಿ ಸಾವು

ಉಜಿರೆ (ದಕ್ಷಿಣ ಕನ್ನಡ): ಶಿಬಾಜೆ ಗ್ರಾಮದಲ್ಲಿ ಗುರುವಾರ ಸಂಜೆ ಸ್ಟೇ ವೈರ್‌ಗೆ ವಿದ್ಯುತ್ ತಂತಿ ಸ್ಪರ್ಶಿಸಿದ್ದರಿಂದ ವಿದ್ಯುತ್ ಆಘಾತದಿಂದ ಯುವತಿ ಮೃತಪಟ್ಟಿದ್ದಾರೆ.

ಶಿಬಾಜೆ ಗ್ರಾಮದ ಬರ್ಗುಳ ನಿವಾಸಿ ಗಣೇಶ್ ಶೆಟ್ಟಿ ಮತ್ತು ರೋಹಿಣಿ ದಂಪತಿ ಪುತ್ರಿ ಪ್ರತೀಕ್ಷಾ ಶೆಟ್ಟಿ (21) ಮೃತಪಟ್ಟವರು.

ಪ್ರತೀಕ್ಷಾ ಶೆಟ್ಟಿ ಅವರಿಗೆ ಪಾರ್ಸೆಲ್ ಬಂದಿದ್ದರಿಂದ ಅವರು ಮನೆ ಸಮೀಪದ ರಸ್ತೆ ಪಕ್ಕ ತೆರಳಿದ್ದರು. ಆಗ ರಸ್ತೆಯಲ್ಲಿ ಹರಿಯುವ ನೀರಿನಲ್ಲಿ ವಿದ್ಯುತ್ ಪ್ರವಹಿಸಿದ್ದು, ಅದನ್ನು ಸ್ಪರ್ಶಿಸಿದ ಅವರಿಗೆ ವಿದ್ಯುತ್ ಆಘಾತ ಉಂಟಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗೂಗಲ್ ಮ್ಯಾಪ್ ನೋಡಿ ಚಾಲನೆ ಕಾರು ನೀರುಪಾಲು, ಇಬ್ಬರ ರಕ್ಷಣೆ

ಪ್ರಜಾವಾಣಿ ವಾರ್ತೆ

ಬದಿಯಡ್ಕ (ಕಾಸರಗೋಡು ಜಿಲ್ಲೆ): ಗೂಗಲ್ ಮ್ಯಾಪ್ ಹಾಕಿಕೊಂಡು ಕಾಞಂಗಾಡಿನ ಅಂಬಲತ್ತರದಿಂದ ಕರ್ನಾಟಕದ ಉಪ್ಪಿನಂಗಡಿಗೆ ತೆರಳುತ್ತಿದ್ದ ಚಾಲಕನ, ನಿಯಂತ್ರಣ ತಪ್ಪಿದ ಕಾರು ಇಲ್ಲಿನ ಪಳ್ಳಂಜಿ ಅರಣ್ಯ ಪ್ರದೇಶದಲ್ಲಿ ತೋಡಿಗೆ (ತೊರೆ) ಬಿದ್ದಿದೆ.

ಕುತ್ತಿಕೋಲಿನಿಂದ ಅರಣ್ಯದ ಮೂಲಕ ಪಾಂಡಿ ಕಡೆಗೆ ತೆರಳುವಾಗ ಪಳ್ಳಂಜಿತೋಡಿನ ಹಳೆಯ ಸೇತುವೆಯಲ್ಲಿ ಅವಘಡ ನಡೆದಿದೆ. ಏಳನೇ ಮೈಲಿನ ಅಂಜಿಲ್ಲತ್ ಹೌಸ್‌ನ ತಸ್ರೀಫ್ (36), ಪುಲ್ಲೂರ್ ಮುನಂಬಂ ಹೌಸ್‌ನ ಅಬ್ದುಲ್ ರಶೀದ್ (35) ತೆರಳುತ್ತಿದ್ದರು. ಎರಡೂ ಬದಿಯಲ್ಲಿ ಆಧಾರ ಇಲ್ಲದ ತೋಡಿನ ಸೇತುವೆ ದಾಟುವಾಗ ಕಾರು ಉರುಳಿದೆ.

ಕಾರು ಸಂಪೂರ್ಣ ಮುಳುಗಿದ್ದರೂ ಕಾರಿನಿಂದ ಹೊರಬಂದ ತಸ್ರೀಫ್, ಅಬ್ದುಲ್ ರಶೀದ್ ಅವರು ಮರ ಹತ್ತಿ ಕುಳಿತು ಪೊಲೀಸರಿಗೆ ಕರೆ ಮಾಡಿ ವಿಷಯ ತಿಳಿಸಿದರು. ಆದೂರು ಠಾಣೆ ಪೊಲೀಸರು ಮತ್ತು ಕುತ್ತಿಕೋಲಿನ ಅಗ್ನಿಶಾಮಕ ಸಿಬ್ಬಂದಿ ಅವರನ್ನು ರಕ್ಷಿಸಿದರು.

ಸಿಲುಕಿಕೊಂಡ ಕಂಟೇನರ್: ಇನ್ನೊಂದು ಪ್ರಕರಣದಲ್ಲಿ ಬೆಂಗಳೂರು ಕಡೆಯಿಂದ ಗೂಗಲ್ ಮ್ಯಾಪ್ ಅನುಸರಿಸಿ ಮಂಗಳೂರು ಕಡೆಗೆ ಬಂದ ಕಂಟೈನರ್ ಲಾರಿ, ಒಳರಸ್ತೆಯಲ್ಲಿ ಸಿಲುಕಿದ್ದರಿಂದ ಟ್ರಾಫಿಕ್ ಜಾಮ್ ಆಗಿತ್ತು. ಉಪ್ಪಿನಂಗಡಿ-ಅಜಿಲಮೊಗರು- ಮಣಿಹಳ್ಳ ಸಮೀಪದ ರಸ್ತೆಯನ್ನು ಗೂಗಲ್ ಮ್ಯಾಪ್ ತೋರಿಸಿತ್ತು. ಹೆದ್ದಾರಿಯಲ್ಲಿ ಕಾಮಗಾರಿ ನಡೆಯುತ್ತಿರುವ ಕಾರಣ ಗೂಗಲ್ ಮ್ಯಾಪ್ ಒಳ ರಸ್ತೆಯನ್ನು ಸೂಚಿಸಿತ್ತು. ಅದನ್ನು ನಂಬಿ ಚಾಲಕ ಈ ಗ್ರಾಮೀಣ ರಸ್ತೆಗೆ ಬಂದಿದ್ದರು.



ಬದಿಯಡ್ಕ ಸಮೀಪದ ಪಳ್ಳಂಜಿ ಪ್ರದೇಶದ ತೋಡಿಗೆ ಬಿದ್ದ ಕಾರು

ದುಬಾರೆಯಲ್ಲಿ ದೋಣಿ ವಿಹಾರ ಸ್ಥಗಿತ

ಮಡಿಕೇರಿ: ಕುಶಾಲನಗರ ತಾಲ್ಲೂಕಿನ ದುಬಾರೆ ಸಾಕಾನೆ ಶಿಬಿರದಲ್ಲಿ ದೋಣಿ-ವಿಹಾರವನ್ನು ಅರಣ್ಯ ಇಲಾಖೆ ಗುರುವಾರ ನಿಲ್ಲಿಸಿದೆ.

ಕಾವೇರಿ ನದಿ ಇಲ್ಲಿ ಅಪಾಯದ ಮಟ್ಟ ಮೀರಿ ಹರಿಯುತ್ತಿರುವುದರಿಂದ ಪ್ರವಾಸಿಗರನ್ನು ದೋಣಿಯಲ್ಲಿ ಸಾಕಾನೆ ಶಿಬಿರಕ್ಕೆ ಕರೆದೊಯ್ಯುವುದು ಅಪಾಯಕಾರಿ ಎನಿಸಿದೆ. ಹೀಗಾಗಿ ಈ ಕ್ರಮ ಕೈಗೊಳ್ಳಲಾಗಿದೆ.

‘ನದಿಯಲ್ಲಿ ನೀರು ಹೆಚ್ಚು ರಭಸದಿಂದ ಹರಿಯುತ್ತಿದೆ. ಪ್ರವಾಸಿಗರ ಸುರಕ್ಷತೆಯ ದೃಷ್ಟಿಯಿಂದ ದೋಣಿವಿಹಾರವನ್ನು ನಿಲ್ಲಿಸಲಾಗಿದೆ. ನೀರಿನ ರಭಸ ಕಡಿಮೆಯಾಗುತ್ತಿದ್ದಂತೆ ಮತ್ತೆ ಆರಂಭಿಸಲಾಗುವುದು’ ಎಂದು ಡಿಸಿಎಫ್ ಭಾಸ್ಕರ್ ‘ಪ್ರಜಾವಾಣಿ’ಗೆ ತಿಳಿಸಿದರು.

ಭಾರಿ ಮಳೆ: ಹತ್ತು ಜಿಲ್ಲೆಗಳಿಗೆ ಅಲರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಶುಕ್ರವಾರವೂ 40ರಿಂದ 50 ಕಿ.ಮೀ. ವೇಗದಲ್ಲಿ ನಿರಂತರ ಗಾಳಿಯ ಜತೆಗೆ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ ಎಂದು ಎಚ್ಚರಿಕೆ ನೀಡಿರುವ ಹವಾಮಾನ ಇಲಾಖೆ, ಆರು ಜಿಲ್ಲೆಗಳಿಗೆ ‘ಆರೆಂಜ್ ಅಲರ್ಟ್’ ಹಾಗೂ ನಾಲ್ಕು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಿದೆ.

ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಕೊಡಗು, ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗೆ ‘ಆರೆಂಜ್ ಅಲರ್ಟ್’ ನೀಡಲಾಗಿದೆ. ಬೆಳಗಾವಿ, ಧಾರವಾಡ, ಹಾವೇರಿ ಹಾಗೂ ಹಾಸನ ಜಿಲ್ಲೆಗೆ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ. ಈ ಜಿಲ್ಲೆಗಳಲ್ಲಿ ಭಾರಿ ಗಾಳಿಯೊಂದಿಗೆ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ. ಉಳಿದ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಕರಾವಳಿ ಉದ್ದಕ್ಕೂ ಬಿರುಗಾಳಿಯ ಆರ್ಭಟ ಹೆಚ್ಚಿರುವ ಸಾಧ್ಯತೆಯಿದೆ. ಗಂಟೆಗೆ 35 ಕಿ.ಮೀ.ಯಿಂದ 55 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಂಭವವಿದೆ. ಸಮುದ್ರದಲ್ಲಿ ಭಾರಿ ಅಲೆಗಳು ಕಾಣಿಸಿಕೊಳ್ಳಬಹುದು. ಆದ್ದರಿಂದ, ಮೀನುಗಾರರು ಸಮುದ್ರಕ್ಕೆ ಇಳಿಯುವಾಗ ಎಚ್ಚರ ವಹಿಸಬೇಕು. ಸಣ್ಣ ಹಡಗುಗಳು ಸಂಚರಿಸಬಾರದು. ಸಮುದ್ರದ ದಡದಲ್ಲಿ ಮನೋರಂಜನಾ ಚಟುವಟಿಕೆಗಳನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಬೇಕು. ಅಲೆಗಳು ಉಲ್ಬಣಿಸುವ ಸಾಧ್ಯತೆ ಇರುತ್ತದೆ ಎಂದು ಇಲಾಖೆ ಎಚ್ಚರಿಕೆ ನೀಡಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ಆಕಾಶ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ನಿರಂತರ ಗಾಳಿ ಕಾಣಿಸಿಕೊಳ್ಳುವ ಸಂಭವವೂ ಇದೆ ಎಂದು ಇಲಾಖೆ ಹೇಳಿದೆ.

ಕರಾವಳಿ ಭಾಗದಲ್ಲಿ ಜುಲೈ 1ರವರೆಗೂ ಗಾಳಿಯೊಂದಿಗೆ ಧಾರಾಕಾರ ಮಳೆ ಮುಂದುವರಿಯುವ ಸಾಧ್ಯತೆಯಿದೆ. ಒಳನಾಡಿನಲ್ಲಿ ಸಾಧಾರಣ ಮಳೆಯಾಗಲಿದೆ ಎಂದು ಇಲಾಖೆ ತಿಳಿಸಿದೆ.

ಮತ್ತಷ್ಟು ಮಳೆ: ತುಂಗಾ ಜಲಾಶಯ ಭರ್ತಿ

ಒಂದನೇ ಪುಟದಿಂದ...

‘3.24 ಟಿಎಂಸಿ ಅಡಿ ಸಂಗ್ರಹ ಸಾಮರ್ಥ್ಯದ ತುಂಗಾ ಜಲಾಶಯದ ಗರಿಷ್ಠ ಮಟ್ಟ 588.24 ಮೀಟರ್. ಜಲಾಶಯಕ್ಕೆ ಒಳಹರಿವು 6,766 ಕ್ಯುಸೆಕ್ ಇದೆ. ಎರಡು ಕ್ರಸ್ಟ್ ಗೇಟ್‌ಗಳನ್ನು ತೆರೆದು 5,285 ಕ್ಯುಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ. ಉಳಿದ ಹೆಚ್ಚುವರಿ ನೀರನ್ನು ವಿದ್ಯುತ್ ಉತ್ಪಾದನೆಗೆ ಬಳಸಲಾಗುತ್ತಿದೆ’ ಎಂದು ಜಲಾಶಯದ ಕಾರ್ಯನಿರ್ವಾಹಕ ಎಂಜಿನಿಯರ್ ತಿಪ್ಪಾನಾಯ್ಕ ‘ಪ್ರಜಾವಾಣಿ’ಗೆ ತಿಳಿಸಿದರು.

ಜಲಾನಯನ ಪ್ರದೇಶದಲ್ಲಿ ಮಳೆ ಸುರಿಯುತ್ತಿರುವುದರಿಂದ ತುಂಗಾ, ಭದ್ರಾ ಹಾಗೂ ಲಿಂಗನಮಕ್ಕಿ ಜಲಾಶಯಗಳಿಗೆ ಒಳಹರಿವು ಹೆಚ್ಚಳಗೊಂಡಿದೆ.

ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಮಳೆಯಿಂದಾಗಿ ನದಿ–ತೊರೆಗಳು ತುಂಬಿ ಹರಿಯುತ್ತಿವೆ. ಭಾರಿ ಮಳೆ ಮುನ್ಸೂಚನೆ ಕಾರಣ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ, ಪ್ರೌಢ ಶಾಲೆಗಳು ಹಾಗೂ ಪಿಯು ಕಾಲೇಜುಗಳಿಗೆ 28ರಂದು ಶುಕ್ರವಾರ ಕೂಡ ಜಿಲ್ಲಾ ಆಡಳಿತ ರಜೆ ಘೋಷಿಸಿದೆ.

ಬಂಟ್ವಾಳ ತಾಲ್ಲೂಕಿನ ಕಲ್ಲಡ್ಕ ಓವರ್‌ಬ್ರಿಜ್ ಕೆಳಭಾಗದಲ್ಲಿ ಗುರುವಾರವೂ ನೀರು ಹರಿದು ಮಂಗಳೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಮೂಲಕ ಪ್ರಯಾಣಿಸಿದವರು ಪ್ರಯಾಸಪಟ್ಟರು. ಸುಬ್ರಹ್ಮಣ್ಯದ ಕುಮಾರಧಾರಾ ನದಿ ತುಂಬಿ ಹರಿದಿದ್ದು ಸ್ನಾನಘಟ್ಟ ಮುಳುಗಡೆ ಆಗಿದೆ. ನೆರೆಯ ಕಾಸರಗೋಡಿನ ಪ್ರಸಿದ್ಧ ಮಧೂರು ಮದನಂತೇಶ್ವರ ಸಿದ್ಧಿವಿನಾಯಕ ದೇವಾಲಯ ಜಲಾವೃತವಾಗಿದೆ.

ಕೊಡಗು ಜಿಲ್ಲೆಯ ಭಾಗಮಂಡಲ ಹಾಗೂ ಮಡಿಕೇರಿ ವ್ಯಾಪ್ತಿಯಲ್ಲಿ ಬುಧವಾರ ಇಡೀ ರಾತ್ರಿ ಭಾರಿ ಮಳೆ ಸುರಿದಿದೆ. ಇದರಿಂದ ಹಾರಂಗಿ ಜಲಾಶಯದ ಒಳಹರಿವು ಸಾವಿರ ಕ್ಯುಸೆಕ್ ದಾಟಿದ್ದು, ರೈತರಲ್ಲಿ ನಿರೀಕ್ಷೆಗಳನ್ನು ಗರಿಗೆದರಿಸಿದೆ.

ಜಲಾಶಯದ ಒಳ ಹರಿವು ಬುಧವಾರ 810 ಕ್ಯುಸೆಕ್ ಇದ್ದದ್ದು, ಗುರುವಾರ 1,425 ಕ್ಯುಸೆಕ್‌ಗೆ ಏರಿಕೆಯಾಗಿದೆ. ಜಲಾಶಯದ ಗರಿಷ್ಠ ಮಟ್ಟ 2,859 ಆಗಿದ್ದು, ಸದ್ಯ 2,832.65 ಅಡಿಗಳಷ್ಟೇ ನೀರಿದೆ.

ಕೊಡಗಿನಲ್ಲಿ ಗುರುವಾರ ಮಳೆ ಅಲ್ಪ ಬಿಡುವು ನೀಡಿದ್ದರೂ, ಬಿರುಗಾಳಿ, ಶೀತಗಾಳಿ ಬೀಸಿತ್ತು. ದಟ್ಟ ಮೋಡಕವಿದ ವಾತಾವರಣವಿದ್ದು, ಜನ ಚಳಿಯಿಂದ ಥರಗುಟ್ಟುತ್ತಿದ್ದಾರೆ.

ಉಡುಪಿ ಜಿಲ್ಲೆಯಾದ್ಯಂತ ಬುಧವಾರ ರಾತ್ರಿ ಧಾರಾಕಾರವಾಗಿ ಸುರಿದಿದ್ದ ಮಳೆ, ಗುರುವಾರ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ವಿರಾಮ ನೀಡಿತ್ತು. ಸಂಜೆ ಸಾಧಾರಣ ಮಳೆ ಸುರಿದಿದೆ.

ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ, ಕೊಪ್ಪ, ಕಳಸ, ಮೂಡಿಗೆರೆ ತಾಲ್ಲೂಕಿನಲ್ಲಿ ಬುಧವಾರ ರಾತ್ರಿ ಧಾರಾಕಾರವಾಗಿ ಮಳೆ ಸುರಿದಿದೆ. ಕುದುರೆಮುಖ, ಸಂಸೆ, ಕೊಟ್ಟಿಗೆಹಾರ ಸುತ್ತಮುತ್ತ ಹೆಚ್ಚು ಮಳೆಯಾಗಿದ್ದು, ಭದ್ರಾ, ಹೇಮಾವತಿ ಮತ್ತು ತುಂಗಾ ನದಿಗಳಲ್ಲಿ ನೀರು ಹರಿವಿನ ಪ್ರಮಾಣ ಜಾಸ್ತಿಯಾಗಿದೆ. ಗುರುವಾರ ಹಲವೆಡೆ ಸಾಧಾರಣ ಮಳೆಯಾಗಿದ್ದು, ಮಲೆನಾಡು ಭಾಗದಲ್ಲಿ ಜೀವಕಳೆ ಬಂದಿದೆ.

ರೈತರಲ್ಲಿ ಆಶಾಭಾವ: ಲಕ್ಕವಳ್ಳಿ ಬಳಿ ಇರುವ ಭದ್ರಾ ಜಲಾಶಯಕ್ಕೆ ಗುರುವಾರ ಒಳಹರಿವು 4,082 ಕ್ಯುಸೆಕ್‌ಗೆ ಏರಿಕೆಯಾಗಿದೆ. ಬುಧವಾರ ಒಳಹರಿವು 2,276 ಕ್ಯುಸೆಕ್ ಇತ್ತು. ಕಳೆದ ವರ್ಷ ಮಳೆ ಕೊರತೆಯಿಂದ ಜಲಾಶಯದಲ್ಲಿ ನೀರಿನ ಪ್ರಮಾಣ ಭಾರಿ ಪ್ರಮಾಣದಲ್ಲಿ ಕಡಿಮೆಯಾಗಿತ್ತು. ವಾರದಿಂದ ಭದ್ರೆಗೆ ಒಳಹರಿವು ಹೆಚ್ಚುತ್ತಿದ್ದು, ಅಚ್ಚುಕಟ್ಟು ಪ್ರದೇಶದ ರೈತರಲ್ಲಿ ಆಶಾಭಾವ ಮೂಡಿದೆ.

186 ಅಡಿ ನೀರಿನ ಸಂಗ್ರಹ ಸಾಮರ್ಥ್ಯದ ಜಲಾಶಯದಲ್ಲಿ ಸದ್ಯ 120.8 ಅಡಿ ನೀರಿನ ಸಂಗ್ರಹವಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಜಲಾಶಯದಲ್ಲಿ 137 ಅಡಿ ನೀರಿನ ಸಂಗ್ರಹವಿತ್ತು. ಭದ್ರಾ ಜಲಾಶಯ ಭರ್ತಿಯಾಗಲು ಇನ್ನೂ 66 ಅಡಿ ನೀರಿನ ಅಗತ್ಯವಿದೆ.

ಲಿಂಗನಮಕ್ಕಿ ಜಲಾಶಯದ ಒಳಹರಿವು 16,984 ಕ್ಯುಸೆಕ್‌ಗೆ ಏರಿಕೆಯಾಗಿದೆ. ಬುಧವಾರ ಒಳಹರಿವು 9,033 ಕ್ಯುಸೆಕ್ ಇತ್ತು. ಜಲಾನಯನ ಪ್ರದೇಶದಲ್ಲಿ ಭಾರಿ ಮಳೆ ಸುರಿಯುತ್ತಿರುವುದರಿಂದ 24 ಗಂಟೆಯಲ್ಲಿ 7,900 ಕ್ಯುಸೆಕ್‌ನಷ್ಟು ಒಳಹರಿವು ಹೆಚ್ಚಳಗೊಂಡಿದೆ. 1,819 ಅಡಿ ನೀರು ಸಂಗ್ರಹ ಸಾಮರ್ಥ್ಯದ ಜಲಾಶಯದಲ್ಲಿ ಗುರುವಾರ 1,747.60 ಅಡಿ ನೀರಿನ ಸಂಗ್ರಹ ಇದೆ. ಕಳೆದ ವರ್ಷ ಇದೇ ಅವಧಿಯಲ್ಲಿ 1,740.20 ಅಡಿ ನೀರಿನ ಸಂಗ್ರಹ ಇತ್ತು.



ವಿರಾಜಪೇಟೆ ಸಮೀಪದ ಆರಮೇರಿ ಗ್ರಾಮದ ಭತ್ತದ ಗದ್ದೆಗಳು ಗುರುವಾರ ಜಲಾವೃತಗೊಂಡಿದ್ದವು.

ಮಳೆ ಎಲ್ಲಿ? ಎಷ್ಟು? (ಸೆಂ.ಮೀಗಳಲ್ಲಿ)	
ದಕ್ಷಿಣ ಕನ್ನಡ ಜಿಲ್ಲೆ	
ಮೂಲ್ಕಿ	30
ಮಂಗಳೂರು ವಿಮಾನ ನಿಲ್ದಾಣ	17
ಧರ್ಮಸ್ಥಳ	15
ಬೆಳ್ತಂಗಡಿ	15
ಉಪ್ಪಿನಂಗಡಿ	14
ಸುಳ್ಯ	11
ಮಂಗಳೂರು	10
ಉಡುಪಿ ಜಿಲ್ಲೆ	
ಕಾಪು	17
ಬ್ರಹ್ಮಾವರ	15
ಉಡುಪಿ	14
ಹೆಬ್ರಿ	10
ಕುಂದಾಪುರ	8
ಕೊಡಗು ಜಿಲ್ಲೆ	
ಭಾಗಮಂಡಲ	21
ಮಡಿಕೇರಿ ಸುತ್ತಮುತ್ತ	15.8
ನಾಪೋಕ್ಲು ವ್ಯಾಪ್ತಿ	13
ಪೊನ್ನಂಪೇಟೆ ಹೋಬಳಿ	12
ಶಿವಮೊಗ್ಗ ಜಿಲ್ಲೆ	
ಮಾಸ್ತಿಕಟ್ಟೆ	11.8
ಹುಲಿಕಲ್	11.7

ದೆಹಲಿಯಲ್ಲಿ ಮಳೆ– ಧಗೆಯಿಂದ ವಿರಾಮ



ದೆಹಲಿಯಲ್ಲಿ ಜನರು ಮಳೆಯಲ್ಲೇ ಸಾಗಿದ ದೃಶ್ಯ –ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಅಧಿಕ ತಾಪಮಾನದಿಂದ ಕಂಗೆಟ್ಟಿದ್ದ ದೆಹಲಿಯಲ್ಲಿ ಗುರುವಾರ ಬೆಳಿಗ್ಗೆ ಸುರಿದ ಮಳೆಯು ತಂಪೆರಚಿದೆ. ಆ ವೇಳೆ ಕನಿಷ್ಠ ಉಷ್ಣಾಂಶವು 28.6 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ತಿಳಿಸಿದೆ.

ಜೂನ್ 29 ಅಥವಾ 30ರಂದು ಮುಂಗಾರು ದೆಹಲಿಯನ್ನು ಪ್ರವೇಶಿಸಲಿದೆ ಎಂದು ಖಾಸಗಿ ಹವಾಮಾನ ಮುನ್ಸೂಚನೆ ಸಂಸ್ಥೆ ಸ್ಕೈಮೆಟ್ ವೆದರ್ ಸರ್ವೀಸಸ್ ಅಂದಾಜಿಸಿತ್ತು. ಆದರೆ ಎರಡು ದಿನಗಳ ಮೊದಲೇ ಇಲ್ಲಿ ಮಳೆಯಾಗಿದೆ.

ಜೂನ್‌ನಲ್ಲಿ ಒಂಬತ್ತು ದಿನಗಳು ದೆಹಲಿಯಲ್ಲಿ ಬಿಸಿಗಾಳಿ ಬೀಸಿದೆ. 2022 ಮತ್ತು 2023ರ ಜೂನ್‌ನಲ್ಲಿ ಈ ಪರಿಸ್ಥಿತಿ ಇರಲಿಲ್ಲ. ಹೀಗಾಗಿ ಈ ಮಳೆಯಿಂದ ಜನರಿಗೆ ಧಗೆಯಿಂದ ವಿರಾಮ ದೊರೆತಂತಾಗಿದೆ.

ಇಂದು ಬಿಜೆಪಿ ಪ್ರತಿಭಟನೆ

ಬೆಂಗಳೂರು: ರಾಜ್ಯ ಸರ್ಕಾರದ ಜನ ವಿರೋಧಿ ನೀತಿ ಮತ್ತು ಭ್ರಷ್ಟಾಚಾರದ ವಿರುದ್ಧ ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿ ಕಚೇರಿಗಳ ಮುಂದೆ ಶುಕ್ರವಾರ ಪಕ್ಷದಿಂದ ಬೃಹತ್ ಪ್ರತಿಭಟನೆ ನಡೆಯಲಿದೆ.

ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮನವಿ ಮಾಡಿದ್ದಾರೆ.

ಅಲೆಗಳ ಅಬ್ಬರ: 8 ಹೆಕ್ಟೇರ್ ನೆಡುತೋಪು ನಾಶ

ಪ್ರಜಾವಾಣಿ ವಾರ್ತೆ

ಕಾರವಾರ: ಜಿಲ್ಲೆಯಲ್ಲಿ ಗುರುವಾರ ಮಳೆ ಪ್ರಮಾಣ ತಗ್ಗಿದ್ದರೂ ಗಾಳಿಯ ವೇಗ ಹೆಚ್ಚಿದ್ದ ಪರಿಣಾಮ ಅರಬ್ಬಿ ಸಮುದ್ರ ಪ್ರಕ್ಷುಬ್ಧಗೊಂಡಿತ್ತು. ಇದರಿಂದ ಕಾರವಾರ ತಾಲ್ಲೂಕಿನ ದೇವಬಾಗದಲ್ಲಿ 8 ಹೆಕ್ಟೇರ್‌ನಷ್ಟು ಗಾಳಿಗಿಡಗಳ ನೆಡುತೋಪು ನಾಶವಾಗಿದೆ.

‘ಗಾಳಿಗಿಡಗಳ ನೆಡುತೋಪಿಗೆ ಸಮೀಪದ ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್‌ಗೆ ಸೇರಿದ ಬೀಚ್ ರೆಸಾರ್ಟ್‌ನ 4 ಕಾಟೇಜ್‌ಗಳು ಅಲೆಗಳ ಅಬ್ಬರಕ್ಕೆ ಹಾನಿಗೀಡಾಗಿವೆ. ಎರಡು ಕಾಟೇಜ್‌ಗಳು ನೀರಿನಲ್ಲಿ ಕೊಚ್ಚಿ ಹೋದರೆ, ಇನ್ನೂ ಎರಡು ಕಾಟೇಜ್‌ಗಳಿಗೆ ಹಾನಿಯಾಗಿದೆ. ₹1 ಕೋಟಿಯಷ್ಟು ನಷ್ಟವಾಗಿದೆ’ ಎಂದು ರೆಸಾರ್ಟ್ ವ್ಯವಸ್ಥಾಪಕರು ತಿಳಿಸಿದ್ದಾರೆ.

‘ಸಮುದ್ರದ ಅಲೆಗಳು ನಿರೀಕ್ಷಿತ ಮಟ್ಟಕ್ಕಿಂತ ಮೇಲಕ್ಕೆ ಅಪ್ಪಳಿಸುವ ಪರಿಣಾಮ ಗಾಳಿಗಿಡಗಳ ನೆಡುತೋಪು ಕೊಚ್ಚಿ ಹೋಗಿದೆ. ನೂರಾರು ಮರಗಳು, ಗಿಡಗಳು ಬುಡ ಸಮೇತ ಕಿತ್ತು ಸಮುದ್ರ ಪಾಲಾಗಿವೆ. 8 ಹೆಕ್ಟೇರ್ ನಷ್ಟು ನಷ್ಟವಾಗಿದೆ. ಕಳೆದ ವರ್ಷ ಏಳು ಹೆಕ್ಟೇರ್ ಪ್ರದೇಶದಲ್ಲಿ ಗಿಡಮರ ನಾಶವಾಗಿದ್ದವು’ ಎಂದು ಕಾರವಾರ ಅರಣ್ಯ ಉಪ ಸಂರಕ್ಷಣಾಧಿಕಾರಿ (ಡಿಸಿಎಫ್) ರವಿಶಂಕರ ತಿಳಿಸಿದ್ದಾರೆ.

ಸತತಮಳೆಯಿಂದಸಿದ್ದಾಪುರತಾಲ್ಲೂಕಿನ ಹಸ್ವಿಗುಳಿ ಗ್ರಾಮದಲ್ಲಿ ಗುಡ್ಡ ಕುಸಿದಿದೆ. ಸಮೀಪದಲ್ಲಿದ್ದ ಮನೆಗಳಿಗೆ ಹಾನಿಯಾಗಿಲ್ಲ. ಬುಧವಾರ ರಾತ್ರಿ ಹೊನ್ನಾವರ–ಸಾಗರ ರಾಷ್ಟ್ರೀಯ ಹೆದ್ದಾರಿ 206ರ ಭಾಸ್ಕೇರ ಸಮೀಪ ಗುಡ್ಡ ಕುಸಿದಿದ್ದರಿಂದ ಕೆಲ ಕಾಲ ಸಂಚಾರಕ್ಕೆ ಅಡ್ಡಿ ಉಂಟಾಗಿತ್ತು.



ಕಾರವಾರ ತಾಲ್ಲೂಕಿನ ದೇವಬಾಗದಲ್ಲಿರುವ ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್‌ಗೆ ಸೇರಿದ ಬೀಚ್ ರೆಸಾರ್ಟ್‌ನ ಕಾಟೇಜ್‌ನ ಅಡಿಭಾಗ ಸಮುದ್ರದ ಅಲೆಗಳ ಅಬ್ಬರಕ್ಕೆ ಕೊಚ್ಚಿಹೋಗಿದೆ

ಸರ್ಕಾರದ ನಿರ್ಲಕ್ಷ್ಯದಿಂದ ಏಥರ್ ಮಹಾರಾಷ್ಟ್ರಕ್ಕೆ: ಬೆಲ್ಲದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ನಿರ್ಲಕ್ಷ್ಯದಿಂದ ಏಥರ್ ಎನರ್ಜಿ ಕಂಪನಿ ರಾಜ್ಯದಲ್ಲಿ ಬಂಡವಾಳ ಹೂಡಿಕೆಯಿಂದ ಹಿಂದಕ್ಕೆ ಸರಿದು ಮಹಾರಾಷ್ಟ್ರಕ್ಕೆ ಹೋಗಿದೆ. ಇದರಿಂದ ರಾಜ್ಯಕ್ಕೆ ನಷ್ಟವಾಗಿದೆ ಎಂದು ವಿಧಾನ ಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ್ ಬೆಲ್ಲದ ಹೇಳಿದ್ದಾರೆ.

ಈ ಕಂಪನಿಯು ರಾಜ್ಯದಲ್ಲಿ ಸುಮಾರು ₹2,000 ಕೋಟಿ ಹೂಡಿಕೆ ಮಾಡಿ 4,000 ಮಂದಿಗೆ ಉದ್ಯೋಗ ಕಲ್ಪಿಸಲು ಆಸಕ್ತಿ ತೋರಿಸಿತ್ತು. ಆದರೆ, ರಾಜ್ಯ ಸರ್ಕಾರ ಸರಿಯಾಗಿ ಸ್ಪಂದಿಸದ ಕಾರಣ ಏಥರ್ ಮಹಾರಾಷ್ಟ್ರಕ್ಕೆ ಹೋಗಿದೆ ಎಂದು ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏಥರ್ ಎನರ್ಜಿ ಬೆಂಗಳೂರಿನಲ್ಲಿ ಕೇಂದ್ರ ಸ್ಥಾನ ಹೊಂದಿರುವ ಕಂಪನಿ. ರಾಜ್ಯದಲ್ಲಿ ಬಂಡವಾಳ ಹೂಡಲು ವಿಪುಲ ಅವಕಾಶಗಳಿದ್ದರೂ ರಾಜ್ಯದ ಕಾಂಗ್ರೆಸ್ ಸರ್ಕಾರ ಕಂಪನಿ ಜತೆ ಮಾತುಕತೆ ನಡೆಸಿ ಹೂಡಿಕೆಗೆ ಮನವೊಲಿಸುವಲ್ಲಿ ವಿಫಲವಾಗಿದೆ. ಮುಖ್ಯಮಂತ್ರಿ ಕೂಡಾ ಮಾತುಕತೆ ನಡೆಸಿಲ್ಲ ಎಂದು ದೂರಿದ್ದಾರೆ.

ಸರ್ಕಾರ ಇನ್ನು ಮುಂದಾದರೂ ರಾಜ್ಯದಲ್ಲಿ ಬಂಡವಾಳ ಹೂಡಿಕೆ ಹೆಚ್ಚಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ಕಂಪನಿಗಳನ್ನು ಆಕರ್ಷಿಸಲು ಅಗತ್ಯ ಕ್ರಮಕೈಗೊಳ್ಳಬೇಕು. ಇಲ್ಲವಾದರೆ ಏಥರ್ ಎನರ್ಜಿಯಂತೆ ಇತರೆ ಕಂಪನಿಗಳು ಕೂಡ ರಾಜ್ಯದಿಂದ ಹಿಂದೆ ಸರಿಯುವ ಪರಿಸ್ಥಿತಿ ಎದುರಾಗಬಹುದು. ಇದು ರಾಜ್ಯದ ಬೆಳವಣಿಗೆಯ ಮೇಲೆ ಪರಿಣಾಮ ಬೀರಲಿದೆ ಎಂದು ಬೆಲ್ಲದ ಹೇಳಿದ್ದಾರೆ.

ರಾಜ್ಯಕ್ಕೆ ಹೂಡಿಕೆ ಮಾಡಲು ಮುಂದಾಗುವ ಕಂಪನಿಗಳನ್ನು ಪ್ರಧಾನಿ ಮೋದಿ ಅವರು ಗುಜರಾತ್‌ಗೆ ಸೆಳೆಯುತ್ತಿದ್ದಾರೆ ಎನ್ನುವ ಆರೋಪ ಮಾಡುವ ಕಾಂಗ್ರೆಸ್ ನಾಯಕರು ಮೊದಲು ತಮಗೆ ಸಿಕ್ಕ ಅವಕಾಶವನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದಿದ್ದಾರೆ.

ದೆಹಲಿಯಲ್ಲಿ ರಾಜ್ಯದ ಸಂಸದರ ಜತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಭೆ

‘ನೆಲ, ಜಲ ರಕ್ಷಣೆಗೆ ಒಕ್ಕೊರಲಿನಿಂದ ಯತ್ನಿಸಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ರಾಜ್ಯದ ನೆಲ, ಜಲ, ಸಂಸ್ಕೃತಿ, ಸಂಪನ್ಮೂಲದ ಅಭಿವೃದ್ಧಿಗಾಗಿ ರಾಜ್ಯದ ಸಂಸದರೆಲ್ಲರೂ ಒಕ್ಕೊರಲಿನಿಂದ ಒಂದೇ ಧ್ವನಿಯಲ್ಲಿ ಪ್ರಯತ್ನಿಸುವ ಅಗತ್ಯವಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನವದೆಹಲಿಯಲ್ಲಿ ಗುರುವಾರ ನಡೆದ ರಾಜ್ಯದ ಸಂಸದರ ಜತೆಗಿನ ಸಭೆಯಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದರು.

‘ಮೇಕೆದಾಟು ಯೋಜನೆಗೆ ಕೇಂದ್ರದ ಅನುಮತಿ ಅಗತ್ಯವಿದೆ. ಭದ್ರಾ ಯೋಜನೆ ಬಗ್ಗೆಯೂ ಪ್ರಯತ್ನ ಮುಂದುವರಿಸಬೇಕಾಗಿದೆ. ಕೇಂದ್ರದ ಬಜೆಟ್‌ನಲ್ಲೇ ಘೋಷಣೆ ಮಾಡಿ ಒಂದು ವರ್ಷ ಕಳೆದಿದೆ’ ಎಂದರು. ಭದ್ರಾ ಮೇಲ್ದಂಡೆ ಯೋಜನೆಗೆ ಹಣ ಕೊಡಿಸಲು ಸಭೆಯಲ್ಲಿದ್ದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಸಿದ್ದರಾಮಯ್ಯ ಮನವಿ ಮಾಡಿದರು.

’ಕಲ್ಯಾಣ ಕರ್ನಾಟಕದ ರಾಯಚೂರಿಗೆ ಏಮ್ಸ್ ನೀಡಲು ಮನವಿ ಸಲ್ಲಿಸಿದ್ದೇವೆ. ಇದರ ಈಡೇರಿಕೆ ಅಗತ್ಯವಿದೆ. ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಕಲ್ಯಾಣ ಕರ್ನಾಟಕ ಹಿಂದುಳಿದಿದೆ. ಏಮ್ಸ್ ಬಂದರೆ ಅಭಿವೃದ್ಧಿ ಸಾಧ್ಯ’ ಎಂದು ಹೇಳಿದರು.

‘18,172 ಕೋಟಿ ಬರ ಪರಿಹಾರ ಕೇಳಿದ್ದೆವು. ಪೂರ್ತಿ ಬಂದಿಲ್ಲ. ಇದಕ್ಕಾಗಿ ಪ್ರಯತ್ನಿಸುವ ಅಗತ್ಯವಿದೆ’ ಎಂದರು.

‘ರಾಜ್ಯದ ಕರಾವಳಿ ಭಾಗಗಳ ಅಭಿವೃದ್ಧಿಗಾಗಿ ಉಡಾನ್ ಯೋಜನೆಯಲ್ಲಿ ಸಲ್ಲಿಸಿರುವ ಪ್ರಸ್ತಾವನೆ ನಾಗರಿಕ ವಿಮಾನಯಾನ ಇಲಾಖೆಯಲ್ಲಿ ಬಾಕಿ ಇದೆ. ಇದರ ಈಡೇರಿಕೆಗೆ ಪ್ರಯತ್ನಿಸಬೇಕಾಗಿದೆ’ ಎಂದು ಸಭೆಯ ಗಮನಕ್ಕೆ ತಂದರು.

‘ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಏರ್ ಕಾರ್ಗೊ ಕಾಂಪ್ಲೆಕ್ಸ್ ಆಗಿ ಪರಿಗಣಿಸಲು ಪ್ರಸ್ತಾವನೆ ಸಲ್ಲಿಸಿದ್ದೇವೆ. ಇದರಿಂದ ರಫ್ತು ಹೆಚ್ಚಾಗಿ ಆರ್ಥಿಕ ಚಟುವಟಿಕೆ ವೇಗಗೊಳ್ಳುತ್ತದೆ’ ಎಂದು ಅವರು ಹೇಳಿದರು.

‘ಮೈಸೂರು ಅಥವಾ ಹಾಸನಕ್ಕೆ ಮತ್ತೊಂದು ಐಐಟಿ ಬೇಕು ಎಂಬ ಪ್ರಸ್ತಾವ ಸಲ್ಲಿಸಿದ್ದೇವೆ. ಇದು ಈಡೇರಿಸಬೇಕಾಗಿದೆ. ಕಸ್ತೂರಿ ರಂಗನ್ ವರದಿ ಸಂಪೂರ್ಣವಾಗಿ ತಿರಸ್ಕರಿಸಲು ಮನವಿ ಮಾಡಿದ್ದೇವೆ. ಇದನ್ನು ಕೂಡಲೇ ಅಂಗೀಕರಿಸಿ ಪಶ್ಚಿಮಘಟ್ಟದ ಜನರಿಗೆ ನೆಮ್ಮದಿ ಒದಗಿಸಬೇಕು’ ಎಂದು ಕೇಂದ್ರ ಸಚಿವರಿಗೆ ಮನವಿ ಮಾಡಿದರು.

‘ರಾಜ್ಯವು ರೈಲ್ವೆ ಸಂಪರ್ಕದಲ್ಲಿ ಹಿಂದುಳಿದಿದೆ. ಆದ್ದರಿಂದ, ಆದ್ಯತೆ ಮೇಲೆ ರಾಜ್ಯಕ್ಕೆ ಹೆಚ್ಚು ಅನುದಾನ ಒದಗಿಸಿ ರೈಲ್ವೆ ಸಂಪರ್ಕ ಹೆಚ್ಚಿಸಲು ಆದ್ಯತೆ ಮೇಲೆ ಹೆಚ್ಚಿನ ಅನುದಾನ ನೀಡಬೇಕು’ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರಿಗೆ ಸಿದ್ದರಾಮಯ್ಯ ಮನವಿ ಮಾಡಿದರು.

‘15ನೇ ಹಣಕಾಸು ಆಯೋಗದಲ್ಲಿ ರಾಜ್ಯಕ್ಕೆ ಆಗಿರುವ ಅನ್ಯಾಯವನ್ನು ಸರಿಪಡಿಸಲು 16ನೇ ಆಯೋಗದ ಮುಂದೆ ಪ್ರಬಲ ವಾದ ಮಂಡಿಸಬೇಕಾಗಿದೆ’ ಎಂದರು.

‘ಈ ಎಲ್ಲ ಬೇಡಿಕೆ, ಯೋಜನೆ, ಪ್ರಸ್ತಾವನೆಗಳ ಮಂಜೂರಾತಿಗೆ ಮನವಿ ಮಾಡುತ್ತೇನೆ. ಇದಕ್ಕಾಗಿಯೇ ಸಭೆ ನಡೆಸುತ್ತಿದ್ದೇವೆ. ರಾಜ್ಯದ ಅಭಿವೃದ್ಧಿ ಒಂದೇ ನಮ್ಮ ಗುರಿ. ಇದರಲ್ಲಿ ರಾಜಕೀಯ, ಟೀಕೆ, ಭಾವನಾತ್ಮಕ ಆರೋಪಗಳ ಅಗತ್ಯವಿಲ್ಲ. ರಾಜ್ಯದ ಅಭಿವೃದ್ಧಿಗೆ ಸೌಹಾರ್ದಯುತವಾಗಿ ಪ್ರಯತ್ನಿಸೋಣ’ ಎಂದು ಮನವಿ ಮಾಡಿದರು.

ರಾಜ್ಯದ ಸಂಸದರಾದ ಮಲ್ಲಿಕಾರ್ಜುನ ಖರ್ಗೆ, ಎಚ್‌.ಡಿ. ದೇವೇಗೌಡ, ಡಾ.ಡಿ.ವೀರೇಂದ್ರ ಹೆಗ್ಗಡೆ, ರಮೇಶ ಜಿಗಜಿಣಗಿ, ಕೋಟ ಶ್ರೀನಿವಾಸ ಪೂಜಾರಿ, ಬಿ.ವೈ. ರಾಘವೇಂದ್ರ, ಪ್ರಿಯಾಂಕಾ ಜಾರಕಿಹೊಳಿ ಸಭೆಯಲ್ಲಿ ಭಾಗವಹಿಸಿರಲಿಲ್ಲ.



ನವದೆಹಲಿಯಲ್ಲಿ ಗುರುವಾರ ನಡೆದ ರಾಜ್ಯ ಸಂಸದರ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ರಾಜ್ಯದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಸಮಾಲೋಚಿಸಿದರು. ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಎಚ್‌ಡಿ.ಕುಮಾರಸ್ವಾಮಿ, ವಿ.ಸೋಮಣ್ಣ ಇದ್ದಾರೆ

ಕಾಟಾಚಾರದ ಸಭೆ: ಅಶೋಕ ಟೀಕೆ

ಬೆಂಗಳೂರು: ಕೇಂದ್ರ ಸರ್ಕಾರದೊಂದಿಗೆ ಯಾವಾಗಲೂ ಸಂಘರ್ಷ ಮಾಡುವ ಮುಖ್ಯಮಂತ್ರಿ ಸಿದ್ದರಾಮಯ್ಯ ದೆಹಲಿಯಲ್ಲಿ ನಡೆಸಲಿರುವುದು ಕಾಟಾಚಾರದ ಸಭೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌.ಅಶೋಕ ಟೀಕಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಕೇಂದ್ರ ಮತ್ತು ರಾಜ್ಯ ಸರ್ಕಾರದ ನಡುವೆ ಯಾವಾಗಲೂ ಸೌಹಾರ್ದತೆ ಇರಬೇಕು. ಅಧಿಕಾರ ಇಂದು ಬರುತ್ತದೆ. ಮುಂದೆ ಹೋಗುತ್ತದೆ. ಹೀಗೆ ಸಂಘರ್ಷ ಮಾಡಿಕೊಳ್ಳಲು ಇದು ಭಾರತ–ಪಾಕಿಸ್ತಾನ ಅಲ್ಲ. ಕರ್ನಾಟಕದಲ್ಲಿ ಯಾವುದೇ ಪಕ್ಷ ದೀರ್ಘವಾಗಿ ಆಡಳಿತ ನಡೆಸಿಲ್ಲ. ಇದು ಬದಲಾಗುತ್ತಲೇ ಇರುತ್ತದೆ. ಕೇಂದ್ರ ಸರ್ಕಾರ ನೀಡಿರುವ ಹಣವನ್ನೇ ಖರ್ಚು ಮಾಡಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಇನ್ನು ಜನರು ಬೆಲೆ ಏರಿಕೆಗಳಿಗೆ ತಯಾರಿರಬೇಕು ಎಂದರು.

‘ಈ ಭ್ರಷ್ಟ, ದುಷ್ಟ ಸರ್ಕಾರದ ವಿರುದ್ಧ ನಾವು ಹೋರಾಟ ಮಾಡಿಯೇ ಒಬ್ಬ ಸಚಿವರನ್ನು ಬೀಳಿಸಿದ್ದೇವೆ. ಮುಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನೂ ಬೀಳಿಸುತ್ತೇವೆ’ ಎಂದು ಅವರು ಎಚ್ಚರಿಕೆ ನೀಡಿದರು.

ಕೆಂಪೇಗೌಡರು ಒಬ್ಬರ ಸ್ವತ್ತಲ್ಲ: ನಾಡಪ್ರಭು ಕೆಂಪೇಗೌಡರು ಯಾರೋ ಒಬ್ಬರ ಸ್ವತ್ತಲ್ಲ. ಅವರು ಎಲ್ಲ ಸಮುದಾಯಗಳನ್ನು ಒಟ್ಟಿಗೆ ತೆಗೆದುಕೊಂಡು ಹೋಗಿದ್ದರು. ಆದರೆ, ಕಾಂಗ್ರೆಸ್ ನಾಯಕರು ಕೆಂಪೇಗೌಡರ ಸಮುದಾಯವನ್ನೇ ಒಂದಾಗಿರಲು ಬಿಡುತ್ತಿಲ್ಲ ಎಂದು ಅವರು ಹೇಳಿದರು.

ಮಾಜಿ ಪ್ರಧಾನಿ ಎಚ್‌.ಡಿ.ದೇವೇಗೌಡ ಅವರು ಒಕ್ಕಲಿಗ ಸಮುದಾಯದ ಪ್ರಶ್ನಾತೀತ ನಾಯಕರು. ಕೆಂಪೇಗೌಡ ಜಯಂತಿಗೆ ಅವರನ್ನು ಗೌರವದಿಂದ ಆಹ್ವಾನಿಸಬೇಕಿತ್ತು. ಈ ಜಯಂತಿ ರಾಜಕೀಯಕ್ಕೆ ವೇದಿಕೆಯಾಗಬಾರದು. ಇದು ಕಾಂಗ್ರೆಸ್ ಸರ್ಕಾರದ ದ್ವೇಷದ ರಾಜಕಾರಣವಾಗಿದೆ ಎಂದು ತಿಳಿಸಿದರು.

ರಾಜ್ಯದ ನೆರವು ಕೇಳಿದ ಸಚಿವರು

ನವದೆಹಲಿ: ಕೇಂದ್ರ ಸರ್ಕಾರದಿಂದ ಅನುಮೋದನೆಗೆ ಬಾಕಿ ಇರುವ ಹತ್ತು ಹಲವು ಯೋಜನೆಗಳ ಮಂಜೂರಾತಿಗೆ ಸಹಕಾರ ನೀಡುವಂತೆ ಮುಖ್ಯಮಂತ್ರಿ ಅವರು ಕೇಂದ್ರ ಸಚಿವರು ಹಾಗೂ ಸಂಸದರಲ್ಲಿ ಮನವಿ ಮಾಡಿಕೊಂಡರು. ರಾಜ್ಯದಲ್ಲಿ ನನೆಗುದಿಗೆ ಬಿದ್ದಿರುವ ರೈಲ್ವೆ ಯೋಜನೆಗಳನ್ನು ಪೂರ್ಣಗೊಳಿಸಲು ರಾಜ್ಯ ಸರ್ಕಾರ ಅಗತ್ಯ ಅನುದಾನ ನೀಡುವಂತೆ ಕೇಂದ್ರ ಸಚಿವರು ಆಗ್ರಹಿಸಿದರು. ಕೇಂದ್ರ ಸಚಿವರ ಬೇಡಿಕೆಗೆ ಅವಕ್ಕಾದ ಮುಖ್ಯಮಂತ್ರಿ, ಸಹಕಾರ ಕೋರಲು ಬಂದ ನಮ್ಮಲ್ಲೇ ಇವರು ಅನುದಾನ ಕೇಳುತ್ತಿದ್ದಾರಲ್ಲ ಎಂದು ಉದ್ಗರಿಸಿದರು.

ದೇವದಾರಿಯಲ್ಲಿ ಗಣಿಗಾರಿಕೆ ನಡೆಸಲು ರಾಜ್ಯ ಸರ್ಕಾರ ಅಗತ್ಯ ನೆರವು ನೀಡಬೇಕು. ಅರಣ್ಯ ಸಚಿವರು ನೆಪ ಹೇಳಿ ಇದಕ್ಕೆ ಅಡ್ಡಗಾಲು ಹಾಕಬಾರದು ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಅವರಿಗೆ ಮನವಿ ಮಾಡಿದರು ಅವರು ಎಂದು ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಗಣ್ಯರ ಜಯಂತಿಗೆ ಸರ್ಕಾರಿ ರಜೆ ರದ್ದಾಗಲಿ: ಜಿ.ಟಿ. ದೇವೇಗೌಡ

ಮೈಸೂರು: ‘ಮಹಾತ್ಮರು, ಹೋರಾಟಗಾರರ ಜಯಂತಿಗಳಿಗೆ ಸಾರ್ವತ್ರಿಕ ರಜೆ ನೀಡುವುದನ್ನು ಸರ್ಕಾರ ರದ್ದುಗೊಳಿಸಬೇಕು. ಬದಲಾಗಿ ಬಡವರಿಗೆ ಸರ್ಕಾರಿ ಕಚೇರಿಗಳಲ್ಲಿ ಸಕಾಲದಲ್ಲಿ ಸಕಲ ಸೇವೆಗಳೂ ಸಿಗುವಂತೆ ಆಗಬೇಕು’ ಎಂದು ಶಾಸಕ ಜಿ.ಟಿ. ದೇವೇಗೌಡ ಪ್ರತಿಪಾದಿಸಿದರು.



ಜಿಲ್ಲಾಡಳಿತವು ಗುರುವಾರ ಆಯೋಜಿಸಿದ್ದ ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಕೆಂಪೇಗೌಡ ಜಯಂತಿಗೆ ಸಾರ್ವತ್ರಿಕ ರಜೆ ಘೋಷಿಸಬೇಕು’ ಎಂಬ ಸಭಿಕರೊಬ್ಬರ ಮನವಿಗೆ ಪ್ರತಿಕ್ರಿಯಿಸಿದ ಅವರು ‘ಈಗಾಗಲೇ ಸರ್ಕಾರಿ ಕಚೇರಿಗಳಲ್ಲಿ ಕೆಲಸ ದಿನಗಳು ಕಡಿಮೆಯಾಗಿವೆ. ವಾರದಲ್ಲಿ ಎರಡ್ಮೂರು ದಿನ ಮಾತ್ರ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ’ ಎಂದರು.

ಪಾನಿಪುರಿ: ಕೃತಕ ಬಣ್ಣ ನಿಷೇಧ ಸಾಧ್ಯತೆ

ಬೆಂಗಳೂರು: ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯು ರಾಜ್ಯದ ವಿವಿಧೆಡೆ ಪಾನಿಪುರಿ ಹಾಗೂ ಮಸಾಲಪುರಿ ಮಾದರಿಗಳನ್ನು ಪರಿಶೀಲಿಸಿದ್ದು, ಇವುಗಳಿಗೆ ಬಳಸುವ ಪದಾರ್ಥದಲ್ಲಿ ಕೃತಕ ಬಣ್ಣ ಬಳಸುವುದು ದೃಢಪಟ್ಟಿದೆ.

ಸಂಗ್ರಹಿಸಲಾದ 260 ಮಾದರಿಗಳಲ್ಲಿ 41 ಮಾದರಿಗಳು ಅಸುರಕ್ಷಿತವೆಂದು ವರದಿ ಬಂದಿದ್ದು, ಕೃತಕ ಬಣ್ಣ ಬಳಸಿರುವುದು ಪ್ರಯೋಗಾಲಯದ ವರದಿಯಿಂದ ದೃಢಪಟ್ಟಿದೆ. ಖಟ್ಟಾ–ಮೀಠಾ ಸಾಸ್‌ನಲ್ಲಿ ಆರೋಗ್ಯಕ್ಕೆ ಹಾನಿಕಾರಕವಾದ ರಾಸಾಯನಿಕ ಅಂಶ ಪತ್ತೆಯಾಗಿದೆ. 18 ಮಾದರಿಗಳು ಕಳಪೆ ಗುಣಮಟ್ಟದಿಂದ ಕೂಡಿದೆ. ಇನ್ನೂ 4–5 ಮಾದರಿಗಳ ಫಲಿತಾಂಶ ಬರಬೇಕಿದ್ದು, ವರದಿ ಬಂದ ಬಳಿಕ ಪಾನಿಪುರಿ ಹಾಗೂ ಮಸಾಲಪುರಿ ಪದಾರ್ಥಗಳಿಗೆ ಬಳಸುವ ಕೃತಕ ಬಣ್ಣ ನಿಷೇಧದ ಬಗ್ಗೆ ಇಲಾಖೆ ನಿರ್ಧಾರ ಕೈಗೊಳ್ಳಲಿದೆ.

‘ಪಾನಿಪುರಿ ಹಾಗೂ ಮಸಾಲಪುರಿ ಬಗ್ಗೆ ಸಾಕಷ್ಟು ದೂರು ಬಂದಿದ್ದರಿಂದ ಮಾದರಿಗಳನ್ನು ಸಂಗ್ರಹಿಸಿ, ಪರೀಕ್ಷಿಸಲಾಗಿದೆ. 4-5 ರಾಸಾಯನಿಕಗಳನ್ನು ಬಳಸಿರುವುದು ಪರಿಶೀಲನೆ ವೇಳೆ ತಿಳಿದು ಬಂದಿದೆ. ಪಾನಿಪುರಿ ಹಾಗೂ ಮಸಾಲಪುರಿಗೆ ಬಳಸುವ ರಾಸಾಯನಿಕಗಳನ್ನು ನಿಷೇಧಿಸುವ ಸಾಧ್ಯತೆಯಿದೆ’ ಎಂದು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಆಯುಕ್ತ ಕೆ. ಶ್ರೀನಿವಾಸ್ ತಿಳಿಸಿದರು.

‘ಹೊಸೂರಿನಲ್ಲಿ ವಿಮಾನ ನಿಲ್ದಾಣ’

ಒಂದನೇ ಪುಟದಿಂದ...

‘ಡಿಎಂಕೆ ಅಧಿಕಾರಕ್ಕೆ ಬಂದ ಬಳಿಕ ತಮಿಳುನಾಡು ಎಲ್ಲ ಕ್ಷೇತ್ರಗಳಲ್ಲಿ ವ್ಯಾಪಕ ಪ್ರಗತಿ ದಾಖಲಿಸುತ್ತಿದ್ದು, 2022ರ ರಫ್ತು ಸನ್ನದ್ಧತೆ ಸೂಚ್ಯಂಕದಲ್ಲಿ ಅತ್ಯುತ್ತಮ ಪ್ರಗತಿ ದಾಖಲಿಸಿದೆ’ ಎಂದರು.

‘ಮೋಟರ್ ವಾಹನ, ಎಂಜಿನ್‌ಗಳ ಬಿಡಿಭಾಗಗಳು, ಚರ್ಮದ ಉತ್ಪನ್ನಗಳು ಹಾಗೂ ಎಲೆಕ್ಟ್ರಾನಿಕ್ಸ್ ಉತ್ಪನ್ನಗಳ ರಫ್ತಿನಲ್ಲಿ ಇಡೀ ದೇಶದಲ್ಲಿ ತಮಿಳುನಾಡು ಮುಂಚೂಣಿಯಲ್ಲಿ ಗುರುತಿಸಿಕೊಂಡಿದೆ’ ಎಂದು ಸ್ಟಾಲಿನ್ ಹೇಳಿದರು.

‘ಎಲೆಕ್ಟ್ರಾನಿಕ್ಸ್, ಎಲೆಕ್ಟ್ರಿಕ್ ವಾಹನಗಳ ತಯಾರಿಕೆ ಕ್ಷೇತ್ರದಲ್ಲಿ ಹೊಸೂರು ಕೆಲವು ವರ್ಷಗಳಿಂದ ಈಚೆಗೆ ದೊಡ್ಡ ಪ್ರಮಾಣದ ಹೂಡಿಕೆಗಳನ್ನು ಆಕರ್ಷಿಸಿದ್ದು, ಹೊಸೂರು ಪಟ್ಟಣದ ಮೂಲಸೌಕರ್ಯ ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರವು ಹಲವು ಯೋಜನೆಗಳನ್ನು ಜಾರಿಗೊಳಿಸಿದೆ’ ಎಂದು ಸ್ಟಾಲಿನ್ ತಿಳಿಸಿದರು.

‘ಧರ್ಮಪುರಿ, ಕೃಷ್ಣಗಿರಿ ಪ್ರಾಂತ್ಯಗಳ ಸಮಗ್ರ ಸಾಮಾಜಿಕ– ಆರ್ಥಿಕ ಅಭಿವೃದ್ಧಿಗಾಗಿ ಹೊಸೂರಿನಲ್ಲಿ ವಿಮಾನ ನಿಲ್ದಾಣ ನಿರ್ಮಿಸುವುದು ಅಗತ್ಯವೆಂದು ಸರ್ಕಾರವು ಪ್ರತಿಪಾದಿಸುತ್ತದೆ’ ಎಂದರು.

ವಿಯೆಟ್ನಾಂನಲ್ಲಿ ತಲೆಮರೆಸಿಕೊಂಡಿದ್ದ ಆರೋಪಿ ಬಂಧನ, ‘ಕ್ರಿಪ್ಟೋ’ದಲ್ಲಿ ಹೂಡಿಕೆ

ಕೋಡೆ ರಮಣಯ್ಯ ವಂಚಿಸಿದ್ದು ₹250 ಕೋಟಿ

• ಎಂ.ಎನ್.ಯೋಗೇಶ್

ಚಿತ್ರದುರ್ಗ: ದುಪ್ಪಟ್ಟು ಹಣದ ಆಮಿಷವೊಡ್ಡಿ ಜಿಲ್ಲೆಯಲ್ಲಿ ಕೆಲಸ ಮಾಡುವ ರೈಲ್ವೆ ಇಲಾಖೆಯ ನೌಕರರಿಂದ ಠೇವಣಿ ಸಂಗ್ರಹಿಸಿ ವಂಚಿಸಿದ್ದ ಆರೋಪಿ ಕೋಡೆ ರಮಣಯ್ಯ ಜಿಲ್ಲೆ, ರಾಜ್ಯ ಮಾತ್ರವಲ್ಲದೇ ದೇಶದ ವಿವಿಧೆಡೆ ₹ 250 ಕೋಟಿಗೂ ಅಧಿಕ ಹಣ ವಂಚಿಸಿದ್ದಾನೆ ಎಂಬ ವಿಷಯ ತನಿಖೆಯಿಂದ ಪತ್ತೆಯಾಗಿದೆ.

ರೈಲ್ವೆ ಇಲಾಖೆಯ ನೌಕರರಿಂದ ₹ 4.80 ಕೋಟಿ ವಂಚಿಸಿ ವಿಯೆಟ್ನಾಂನಲ್ಲಿ ತಲೆಮರೆಸಿಕೊಂಡಿದ್ದ ಆಂಧ್ರಪ್ರದೇಶದ ‘ಕ್ರೌಡ್ ಕ್ಲಬ್ ಇಂಟರ್ ನ್ಯಾಷನಲ್ ಪ್ರೈವೆಟ್ ಲಿಮಿಟೆಡ್’ ಮುಖ್ಯಸ್ಥ ಕೋಡೆ ರಮಣಯ್ಯನನ್ನು ನಗರದ ಸಿಇಎನ್ (ಸೈಬರ್, ಎಕನಾಮಿಕ್ ಆ್ಯಂಡ್ ನಾರ್ಕೋಟಿಕ್) ಅಪರಾಧ ಠಾಣೆ ಪೊಲೀಸರು ಜೂನ್ 11ರಂದು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಪೊಲೀಸರು ಆರೋಪಿಯನ್ನು ವಿಚಾರಣೆಗೆ ಒಳಪಡಿಸಿದಾಗ ಆತ ನೆರೆಯ ಮಹಾರಾಷ್ಟ್ರ, ತಮಿಳುನಾಡು, ಒಡಿಶಾ, ತೆಲಂಗಾಣ, ಆಂಧ್ರಪ್ರದೇಶ, ಕೇರಳದಲ್ಲೂ ವಂಚಿಸಿದ್ದಾಗಿ ತಿಳಿದಿದೆ. ಸದ್ಯ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಸದ್ಯ ಸಿಕ್ಕಿರುವ ದಾಖಲೆಗಳ ಅನುಸಾರ ಆರೋಪಿಯ ವಂಚನೆ ₹ 200 ಕೋಟಿ ಮೀರಿದೆ. ಪ್ರಕರಣ ತನಿಖೆಯನ್ನು ಸಿಐಡಿಗೆ ವಹಿಸಲು ಮನವಿ ಮಾಡಲಾಗಿದೆ

ಧರ್ಮೇಂದ್ರ ಕುಮಾರ್ ಮೀನಾ

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ



ಕೋಡೆ ರಮಣಯ್ಯ

ಚಿಕ್ಕಜಾಜೂರು, ಚಿತ್ರದುರ್ಗದಲ್ಲಿ ಕೆಲಸ ಮಾಡುವ ರೈಲ್ವೆ ಇಲಾಖೆ ನೌಕರರು, ಅವರ ಸಂಬಂಧಿಕರು ₹ 4.80 ಕೋಟಿ ಹಣ ಹೂಡಿಕೆ ಮಾಡಿದ್ದರು. ಆರೋಪಿ ಬಂಧಿತನಾದ ನಂತರ ಈತನ ಹಳೆಯ ಪ್ರಕರಣಗಳೂ ತೆರೆದುಕೊಂಡಿವೆ. ಚಿತ್ರದುರ್ಗದಲ್ಲೇ 2 ಪ್ರಕರಣ, ರಾಯಚೂರು ಸಿಇಎನ್ ಠಾಣೆಯಲ್ಲಿ ಇನ್ನೊಂದು ವಂಚನೆ ಪ್ರಕರಣ ದಾಖಲಾಗಿರುವುದು ಪತ್ತೆಯಾಗಿದೆ.

‘ಆರೋಪಿಯಿಂದ ವಶಕ್ಕೆ ಪಡೆದಿರುವ ಬಾಂಡ್ ಮೌಲ್ಯವೇ ₹ 206 ಕೋಟಿ ಮೀರುತ್ತಿದೆ. ಇನ್ನು ಹೂಡಿಕೆದಾರರ ಬಾಂಡ್ ಪರಿಶೀಲಿಸಿದರೆ ವಂಚನೆಯ ಮೌಲ್ಯ ₹ 250 ಕೋಟಿಗೂ ಹೆಚ್ಚಾಗಬಹುದು. ಆರೋಪಿಯ ಬ್ಯಾಂಕ್ ಖಾತೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಕ್ರಿಪ್ಟೊ ಕರೆನ್ಸಿಯಲ್ಲಿ ಹೂಡಿಕೆ ಮಾಡಿ ಕಳೆದುಕೊಂಡಿದ್ದಾಗಿ ಆರೋಪಿ ತಿಳಿಸಿದ್ದಾನೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

60 ದಿನಗಳಲ್ಲಿ ದುಪ್ಪಟ್ಟು ಹಣ ನೀಡುವುದಾಗಿ ನಂಬಿಸಿದ್ದ ಆರೋಪಿ ಹೂಡಿಕೆದಾರರಿಗೆ 2 ಬಾರಿ ಕರಾರಿನಂತೆ ಹಣ ನೀಡಿದ್ದ. ಹೆಚ್ಚುವರಿಯಾಗಿ ಬಂದ ಎಲ್ಲಾ ಹಣವನ್ನೂ ಸೇರಿಸಿ ಜನರು ಮತ್ತೆ ಹೂಡಿಕೆ ಮಾಡಿದ್ದರು. 3ನೇ ಬಾರಿ ದುಪ್ಪಟ್ಟು ಹಣದ ನಿರೀಕ್ಷೆಯಲ್ಲಿದ್ದಾಗ ಆರೋಪಿ ತಲೆಮರೆಸಿಕೊಂಡಿದ್ದ. ರೈಲ್ವೆ ನೌಕರರು ದೂರು ನೀಡಲು ಹಿಂದೇಟು ಹಾಕಿದ್ದರು. ಗುತ್ತಿಗೆ ನೌಕರರೊಬ್ಬರು ಧೈರ್ಯಮಾಡಿ ಚಿಕ್ಕಜಾಜೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ನಂತರ ಪ್ರಕರಣವನ್ನು ಸಿಇಎನ್ ಠಾಣೆಗೆ ವರ್ಗಾವಣೆ ಮಾಡಲಾಗಿತ್ತು.

‘ಆರೋಪಿ ಕೆಲವರಿಗೆ ವಾಟ್ಸ್‌ಆ್ಯಪ್ ಮೂಲಕ ಕರೆ ಮಾಡಿದ್ದ. ವಾಟ್ಸ್‌ಆ್ಯಪ್‌ನ ಡೇಟಾ– ಐಪಿ ಹುಡುಕಿದಾಗ ಆತ ವಿಯೆಟ್ನಾಂನಲ್ಲಿರುವ ವಿಷಯ ಗೊತ್ತಾಯಿತು. ಆತನ ವಿರುದ್ಧ ಲುಕ್ ಔಟ್ ನೋಟಿಸ್ ಹೊರಡಿಸಲಾಗಿತ್ತು. ಪಾಸ್‌ಪೋರ್ಟ್ ರದ್ದತಿ ಪ್ರಕ್ರಿಯೆಯೂ ಆರಂಭವಾಗಿತ್ತು. ಕೋಲ್ಕತ್ತ ವಿಮಾನ ನಿಲ್ದಾಣಕ್ಕೆ ಬಂದಿಳಿದಾಗ ಆರೋಪಿಯನ್ನು ಬಂಧಿಸಲಾಯಿತು’ ಎಂದು ಪೊಲೀಸರು ತಿಳಿಸಿದರು.

‘ಐಎಂಎ ಮಾದರಿ ಹಣ ವಾಪಸ್ ಕೊಡಿಸಿ’

ಐ ಮಾನಿಟರಿ ಅಡ್ವೈಸರಿ (ಐಎಂಎ) ಕಂಪನಿಯ ಬಹುಕೋಟಿ ವಂಚನೆ ಪ್ರಕರಣದಲ್ಲಿ ಆರೋಪಿಗಳ ಆಸ್ತಿ ಮುಟ್ಟುಗೋಲು ಹಾಕಿಕೊಂಡು, ಮಾರಾಟ ಮಾಡಿ ಆ ಹಣವನ್ನು ಹೂಡಿಕೆದಾರರಿಗೆ ವಾಪಸ್ ನೀಡಲಾಗಿದೆ. ಅದೇರೀತಿ, ಕೋಡೆ ರಮಣಯ್ಯನ ಆಸ್ತಿ ಮುಟ್ಟುಗೋಲು ಹಾಕಿಕೊಂಡು ನಮ್ಮ ಹಣ ವಾಪಸ್ ಕೊಡಿಸಿ’ ಎಂದು ಹಣ ಕಳೆದುಕೊಂಡವರು ಒತ್ತಾಯಿಸಿದರು.

‘ಆರೋಪಿಯನ್ನು ಬಂಧಿಸಿ ಪೊಲೀಸರು ಉತ್ತಮ ಕೆಲಸ ಮಾಡಿದ್ದಾರೆ. ಹಣ ಹೋಯಿತು ಎಂಬ ಆತಂಕದಲ್ಲಿದ್ದ ನಮಗೆ ಭರವಸೆ ಮೂಡಿದೆ’ ಎಂದು ದೂರುದಾರ ಪಿ.ರಮೇಶ್ ತಿಳಿಸಿದರು.

ಬಿಎಸ್‌ವೈ ವಿರುದ್ಧ ಚಾರ್ಜ್‌ಶೀಟ್

ಒಂದನೇ ಪುಟದಿಂದ...

ಯಡಿಯೂರಪ್ಪ ಅವರ ಮೇಲಿನ ಆರೋಪಕ್ಕೆ ಸಂಬಂಧಪಟ್ಟಂತೆ ಹಲವು ಪುರಾವೆಗಳನ್ನು ಸಂಗ್ರಹಿಸಿರುವ ಸಿಐಡಿ ಅಧಿಕಾರಿಗಳು, ತ್ವರಿತಗತಿಯ ವಿಶೇಷ ನ್ಯಾಯಾಲಯ-1ಕ್ಕೆ ಗುರುವಾರ ದೋಷಾರೋಪ ಪಟ್ಟಿ ಸಲ್ಲಿಸಿರುವುದಾಗಿ ಮೂಲಗಳು ಹೇಳಿವೆ.

‘ಪ್ರಕರಣದ ಮೊದಲ ಆರೋಪಿ ಬಿ.ಎಸ್. ಯಡಿಯೂರಪ್ಪ, ಎರಡನೇ ಆರೋಪಿ ಅರುಣ್ ವೈ.ಎಂ, ಮೂರನೇ ಆರೋಪಿ ರುದ್ರೇಶ್ ಎಂ. ಹಾಗೂ ನಾಲ್ಕನೇ ಆರೋಪಿ ಜಿ. ಮರಿಸ್ವಾಮಿ ವಿರುದ್ಧ ಆರೋಪ ಪಟ್ಟಿ ಸಲ್ಲಿಸಲಾಗಿದೆ. ಆರೋಪಿಗಳ ವಿರುದ್ಧ ದೋಷಾರೋಪ ಹೊರಿಸಿರುವ ನ್ಯಾಯಾಧೀಶ ಎನ್.ಎಂ. ರಮೇಶ್ ಅವರು, ವಿಚಾರಣೆಯನ್ನು ಮುಂದೂಡಿದ್ದಾರೆ. ಮುಂದಿನ ವಿಚಾರಣೆ ಸಂದರ್ಭದಲ್ಲಿ ಆರೋಪಿಗಳ ಪರ ವಕೀಲರು ಹಾಜರಾಗುವ ಸಾಧ್ಯತೆ ಇದೆ’ ಎಂದು ಸಿಐಡಿ ಮೂಲಗಳು ಹೇಳಿವೆ.

₹2 ಲಕ್ಷ ನೀಡಿದ್ದ ಆರೋಪಿಗಳು: ‘ಬಾಲಕಿ ತಾಯಿ ಕೃತ್ಯಕ್ಕೆ ಸಂಬಂಧಿಸಿದಂತೆ ಫೋಟೊ ಹಾಗೂ ವಿಡಿಯೊಗಳನ್ನು ಸಾಮಾಜಿಕ ಜಾಲತಾಣದಲ್ಲಿ ಅಪಲೋಡ್ ಮಾಡಿದ್ದರು. ಅದನ್ನು ಗಮನಿಸಿದ್ದ ಬಿ.ಎಸ್.ಯಡಿಯೂರಪ್ಪ, ಇತರೆ ಆರೋಪಿಗಳ ಸಹಾಯದಿಂದ ಬಾಲಕಿ ಹಾಗೂ ತಾಯಿಯನ್ನು ತಮ್ಮ ಮನೆಗೆ ಕರೆಯಿಸಿಕೊಂಡಿದ್ದರು. ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿದ್ದ ವಿಡಿಯೊ ಮತ್ತು ಫೋಟೊಗಳನ್ನು ಅಳಿಸಿ ಹಾಕಿಸಿದ್ದರು. ನಂತರ ಮೊಬೈಲ್‌ನಲ್ಲಿರುವ ವಿಡಿಯೊ ಹಾಗೂ ಫೋಟೊಗಳನ್ನು ಸಹ ಅಳಿಸಿದ್ದರು. ಇದೇ ಸಂದರ್ಭದಲ್ಲಿ ಆರೋಪಿಗಳು, ಬಾಲಕಿಯ ತಾಯಿಗೆ ₹2 ಲಕ್ಷ ನಗದು ನೀಡಿದ್ದರು’ ಎಂಬ ಮಾಹಿತಿಯೂ ಆರೋಪ ಪಟ್ಟಿಯಲ್ಲಿದೆ.

‘354ಎ (ಲೈಂಗಿಕ ಕಿರುಕುಳ), 204 (ಸಾಕ್ಷ್ಯ ನಾಶ) ಹಾಗೂ 214 (ಪ್ರಕರಣ ಮುಚ್ಚಿ ಹಾಕಲು ಆಮಿಷ) ಮತ್ತು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು. ಇದಕ್ಕೆ ಸಂಬಂಧಪಟ್ಟಂತೆ ಪ್ರತಿಯೊಂದು ಪುರಾವೆಯನ್ನೂ ಆರೋಪ ಪಟ್ಟಿ ಜೊತೆ ಲಗತ್ತಿಸಲಾಗಿದೆ’ ಎಂದು ಗೊತ್ತಾಗಿದೆ.

ಯಡಿಯೂರಪ್ಪ ವಿರುದ್ಧ ದೂರು ನೀಡಿದ್ದ ಬಾಲಕಿಯ ತಾಯಿ ಆರೋಗ್ಯ ಸಮಸ್ಯೆಯಿಂದ ತೀರಿಕೊಂಡಿದ್ದಾರೆ.

ಹಣ ಕೊಡಿಸಿದ್ದ ಮೂವರು

‘ಆರೋಪಿಗಳಾದ ಅರುಣ್, ರುದ್ರೇಶ್ ಹಾಗೂ ಮರಿಸ್ವಾಮಿ, ಕೃತ್ಯಕ್ಕೆ ಸಂಬಂಧಪಟ್ಟ ವಿಡಿಯೊವನ್ನು ನೋಡಿದ್ದರು. ಯಡಿಯೂರಪ್ಪ ಹೇಳಿದರೆಂಬ ಕಾರಣಕ್ಕೆ ದೂರುದಾರ ಮಹಿಳೆಯನ್ನು ಸಂಪರ್ಕಿಸಿದ್ದರು. ನಂತರ, ಅವರನ್ನು ಯಡಿಯೂರಪ್ಪ ಬಳಿ ಕರೆಸಿದ್ದರು. ಅವರ ಮನೆಯಲ್ಲಿ ಮಾತುಕತೆ ಆಗಿತ್ತು. ನಂತರ, ದೂರುದಾರ ಮಹಿಳೆಗೆ ಮೂವರು ಆರೋಪಿಗಳು, ₹2 ಲಕ್ಷ ಕೊಡಿಸಿ ಕಳುಹಿಸಿದ್ದರು’ ಎಂಬ ಮಾಹಿತಿ ಆರೋಪ ಪಟ್ಟಿಯಲ್ಲಿದೆ.

‘ಪಕ್ಷದ ನಿರ್ಧಾರ’

ಪ್ರಜಾವಾಣಿ ವಾರ್ತೆ

ಧಾರವಾಡ: ‘ಮುಖ್ಯಮಂತ್ರಿ ಬದಲಾವಣೆ ವಿಷಯ ಹೈಕಮಾಂಡ್ ಮತ್ತು ಶಾಸಕರ ವೇದಿಕೆಯಲ್ಲಿ ತೀರ್ಮಾನವಾಗುತ್ತದೆ. ಯಾರು ಯಾವಾಗ ಮುಖ್ಯಮಂತ್ರಿ ಅಥವಾ ಸಚಿವರಾಗಬೇಕು ಎಂಬುದನ್ನು ಪಕ್ಷ ನಿರ್ಧರಿಸುತ್ತದೆ’ ಎಂದು ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

‘ಸಿದ್ದರಾಮಯ್ಯ ಅವರು ಡಿ.ಕೆ. ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಹುದ್ದೆ ಬಿಟ್ಟುಕೊಡಲಿ’ ಎಂದು ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಚಂದ್ರಶೇಖರ ಸ್ವಾಮೀಜಿ ಅವರ ಹೇಳಿಕೆಗೆ ಗುರುವಾರ ಸುದ್ದಿಗಾರರ ಪ್ರಶ್ನೆಗೆ ಅವರು ಪ್ರತಿಕ್ರಿಯಿಸಿದರು.

‘ಸ್ವಾಮೀಜಿ ಅಭಿಪ್ರಾಯಕ್ಕೂ ಒಂದು ಕಾಲ ಬರುತ್ತದೆ. ಎರಡು ಅಥವಾ ಎರಡೂವರೆ ವರ್ಷಕ್ಕೆ ಪಕ್ಷದ ವೇದಿಕೆಯಲ್ಲಿ ತೀರ್ಮಾನವಾಗುತ್ತದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಪಕ್ಷದಲ್ಲಿ ಎಲ್ಲರಿಗಿಂತ ಬದ್ಧತೆಯುಳ್ಳ ವ್ಯಕ್ತಿ’ ಎಂದರು.

ಮುಖ್ಯಮಂತ್ರಿ ಗದ್ದುಗೆಯ ಸದ್ದುಗದ್ದಲ

ಒಂದನೇ ಪುಟದಿಂದ...

ವೇದಿಕೆಯಲ್ಲಿ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಪಟ್ಟನಾಯಕನಹಳ್ಳಿ ಸ್ಫಟಿಕಪುರಿ ಮಠದ ನಂಜಾವಧೂತ ಸ್ವಾಮೀಜಿ, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ, ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಅವರೂ ಇದ್ದರು.

ಕಾಂಗ್ರೆಸ್‌ನ ಶಾಸಕ ಶಾಮನೂರು ಶಿವಶಂಕರಪ್ಪ ಅವರು, ಸಿದ್ದರಾಮಯ್ಯ ಅವರು ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ಈ ವಿಷಯದಲ್ಲಿ ತಾವು ತಟಸ್ಥ ಎಂದಿದ್ದಾರೆ.

ಶಿವಕುಮಾರ್ ಜತೆಗೆ ಗುರುತಿಸಿಕೊಂಡಿರುವ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, ‘ಅದೂ ಒಂದು ಕಾಲ ಬರುತ್ತದೆ. ಎರಡು ವರ್ಷಕ್ಕೋ, ಎರಡೂವರೆ ವರ್ಷಕ್ಕೋ ಅದೆಲ್ಲ ಪಕ್ಷದ ವೇದಿಕೆಯಲ್ಲಿ ತೀರ್ಮಾನವಾಗುತ್ತದೆ’ ಎಂದು ಪ್ರತಿಪಾದಿಸಿದ್ದಾರೆ.

‘ಸ್ವಾಮೀಜಿ ಹೇಳಿದ ತಕ್ಷಣ ಬಿಟ್ಟುಕೊಡೋಕೆ ಆಗತ್ತಾ?’: ‘ಸ್ವಾಮೀಜಿ ಹೇಳಿದ ತಕ್ಷಣ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡೋಕೆ ಆಗುತ್ತಾ? ಯಾರಾದರೂ ಮುಖ್ಯಮಂತ್ರಿ ಸ್ಥಾನ ಬಿಟ್ಟು ಕೊಡೋಕೆ ಹೋಗ್ತಾರಾ? ಆ ಸ್ವಾಮೀಜಿಗಳು ಅವರ ಸ್ಥಾನ ಬಿಟ್ಟು ಕೊಡ್ತಾರಾ’ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರು ಪ್ರಶ್ನಿಸಿದರು.

ಶಿವಕುಮಾರ್‌ಗೆ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡಬೇಕು ಎಂಬುದಾಗಿ ಸ್ವಾಮೀಜಿ ನೀಡಿದ ಹೇಳಿಕೆಗೆ ತಿರುಗೇಟು ನೀಡಿದ ಅವರು, ‘ಸ್ವಾಮೀಜಿಗೆ ಕೇಳಿ ನೋಡಿ.. ನಾನೇ ಸ್ವಾಮೀಜಿ ಆಗ್ತೇನೆ. ನಾಳೆಯಿಂದಲೇ ನಾನು ಕಾವಿ ಬಟ್ಟೆ ಹಾಕಿಕೊಳ್ಳುತ್ತೇನೆ. ಅವರು ತಮ್ಮ ಸ್ಥಾನ ಬಿಟ್ಟು ಕೊಡುತ್ತಾರಾ’ ಎಂದು ಸವಾಲು ಹಾಕಿದರು.

‘ಅವರೂ (ಮುಖ್ಯಮಂತ್ರಿ) ಬಿಟ್ಟು ಕೊಡಲ್ಲ. ಇವರೂ (ಸ್ವಾಮೀಜಿ) ಸಹ ಬಿಟ್ಟುಕೊಡಲ್ಲ. ಸ್ವಾಮೀಜಿ ಯಾವ ಉದ್ದೇಶದಿಂದ ಹೇಳಿದ್ದಾರೋ ಗೊತ್ತಿಲ್ಲ. ಸದುದ್ದೇಶದಿಂದ ಹೇಳಿದ್ದಾರೋ ದುರುದ್ದೇಶದಿಂದ ಹೇಳಿದ್ದಾರೋ ಗೊತ್ತಿಲ್ಲ. ಎಲ್ಲರಿಗೂ ವಾಕ್ ಸ್ವಾತಂತ್ರ್ಯವಿದೆ, ಮಾತನಾಡುತ್ತಾರೆ. ಮುಂದಿನ 10 ವರ್ಷವೂ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಆಗಿರುತ್ತಾರೆ’ ಎಂದು ರಾಜಣ್ಣ ಹೇಳಿದರು.

‘ಡಿಸಿಎಂ ಹುದ್ದೆ ಬಯಸುವವರು ಹೈಕಮಾಂಡ್ ಬಳಿ ಹೋಗಲಿ’

‘ಹೆಚ್ಚುವರಿ ಉಪಮುಖ್ಯಮಂತ್ರಿ ಹುದ್ದೆಗಳನ್ನು ಸೃಷ್ಟಿಸುವ ಬಗ್ಗೆ ಮಾತನಾಡುವವರು ಮಾಧ್ಯಮಗಳ ಮುಂದೆ ಮಾತನಾಡುವುದರ ಬದಲು ತಮ್ಮ ಆಕಾಂಕ್ಷೆಗಳ ಬಗ್ಗೆ ಹೈಕಮಾಂಡ್ ಬಳಿ ಪರಿಹಾರ ಕಂಡುಕೊಳ್ಳಲಿ’ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಮಾಧ್ಯಮಗಳ ಮುಂದೆ ಮಾತನಾಡಿದರೆ ಪ್ರಚಾರ ಸಿಗುತ್ತದೆಯೇ ಹೊರತು ಪರಿಹಾರ ಸಿಗುವುದಿಲ್ಲ’ ಎಂದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನ ಬದಲಾವಣೆಯ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ‘ತುಂಬಾ ಸಂತೋಷ, ಸಮಯ ವ್ಯರ್ಥ ಮಾಡದೇ ಹೈಕಮಾಂಡ್ ಬಳಿ ಹೋಗಿ ಪರಿಹಾರ ಕಂಡುಕೊಳ್ಳಲಿ. ಎಲ್ಲಿಗೆ ಬೇಕೋ ಅಲ್ಲಿಗೆ ಹೋಗಲಿ. ವೈದ್ಯರ ಬಳಿ ಹೋದರೆ ಔಷಧಿ ಕೊಡುತ್ತಾರೆ. ವಕೀಲರ ಬಳಿ ಹೋದರೆ ನ್ಯಾಯ ಕೊಡಿಸುತ್ತಾರೆ. ಯಾರು ಎಲ್ಲಿಗೆ ಬೇಕಾದರೂ ಹೋಗಲಿ ನನ್ನದೇನೂ ಅಭ್ಯಂತರವಿಲ್ಲ’ ಎಂದು ಶಿವಕುಮಾರ್ ಹೇಳಿದರು.

ಹೈಕಮಾಂಡ್ ತೀರ್ಮಾನ ಅಂತಿಮ ಶಾಮನೂರು


ಪ್ರಜಾವಾಣಿ ವಾರ್ತೆ

ದಾವಣಗೆರೆ: ರಾಜ್ಯ ಸರ್ಕಾರ ಉತ್ತಮವಾದ ಆಡಳಿತ ನೀಡುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿರೋಧ ಪಕ್ಷಗಳನ್ನು ಸಮರ್ಥವಾಗಿ ಎದುರಿಸುತ್ತಿದ್ದಾರೆ. ಮಠಾಧೀಶರು ಹೇಳಿದಾಕ್ಷಣ ಮುಖ್ಯಮಂತ್ರಿಯನ್ನು ಬದಲಾವಣೆ ಆಗುವುದಿಲ್ಲ. ಈ ಕುರಿತು ಹೈಕಮಾಂಡ್ ಕೈಗೊಳ್ಳುವ ತೀರ್ಮಾನವೇ ಅಂತಿಮವಾಗಿರಲಿದೆ ಎಂದು ಶಾಸಕ ಶಾಮನೂರು ಶಿವಶಂಕರಪ್ಪ ತಿಳಿಸಿದರು.

‘ಚನ್ನಗಿರಿಯ ಕಾಂಗ್ರೆಸ್ ಶಾಸಕ ಬಸವರಾಜ ಶಿವಗಂಗಾ ಯಾರದೋ ಮಾತು ಕೇಳಿ ಹೇಳಿಕೆ ನೀಡಿರಬಹುದು. ಯಾರು ಏನೇ ಹೇಳಿದರೂ ನಡೆಯುವುದಿಲ್ಲ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹುದ್ದೆಗೆ ಜಾತಿವಾರು ನೇಮಕಕ್ಕೆ ಸಂಬಂಧಿಸಿದ ಬೆಳವಣಿಗೆಯನ್ನು ಪಕ್ಷದ ವರಿಷ್ಠರು ಗಮನಿಸುತ್ತಿದ್ದಾರೆ. ಮುಖ್ಯಮಂತ್ರಿ ಬದಲಾವಣೆಯ ವಿಚಾರದಲ್ಲಿ ನಾನು ತಟಸ್ಥನಾಗಿರುತ್ತೇನೆ. ಹೈಕಮಾಂಡ್ ಸೂಕ್ತ ತೀರ್ಮಾನ ಕೈಗೊಳ್ಳಲಿದೆ’ ಎಂದು ಅವರು ಗುರುವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದರು.

ಹಿಂದುಳಿದ ವರ್ಗಗಳ ಆಯೋಗಕ್ಕೆ ಜಿ.ಎಸ್. ಸಂಗ್ರೇಶಿ ಅಧ್ಯಕ್ಷ

ಬೆಂಗಳೂರು: ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ನೂತನ ಅಧ್ಯಕ್ಷರನ್ನಾಗಿ ಗದಿಗೆಪ್ಪ ಸಣ್ಣಬಸಪ್ಪ ಸಂಗ್ರೇಶಿ (ಜಿ.ಎಸ್. ಸಂಗ್ರೇಶಿ) ಅವರನ್ನು ನೇಮಿಸಿ ರಾಜ್ಯ ಸರ್ಕಾರ ಗುರುವಾರ ಆದೇಶ ಹೊರಡಿಸಿದೆ.



ಅವರು ಪ್ರಸ್ತುತ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮೈಸೂರು ಜಿಲ್ಲಾ ಮತ್ತು ಸೆಷನ್ಸ್ ಪ್ರಧಾನ ನ್ಯಾಯಾಧೀಶರಾಗಿದ್ದ ಜಿ. ಎಸ್ ಸಂಗ್ರೇಶಿ ಅವರನ್ನು ನಿಯೋಜನೆಯ ಮೇಲೆ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ ನೇಮಿಸಲಾಗಿತ್ತು.

ಅಕ್ರಮವಾಗಿ ತಿದ್ದುಪಡಿ; ಅರಣ್ಯ ಇಲಾಖೆಯೊಂದಿಗೆ ಸಂಘರ್ಷ

ಕಾನು ಭೂಮಿ ಮೇಲೆ ಅತಿಕ್ರಮಣದಾರರ ಕಣ್ಣು

• ವೆಂಕಟೇಶ ಜಿ.ಎಚ್.

ಶಿವಮೊಗ್ಗ: ಮಲೆನಾಡಿನಲ್ಲಿ ತೋಟಕ್ಕೆ ಸೊಪ್ಪು ತರಲು, ಕಟ್ಟಿಗೆ, ಒಣಗಿದ ಎಲೆ ಸಂಗ್ರಹಿಸಲು, ವನಸ್ಪತಿ, ಕೃಷಿ ಪರಿಕರಕ್ಕೆಂದು ಗ್ರಾಮಸ್ಥರ ಉಪಯೋಗಕ್ಕೆ ಮೀಸಲಿಟ್ಟಿದ್ದ ಕಾನು ಭೂಮಿ ಅತಿಕ್ರಮಣವಾಗುತ್ತಿದೆ. ಜಿಲ್ಲೆಯ ಹಲವೆಡೆ ಕಾನು ಭೂಮಿಯ ಮಾಲೀಕತ್ವದ ವಿಚಾರ ಖಾಸಗಿ ವ್ಯಕ್ತಿಗಳು ಹಾಗೂ ಅರಣ್ಯ ಇಲಾಖೆ ನಡುವೆ ಸಂಘರ್ಷ ಏರ್ಪಟ್ಟಿದೆ.

ಹೊಸನಗರ ತಾಲ್ಲೂಕಿನ ಕಟ್ಟೇಕೊಪ್ಪದಲ್ಲಿ 600 ಎಕರೆ, ತೋಟದ ಕೊಪ್ಪದಲ್ಲಿ 360, ಗರ್ತಿಕೆರೆಯಲ್ಲಿ 90, ತೀರ್ಥಹಳ್ಳಿ ತಾಲ್ಲೂಕಿನ ಹಲವನಹಳ್ಳಿಯಲ್ಲಿ 115, ಮಂಡಗದ್ದೆ ಅರಣ್ಯ ವಲಯ ವ್ಯಾಪ್ತಿಯ ಹಗಲತ್ತಿಯಲ್ಲಿ 180, ಸಿಂಧುವಾಡಿಯಲ್ಲಿ 155, ಹೆಮ್ಮಕ್ಕಿಯಲ್ಲಿ 46, ಕುಳ್ಳುಂಡೆಯಲ್ಲಿ 105, ಶೇಡಗಾರದಲ್ಲಿ 110, ಕುಡಗಲ ಮನೆಯಲ್ಲಿ 120, ಕೋಣಂದೂರು ಮಳಲಿಮಠ ಹತ್ತಿರದ ಜಂಬೇಕಾನು 270, ಕೊಳಗಿಬೈಲ್‌ನಲ್ಲಿ 135, ಸಾಗರ ತಾಲ್ಲೂಕಿನ ಆನಂದಪುರ ಸಮೀಪದ ಗಂಟಿನಕೊಪ್ಪದಲ್ಲಿ 90, ಶಿರವಂತೆ ಬಳಿಯ ಬರದವಳ್ಳಿಯಲ್ಲಿ 240, ನಾರಗೋಡದಲ್ಲಿ 25, ಅಡೂರಿನಲ್ಲಿ 60, ಸೊರಬ ತಾಲ್ಲೂಕಿನ ತಾವರೆಹಳ್ಳಿಯಲ್ಲಿ 525 ಎಕರೆ ಸೇರಿ ಶಿವಮೊಗ್ಗ ಜಿಲ್ಲೆಯ ಹಲವೆಡೆ ಕಾನು ಭೂಮಿಯ ಮಾಲೀಕತ್ವದ ವಿಚಾರದ ಹಲವು ಪ್ರಕರಣಗಳು ನ್ಯಾಯಾಲಯದ ಮೆಟ್ಟಿಲೇರಿವೆ.

‘ಇತ್ತೀಚೆಗೆ ಈ ಕಾನುಗಳ ಮೇಲೆ ಭೂ ಕಬಳಿಕೆದಾರರ ಕಣ್ಣು ಬಿದ್ದಿದೆ. ಬಗರ್ ಹುಕುಂ, ಅತಿಕ್ರಮಣ, ಒತ್ತುವರಿ ಪ್ರಕರಣಗಳ ನೆಪದಲ್ಲಿ ಖಾತೆ ಮಾಡಿಸಿಕೊಳ್ಳುತ್ತಿದ್ದಾರೆ’ ಎಂದು ವೃಕ್ಷ ಲಕ್ಷ ಆಂದೋಲನದ ಮುಖ್ಯಸ್ಥ, ಶಿರಸಿಯ ಅನಂತ ಹೆಗಡೆ ಅಶೀಸರ ಹೇಳುತ್ತಾರೆ.

‘ಇವೆಲ್ಲವೂ ಕಂದಾಯ, ಅರಣ್ಯ ಭೂಮಿ, ಡೀಮ್ಡ್ ಅರಣ್ಯ ಭೂಮಿಯ ವ್ಯಾಪ್ತಿಯಲ್ಲಿವೆ. ಈ ಪ್ರಕರಣಗಳಲ್ಲಿ ಜೀವ ವೈವಿಧ್ಯ, ಕಂದಾಯ, ಅರಣ್ಯ ಹಾಗೂ ವನ್ಯಜೀವಿ ಕಾಯ್ದೆಯನ್ನು ಉಲ್ಲಂಘಿಸಲಾಗಿದೆ’ ಎಂದು ಅವರು ದೂರುತ್ತಾರೆ.

‘ಖಾತೆ ಕಾನು ಅರಣ್ಯ ಭೂಮಿ ದಾಖಲೆಗಳಲ್ಲಿ ಖಾಸಗಿ ವ್ಯಕ್ತಿಗಳು ಅಕ್ರಮವಾಗಿ ತಿದ್ದುಪಡಿ ಮಾಡಿಸಿದ್ದಾರೆ. ನ್ಯಾಯಾಲಯಕ್ಕೆ ತಪ್ಪು ಮಾಹಿತಿ ನೀಡಿ ಆದೇಶ ಪಡೆಯುವುದು, ಕಾನು ಅರಣ್ಯ ಭೂಮಿ ಮಾರಾಟ, ಮರಕಡಿತಲೆ, ಅರಣ್ಯನಾಶ ಅವ್ಯಾಹತವಾಗಿ ನಡೆಯುತ್ತಿವೆ. ಈ ರೀತಿಯ ಭೂ ಕಬಳಿಕೆಗೆ ಸರ್ಕಾರ ಕಡಿವಾಣ ಹಾಕಬೇಕು. ಖಾತೆ ಕಾನು ಇನ್ನೂ ಎಲ್ಲೆಲ್ಲಿ ಇವೆ ಎಂಬ ಬಗ್ಗೆ ಅರಣ್ಯ ಮತ್ತು ಕಂದಾಯ ಇಲಾಖೆಗಳು ತುರ್ತಾಗಿ ಮಾಹಿತಿ ಸಂಗ್ರಹಿಸಬೇಕು’ ಎಂದು ಒತ್ತಾಯಿಸುತ್ತಾರೆ.

ಸಮನ್ವಯದ ಕೊರತೆ: ‘ಈ ಪ್ರಕರಣಗಳಲ್ಲಿ ಕೆಲವು ಸರ್ಕಾರದ ಪರವಾಗಿ, ಇನ್ನೂ ಕೆಲವು ಖಾಸಗಿಯವರ ಪರವಾಗಿ ನ್ಯಾಯಾಲಯದಲ್ಲಿ ಆದೇಶ ಆಗಿದೆ. ಅರಣ್ಯ ಮತ್ತು ಕಂದಾಯ ಇಲಾಖೆಗಳ ನಡುವಣ ಸಮನ್ವಯದ ಕೊರತೆಯಿಂದಾಗಿ ಹಲವು ಪ್ರಕರಣಗಳಲ್ಲಿ ಸರ್ಕಾರಕ್ಕೆ ಸೋಲಾಗಿದೆ’ ಎಂದು ಅವರು ಹೇಳುತ್ತಾರೆ.



ಸಾಗರ ತಾಲ್ಲೂಕಿನ ಮಂಡಗಳಲೆಯ ಕಾನು ಭೂಮಿಯ ನೋಟ

ನ್ಯಾಯಾಲಯದಲ್ಲಿರುವ ಎಲ್ಲ ಪ್ರಕರಣಗಳನ್ನು ಒಗ್ಗೂಡಿಸಿ ಕಾನೂನು ಹೋರಾಟ ಮಾಡಲು ಸಾಧ್ಯವೇ ಎಂದು ಸರ್ಕಾರ ಪರಿಶೀಲಿಸಬೇಕು

ಅನಂತ ಹೆಗಡೆ ಅಶೀಸರ

ವೃಕ್ಷ ಲಕ್ಷ ಆಂದೋಲನದ ಸಂಚಾಲಕ

ಕಾನು ಅರಣ್ಯ ಸಂರಕ್ಷಣೆ ವಿಚಾರದಲ್ಲಿ ಅರಣ್ಯ ಇಲಾಖೆಯೊಂದಿಗೆ ಸಮನ್ವಯ ಸಾಧಿಸುತ್ತಿದ್ದೇವೆ. ಅಗತ್ಯವಿರುವ ದಾಖಲೆಗಳನ್ನು ಒದಗಿಸುತ್ತಿದ್ದೇವೆ

ಗುರುದತ್ತ ಹೆಗಡೆ

ಶಿವಮೊಗ್ಗ ಜಿಲ್ಲಾಧಿಕಾರಿ

ಏನಿದು ಕಾನು?

ಜಿಲ್ಲೆಯ ತೀರ್ಥಹಳ್ಳಿ, ಹೊಸನಗರ, ಸಾಗರ, ಸೊರಬ ತಾಲ್ಲೂಕುಗಳಲ್ಲಿ ‘ಕಾನು’ ಎಂದು ಕರೆಸಿಕೊಳ್ಳುವ ಅರಣ್ಯಪ್ರದೇಶ ಹೆಚ್ಚಾಗಿದೆ. ಹುಲ್ಲು ಬನ್ನಿ, ಮುಫತ್ತು, ಗೋಚರ, ಬಂಜರು, ಗೋಮಾಳ ಹೀಗೆ ಬೇರೆ ಬೇರೆ ಹೆಸರಿನಲ್ಲಿ ಈ ಕಾನು ಭೂಮಿ ಗ್ರಾಮೀಣರ ಸಾಮೂಹಿಕ ಬಳಕೆಯಲ್ಲಿದೆ. ಕೆಲವು ಕಾನು ಅರಣ್ಯಗಳಿಗೆ ಸರ್ಕಾರ ಆಣೆ ಲೆಕ್ಕದಲ್ಲಿ ಕಂದಾಯ ವಿಧಿಸುತ್ತಿದೆ. ಹೀಗಾಗಿ ಒಂದಾಣೆ ಕಾನು, ಖಾತೆ ಕಾನು ಹೆಸರಿನಲ್ಲೂ ಈ ಭೂಮಿಯನ್ನು ಗುರುತಿಸಲಾಗುತ್ತದೆ.

ಅಧಿಕಾರಿಗಳಿಗೆ ಸಚಿವ ಈಶ್ವರ ಖಂಡ್ರೆ ಸೂಚನೆ

ಅರಣ್ಯ ಒತ್ತುವರಿ ತಡೆಗೆ 'ಅಲರ್ಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ ಸಂಪತ್ತಿನ ಸಂರಕ್ಷಣೆ ಮತ್ತು ಅರಣ್ಯ ಒತ್ತುವರಿಯನ್ನು ಪರಿಣಾಮಕಾರಿಯಾಗಿ ತಡೆಯಲು ಅತ್ಯಾಧುನಿಕ ತಂತ್ರಜ್ಞಾನದ ಬಳಕೆಯ ಅಗತ್ಯವಿದ್ದು, ಉಪಗ್ರಹ ಆಧಾರಿತ ಎಚ್ಚರಿಕೆ ಕಳುಹಿಸುವ (ಅಲರ್ಟ್) ವ್ಯವಸ್ಥೆ ರೂಪಿಸಬೇಕು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚನೆ ನೀಡಿದರು.

ಅರಣ್ಯ ಭೂಮಿ ಒತ್ತುವರಿ ತಡೆ ಮತ್ತು ವೃಕ್ಷ ಸಂರಕ್ಷಣೆ ಕುರಿತು ಅರಣ್ಯ ಭವನದಲ್ಲಿ ಗುರುವಾರ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಈಗಾಗಲೇ ಅಕ್ಷಾಂಶ ಮತ್ತು ರೇಖಾಂಶದ ಆಧಾರದ ಮೇಲೆ ಜಿಯೋ ರೆಫರೆನ್ಸ್ ಮೂಲಕ ರಾಜ್ಯದ ಅರಣ್ಯ ಪ್ರದೇಶದ ಗಡಿಗಳನ್ನು ಗುರುತಿಸಲಾಗಿದೆ. ಈ ದತ್ತಾಂಶವನ್ನು ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರಕ್ಕೆ ನೀಡಲಾಗುವುದು. ಇದನ್ನು ಆಧರಿಸಿ ಮರಗಳ ಕಡಿತಲೆ ಮತ್ತು ಭೂ ಒತ್ತುವರಿ ಕುರಿತು ಕಾಲಕಾಲಕ್ಕೆ ಎಚ್ಚರಿಕೆ ನೀಡುವ ವ್ಯವಸ್ಥೆಯನ್ನು ಆದಷ್ಟು ಶೀಘ್ರ ರೂಪಿಸಲು ಪ್ರಸ್ತಾವನೆಯೊಂದನ್ನು ಸಲ್ಲಿಸುವಂತೆ ಅರಣ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ನಿರ್ದೇಶನ ನೀಡಿದರು.

ಅರಣ್ಯ ಪ್ರದೇಶದಲ್ಲಿ ಬೆಂಕಿ ಕಾಣಿಸಿಕೊಂಡರೆ ಇಸ್ರೋದ ರಾಷ್ಟ್ರೀಯ ದೂರ ಸಂವೇದಿ ಕೇಂದ್ರಕ್ಕೆ ಮಾಹಿತಿ ಬರುತ್ತದೆ. ಅಲ್ಲಿಂದ ಭಾರತೀಯ ಅರಣ್ಯ ಸರ್ವೇಕ್ಷಣ ಇಲಾಖೆಗೆ ಮಾಹಿತಿ ರವಾನೆ ಯಾಗುತ್ತದೆ. ಅಲ್ಲಿಂದ ಸಂಬಂಧಿತ ಅರಣ್ಯ ವಲಯದ ಸಿಬ್ಬಂದಿಗೆ ಎಚ್ಚರಿಕೆ ಹೋಗಲು ಇರುವ ವ್ಯವಸ್ಥೆಯ ಮಾದರಿಯಲ್ಲೇ ಮರಗಳ ಅಕ್ರಮ ಕಡಿತಲೆ ಮತ್ತು ಅರಣ್ಯಭೂಮಿ ಒತ್ತುವರಿಗೂ ಒಂದು ಎಚ್ಚರಿಕೆ ರವಾನೆ ವ್ಯವಸ್ಥೆ ಮಾಡಬೇಕು ಎಂದು ಖಂಡ್ರೆ ತಿಳಿಸಿದರು.

ವಲಯ ಅರಣ್ಯಾಧಿಕಾರಿಗಳ ಮಟ್ಟದಲ್ಲಿ ಅರಣ್ಯ ಒತ್ತುವರಿ ಮತ್ತು ಅರಣ್ಯ ಹಕ್ಕು ಕಾಯಿದೆಯ ಅರ್ಜಿಗಳ ಕುರಿತು ಸಂಪೂರ್ಣ ಮಾಹಿತಿಯ ದತ್ತಾಂಶವನ್ನು ಸಿದ್ಧಪಡಿಸಿ, ನ್ಯಾಯಾಲಯದಲ್ಲಿರುವ ಪ್ರಕರಣಗಳಿಗೆ ಸಕಾಲದಲ್ಲಿ ಆಕ್ಷೇಪಣೆ ಸಲ್ಲಿಸಿ ಇವುಗಳ ಇತ್ಯರ್ಥಕ್ಕೆ ಕ್ರಮ ವಹಿಸಬೇಕು ಎಂದರು.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಮಟ್ಟದಲ್ಲಿ ಬಾಕಿ ಇರುವ ಎಲ್ಲ 64 ಎ ಪ್ರಕರಣಗಳನ್ನು ಮತ್ತು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಮುಂದಿರುವ ಮೇಲ್ಮನವಿಗಳನ್ನು ಕಾಲಮಿತಿಯಲ್ಲಿ ಅಂದರೆ ಒಂದು ವರ್ಷದೊಳಗೆ ಇತ್ಯರ್ಥಪಡಿಸುವಂತೆಯೂ ಸಲಹೆ ನೀಡಿದರು.

ಅದೇ ರೀತಿ, ಸೆಕ್ಷನ್ 4ರ ಪ್ರಕರಣಗಳಲ್ಲಿ ಅರಣ್ಯ ವ್ಯವಸ್ಥಾಪನಾಧಿಕಾರಿಗಳಿಗೂ ಕಾಲಮಿತಿಯಲ್ಲಿ ಈ ಪ್ರಕರಣಗಳನ್ನು ಇತ್ಯರ್ಥಪಡಿಸಿ ಅರಣ್ಯ ಇಲಾಖೆಯ ಮೇಲೆ ಇರುವ ಪ್ರಕರಣಗಳ ಹೊರೆಯನ್ನು ತಗ್ಗಿಸಬೇಕು ಎಂದು ಖಂಡ್ರೆ ಹೇಳಿದರು.

ಶಾಶ್ವತ ಜೀವನಾಂಶ ನೀಡಲು ಹೋರಾಟಗಾರರ ಒತ್ತಾಯ

ಗರ್ಭಕೋಶ ಶಸ್ತ್ರಚಿಕಿತ್ಸೆ: ಮತ್ತೊಬ್ಬ ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ರಾಣೆಬೆನ್ನೂರು (ಹಾವೇರಿ ಜಿಲ್ಲೆ): ಗರ್ಭಕೋಶದ ಶಸ್ತ್ರಚಿಕಿತ್ಸೆಯಿಂದ ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದರು ಎನ್ನಲಾದ ನೀಲವ್ವ ಲಮಾಣಿ (42) ಎಂಬುವರು ದಾವಣಗೆರೆಯ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಹೀಗೆ ಸಾವನ್ನಪ್ಪಿದವರಲ್ಲಿ ಇವರು ಆರನೆಯವರು ಆಗಿದ್ದಾರೆ.

'ಗರ್ಭಕೋಶದ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದ ರಾಣೆಬೆನ್ನೂರು ತಾಲ್ಲೂಕಿನ ಚನ್ನಾಪುರ ತಾಂಡಾದ ನೀಲವ್ವ ಅನಾರೋಗ್ಯ ಸಮಸ್ಯೆಗೆ ಒಳಗಾಗಿ ಆಗಾಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು' ಎಂದು ಕುಟುಂಬದವರು ತಿಳಿಸಿದ್ದಾರೆ.



ನೀಲವ್ವ ಲಮಾಣಿ

'ರಾಣೆಬೆನ್ನೂರು ತಾಲ್ಲೂಕು ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ ವೈದ್ಯ ಡಾ.ಪಿ.ಶಾಂತ (ಸದ್ಯ ಗೋಕಾಕ್ ಆಸ್ಪತ್ರೆ) ಅವರು ಹಣದ ಆಸೆಗೆ ತಾಲ್ಲೂಕಿನ 1,522 ಮಹಿಳೆಯರಿಗೆ ಅಕ್ರಮವಾಗಿ ಗರ್ಭಕೋಶದ ಶಸ್ತ್ರಚಿಕಿತ್ಸೆ ಮಾಡಿದ್ದರು' ಎಂದು ಸ್ಥಳೀಯರು ದೂರುತ್ತಾರೆ. ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ ಮಹಿಳೆಯರಿಗೆ ಅನಾರೋಗ್ಯ ಸಮಸ್ಯೆ ಕಾಡುತ್ತಿದೆ.

ದಿನವೂ ಸಮಸ್ಯೆ, ಆಸ್ಪತ್ರೆಗೆ ಅಲೆದಾಟ: 'ಡಾ. ಶಾಂತ ಅವರು 2010ರಿಂದ 2016ರವರೆಗೆ ಕೆಲಸ ಮಾಡಿದ್ದರು. ಇದೇ ಅವಧಿಯಲ್ಲಿ ಹೊಟ್ಟೆ ನೋವು ಎಂದು ಹೇಳಿ ಆಸ್ಪತ್ರೆಗೆ ಹೋಗುತ್ತಿದ್ದ ಮಹಿಳೆಯರನ್ನು ಪರೀಕ್ಷಿಸುತ್ತಿದ್ದ ಅವರು, 'ಗರ್ಭಕೋಶದಲ್ಲಿ ಸಮಸ್ಯೆ ಇದೆ. ಅದನ್ನು ಸರಿಪಡಿಸಲು ಶಸ್ತ್ರಚಿಕಿತ್ಸೆ ಮಾಡಿಸಬೇಕು. ಇಲ್ಲದಿದ್ದರೆ, ನಿಮ್ಮ ಜೀವಕ್ಕೆ ಅಪಾಯವಿದೆ' ಎನ್ನುತ್ತಿದ್ದರು. ಇದರಿಂದ ಹೆದರಿ ಮಹಿಳೆಯರು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದರು' ಎಂದು ವಂದೇ ಮಾತರಂ ಯುವಕ ಸ್ವಸೇವಾ ಸಂಘದ ಅಧ್ಯಕ್ಷ ಜಗದೀಶ್ ಕೆರೂಡಿ 'ಪ್ರಜಾವಾಣಿ'ಗೆ ತಿಳಿಸಿದರು.

'ವೈದ್ಯರ ಕೃತ್ಯದ ವಿರುದ್ಧ ಹೋರಾಡುತ್ತಿದ್ದೇವೆ. ಈ ಬಗ್ಗೆ ಹಲವರಿಗೆ ಮನವಿ ಸಲ್ಲಿಸಲಾಗಿದೆ. ಸಂಕಷ್ಟದಲ್ಲಿ ಇರುವ ಮಹಿಳೆಯರ ಜೀವನಾಂಶಕ್ಕೆ ಶಾಶ್ವತವಾದ ನೆರವು ನೀಡಬೇಕು' ಎಂದು ಮಹಿಳೆಯರ ಪರ ಹೋರಾಟ ಸಮಿತಿ ಅಧ್ಯಕ್ಷೆ ಲಲಿತಾ ಲಮಾಣಿ ತಿಳಿಸಿದರು.

ಹೊಂಡದಲ್ಲಿ ಮುಳುಗಿ ಬಾಲಕರ ಸಾವು

ವಾಡಿ (ಕಲಬುರಗಿ ಜಿಲ್ಲೆ): ಚಿತ್ತಾಪುರ ತಾಲ್ಲೂಕಿನ ರಾವೂರು ಗ್ರಾಮದಲ್ಲಿ ಗುರುವಾರ ಆಟವಾಡಲು ತೆರಳಿದ್ದ ಇಬ್ಬರು ಬಾಲಕರು ಸಿದ್ದಲಿಂಗೇಶ್ವರ ಸಂಸ್ಥಾನ ಮಠದ ಹತ್ತಿರದ ಕಲ್ಲುಗಣಿಯ ಹೊಂಡದಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ರಾವೂರು ಗ್ರಾಮದ ರವಿ ಗುತ್ತೇದಾರ ಅವರ ಪುತ್ರ ಭುವನ್ (5) ಹಾಗೂ ಅಶೋಕ ಬೆಟಗೇರಿ ಅವರ ಪುತ್ರ ದೇವು (6) ಮೃತರು.

ಈಜಾಡಲು ತೆರಳಿರಬಹುದು ಅಥವಾ ಕಾಲು ಜಾರಿ ಬಿದ್ದಿರಬಹುದು ಎಂದು ಶಂಕಿಸಲಾಗಿದೆ. ಸ್ಥಳಕ್ಕೆ ವಾಡಿ ಪಿಎಸ್ಐ ತಿರುಮಲೇಶ ಕುಂಬಾರ ಭೇಟಿ ನೀಡಿದ್ದರು. ಮಕ್ಕಳ ಸಾವಿನಿಂದ ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತ್ತು.

ಭ್ರೂಣಹತ್ಯೆ–ಕಟ್ಟುನಿಟ್ಟಿನ ಕ್ರಮ: ಸಚಿವ

ಬಾಗಲಕೋಟೆ: 'ಭ್ರೂಣಹತ್ಯೆ ಎಂಬುದು ಸಾಮಾಜಿಕ ಪಿಡುಗು ಆಗಿದ್ದು, ಅಂಥ ಪ್ರಕರಣಗಳನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು' ಎಂದು ಆರೋಗ್ಯ ಸಚಿವ ದಿನೇಶ ಗುಂಡೂರಾವ್ ಲೋಕಾಪುರದಲ್ಲಿ ತಿಳಿಸಿದರು.

ರೈಲು ನಿಲ್ದಾಣದಲ್ಲಿ ನವಜಾತ ಶಿಶುವಿನ ಶವ ಎಸೆದ ಅಜ್ಜಿ

ಪ್ರಜಾವಾಣಿ ವಾರ್ತೆ

ತುಮಕೂರು: ಅನಾರೋಗ್ಯದಿಂದ ಆಸ್ಪತ್ರೆಯಲ್ಲಿ ಬುಧವಾರ ರಾತ್ರಿ ಮೃತಪಟ್ಟ ನವಜಾತ ಶಿಶುವಿನ ಶವವನ್ನು ಊರಿಗೆ ಸಾಗಿಸಲು ಹಣವಿಲ್ಲದೆ ಶವವನ್ನು ನಗರದ ರೈಲು ನಿಲ್ದಾಣದಲ್ಲಿ ಎಸೆದು ಹೋಗಿದ್ದಾರೆ.

ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಕುಂದುರ್ಪಿ ಮಂಡಲದ ನಿವಾಸಿ ಅಂಬಿಕಾ ಎಂಬುವರಿಗೆ ಜೂನ್ 24ರಂದು ಪಾವಗಡದ ಖಾಸಗಿ ಆಸ್ಪತ್ರೆಯಲ್ಲಿ ಹೆರಿಗೆಯಾಗಿತ್ತು. ಹೆರಿಗೆ ನಂತರ ಮಗುವಿನ ಉಸಿರಾಟದಲ್ಲಿ ತೊಂದರೆಯಾಗಿ ಬುಧವಾರ ಜಿಲ್ಲಾ ಆಸ್ಪತ್ರೆಗೆ ಕರೆ ತರಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಮಗು ಸಾವನ್ನಪ್ಪಿದೆ.

ಹಣ ತೆಗೆದುಕೊಂಡು ಬರುತ್ತೇನೆ ಎಂದು ಅಂಬಿಕಾ ಪತಿ ಹನುಮಂತ ಬೆಂಗಳೂರಿಗೆ ಹೋಗಿದ್ದರು. ಅವರು ವಾಪಸ್ ಬರುವ ಹೊತ್ತಿಗೆ ಶಿಶು ಸಾವನ್ನಪ್ಪಿದೆ. ಶಿಶುವಿನ ಜತೆ ಬಂದಿದ್ದ ಅಂಬಿಕಾ ಅತ್ತೆ ಲಕ್ಷ್ಮಕ್ಕ ಅವರಿಗೆ ಮೃತದೇಹ ಹಸ್ತಾಂತರಿಸಲಾಗಿತ್ತು. ಶವವನ್ನು ಊರಿಗೆ ತೆಗೆದುಕೊಂಡು ಹೋಗಲು ಹಣವಿಲ್ಲದ ಕಾರಣ ಶವವ ಅವರು ರೈಲು ನಿಲ್ದಾಣದಲ್ಲೇ ಎಸೆದು ಹೋಗಿದ್ದಾರೆ.

ಸ್ಥಳದಲ್ಲಿ ಇದ್ದವರು ಶವ ಕಂಡು ಪೊಲೀಸರಿಗೆ ವಿಷಯ ಮುಟ್ಟಿಸಿದ್ದಾರೆ. ಪೊಲೀಸರು ಪತ್ತೆಹಚ್ಚಿ ಶವ ಹಸ್ತಾಂತರಿಸಲಾಯಿತು. ತಿಲಕ್ ಪಾರ್ಕ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಂಬಿಕಾ ಹಾಗೂ ಹನುಮಂತ ಕೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಶಿಶುವಿನ ಕೈಗೆ ಹಾಕಿದ್ದ ಟ್ಯಾಗ್ ಆಸ್ಪತ್ರೆಯ ಸುಳಿವು ನೀಡಿತ್ತು. ಟ್ಯಾಗ್‌ನಲ್ಲಿ ಪೋಷಕರ ಹೆಸರು, ವಿಳಾಸ ಇತ್ತು. ಇದರ ಆಧಾರದ ಮೇಲೆ ಆಸ್ಪತ್ರೆಯಲ್ಲಿ ವಿಚಾರಿಸಿದಾಗ ಪೋಷಕರ ಮಾಹಿತಿ ಗೊತ್ತಾಗಿದೆ.

ಡೆಂಗಿ: ಯುವತಿ ಸಾವು

ಸಾಸ್ವೆಹಳ್ಳಿ (ದಾವಣಗೆರೆ): ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ಹನುಮನಹಳ್ಳಿಯ ನಿವಾಸಿ ಅನುಷಾ (18) ಡೆಂಗಿಯಿಂದ ಬುಧವಾರ ತಡರಾತ್ರಿ ಮೃತಪಟ್ಟಿದ್ದಾರೆ.

ಕಳೆದ ಶನಿವಾರ ಬೆಳಿಗ್ಗೆ ಜ್ವರದಿಂದ ಬಳಲುತ್ತಿದ್ದ ಇವರನ್ನು ಶಿವಮೊಗ್ಗದಲ್ಲಿರುವ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಗುಣಮುಖರಾಗದ ಕಾರಣ ಮಣಿಪಾಲ್ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು ಎಂದು ಪಾಲಕರು ತಿಳಿಸಿದ್ದಾರೆ.

ಇತ್ತೀಚೆಗೆ ನಡೆದಿದ್ದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ 93ರಷ್ಟು ಅಂಕ ಗಳಿಸಿ ಎಂಜಿನಿಯರಿಂಗ್ ಸೇರುವ ಬಯಕೆಯನ್ನು ಅನುಷಾ ಹೊಂದಿದ್ದರು ಎಂದು ಪಾಲಕರು ತಿಳಿಸಿದ್ದಾರೆ.

ಕೇರಳದ ಅರಣ್ಯದಲ್ಲಿ ಕಚ್ಚಾ ಬಾಂಬ್ ಪತ್ತೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗಿನಿಂದ 15 ಕಿ.ಮೀ ದೂರದ ಕೇರಳದ ಕಾಡಿನೊಳಗೆ ಕಚ್ಚಾ ಬಾಂಬ್‌ವೊಂದು ಪತ್ತೆಯಾಗಿದ್ದು, ಅಲ್ಲಿನ ಪೊಲೀಸರು ತನಿಖೆ ಆರಂಭಿಸಿದ್ದಾರೆ.

'ಉತ್ತರ ವಯನಾಡು ಅರಣ್ಯ ಪ್ರದೇಶ ವ್ಯಾಪ್ತಿಯ ತಲಪುಳ ಮಕ್ಕಿಮಲ ಕೊಡಕಾಡು ಪ್ರದೇಶದಲ್ಲಿ ಅರಣ್ಯ ಸಿಬ್ಬಂದಿ ಗಸ್ತು ತಿರುಗುವ ಮಾರ್ಗದಲ್ಲಿ ಮಂಗಳವಾರ ಸ್ಫೋಟಕ ಪತ್ತೆಯಾಗಿತ್ತು. ಪರಿಶೀಲನೆ ನಂತರ ನಿಷ್ಕ್ರಿಯಗೊಳಿಸಲಾಗಿದೆ. ಅದರಲ್ಲಿ ಜಿಲೆಟಿನ್ ಕಡ್ಡಿಗಳು, ಫ್ಯೂಸ್ ವಯರ್‌ಗಳು ಹಾಗೂ ಸ್ಫೋಟಕ ವಸ್ತುಗಳು ಪತ್ತೆಯಾಗಿವೆ' ಎಂದು ಮೂಲಗಳು ತಿಳಿಸಿವೆ.

ಅದೊಂದು ಕಚ್ಚಾ ಬಾಂಬ್ ಎಂದು ಖಚಿತವಾಗುತ್ತಿದ್ದಂತೆ, ಕೇರಳದ ನಕ್ಸಲ್ ನಿಗ್ರಹ ಪಡೆ ಥಂಡರ್ ಬೋಲ್ಟ್ ಹಾಗೂ ವಿಶೇಷ ಕಾರ್ಯಾಚರಣೆ ಸಿಬ್ಬಂದಿ ಸುತ್ತಮುತ್ತಲ ಅರಣ್ಯ ಪ್ರದೇಶದಲ್ಲಿ ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನ ದಳದೊಂದಿಗೆ ತೀವ್ರ ಹುಡುಕಾಟ ನಡೆಸಿದರು. ಇಲ್ಲಿಗೆ 6 ಕಿ.ಮೀ ದೂರದಲ್ಲಿ ಒಂದೂವರೆ ತಿಂಗಳ ಹಿಂದೆ ಕೇರಳದ ಪೊಲೀಸರಿಗೂ ನಕ್ಸಲರಿಗೂ ಗುಂಡಿನ ಚಕಮಕಿ ನಡೆದಿತ್ತು. ಆ ಸ್ಫೋಟಕವನ್ನು ನಕ್ಸಲರೇ ಇರಿಸಿರುವ ಕುರಿತು ಅನುಮಾನಗಳು ಬಲವಾಗಿವೆ.

'ಅರಣ್ಯದ ಕಾಲುದಾರಿಯಲ್ಲಿರುವ ಸೋಮಹೊಳೆಯು ತುಂಬಿ ಹರಿಯುತ್ತಿರುವುದರಿಂದ ಅದನ್ನು ದಾಟಲು ಸಾಧ್ಯವಿಲ್ಲ. ಹಾಗಾಗಿ, ಕರ್ನಾಟಕಕ್ಕೆ ನಕ್ಸಲರು ನುಸುಳುವ ಸಾಧ್ಯತೆ ಕ್ಷೀಣ' ಎಂದು ಮೂಲಗಳು ತಿಳಿಸಿವೆ.

ಮಂತ್ರಾಲಯ: ₹3.41 ಕೋಟಿ ಕಾಣಿಕೆ ಸಂಗ್ರಹ

ಪ್ರಜಾವಾಣಿ ವಾರ್ತೆ

ರಾಯಚೂರು: ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಮಠದ ಹುಂಡಿಯಲ್ಲಿ ಒಂದು ತಿಂಗಳ ಅವಧಿಯಲ್ಲಿ ಒಟ್ಟು ₹3.41 ಕೋಟಿ ನಗದು ಕಾಣಿಕೆ ಸಂಗ್ರಹವಾಗಿದೆ.

ಮಠದಲ್ಲಿ ಸಂಗ್ರಹವಾಗಿದ್ದ ಕಾಣಿಕೆಯ ಹಣವನ್ನು ಮಠದ ಸಿಬ್ಬಂದಿ ಗುರುವಾರ ಎಣಿಕೆ ಮಾಡಿದರು. ₹3.34 ಕೋಟಿ ನಗದು, ₹6.54 ಲಕ್ಷ ಮೊತ್ತದ ನಾಣ್ಯಗಳು ಸೇರಿ ಒಟ್ಟು ₹3.41 ಕೋಟಿ ನಗದು, 82 ಗ್ರಾಂ ಚಿನ್ನ ಹಾಗೂ 2570 ಗ್ರಾಂ ಬೆಳ್ಳಿ ಕಾಣಿಕೆ ರೂಪದಲ್ಲಿ ಬಂದಿದೆ ಎಂದು ಮಠದ ಪ್ರಧಾನ ವ್ಯವಸ್ಥಾಪಕರು ತಿಳಿಸಿದ್ದಾರೆ.



❦ ಸುಭಾಷಿತ ❦

ಒಳ್ಳೆಯ ಹೃದಯವನ್ನು ಸುಲಭವಾಗಿ ಎದುರಿಸಲು ಸಾಧ್ಯವಿಲ್ಲ.

-ವಿಲಿಯಂ ಷೇಕ್ಸ್‌ಪಿಯರ್

ವಿರೋಧ ಪಕ್ಷದ ನಾಯಕನಾಗಿ ರಾಹುಲ್ ಮುಂದೆ ಇದೆ ದೊಡ್ಡ ಸವಾಲು

ಹದಿನೆಂಟನೇ ಲೋಕಸಭೆಯ ವಿರೋಧ ಪಕ್ಷದ ನಾಯಕನ ಹೊಣೆಗಾರಿಕೆಯನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ವಹಿಸಿಕೊಂಡಿದ್ದಾರೆ. ಇದು ಅವರಿಗೆ ಮತ್ತು ಅವರ ಪಕ್ಷಕ್ಕೆ ದೊಡ್ಡ ಸವಾಲು ಮತ್ತು ಅವಕಾಶ. ರಾಹುಲ್ ಅವರ ಎರಡು ದಶಕಗಳ ರಾಜಕೀಯ ಜೀವನದಲ್ಲಿ ಅವರು ವಹಿಸಿಕೊಂಡ ಮೊದಲ ಸಾಂವಿಧಾನಿಕ ಹುದ್ದೆ ಇದು. ಜೊತೆಗೆ, ಕಳೆದ ಹತ್ತು ವರ್ಷಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸಿಕ್ಕ ಮೊದಲ ಅವಕಾಶವೂ ಹೌದು. ರಾಹುಲ್ ಅವರ ಕುಟುಂಬ ಮತ್ತು ಅದರೊಂದಿಗೆ ಇರುವ ಅವಕಾಶದ ಕಾರಣಕ್ಕೆ ನಾಯಕತ್ವವು ಅವರಿಗೆ ಸಹಜವಾಗಿಯೇ ಲಭಿಸಿದೆ. ಆದರೆ, ಅವರು ಈಗ ಹೆಚ್ಚು ಶ್ರಮ ವಹಿಸಿ ಕೆಲಸ ಮಾಡಿ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಬೇಕಿದೆ. ಈಗಿನ ರಾಜಕಾರಣ ಹೆಚ್ಚು ಕಠಿಣವಾಗಿದೆ, ಹೆಚ್ಚು ಶ್ರಮ ಬೇಡುತ್ತಿದೆ ಮತ್ತು ಸಾರ್ವಜನಿಕರ ಸೂಕ್ಷ್ಮ ಪರಿಶೀಲನೆಗೂ ಒಳಪಡುತ್ತಿದೆ. ಹಾಗಾಗಿ, ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಅವರ ಅಭ್ಯಾಸ ಇಲ್ಲಿ ಉಪಯೋಗಕ್ಕೆ ಬಾರದು. ಅವರು ಗಂಭೀರವಾದ ರಾಜಕಾರಣಿ ಅಲ್ಲ ಎಂಬ ಹಣೆಪಟ್ಟಿಯನ್ನು ಕಳಚಿಕೊಳ್ಳಬೇಕು ಮತ್ತು ಸಂಸತ್ತಿನಲ್ಲಿ ಪರಿಣಾಮಕಾರಿ ನಾಯಕ ಎಂಬುದನ್ನು ಸಾಬೀತು ಮಾಡಬೇಕು. ವಿರೋಧ ಪಕ್ಷದ ನಾಯಕನ ಸ್ಥಾನವು ಅವರಿಗೆ ಅಂತಹ ಅವಕಾಶವನ್ನು ಒದಗಿಸಿಕೊಟ್ಟಿದೆ. ರಾಹುಲ್ ಅವರು ಸಂಸತ್ತಿನಲ್ಲಿ ಬುಧವಾರ ಭಾಷಣ ಮಾಡಿ, 'ಭಾರತದ ಜನರ ಧ್ವನಿಯು' ಸಂಸತ್ತಿನಲ್ಲಿ ಪ್ರತಿಧ್ವನಿಸಬೇಕು ಎಂದು ಹೇಳಿದ್ದಾರೆ. ಅವರ ಈ ಮಾತು ಇದೊಂದು ಉತ್ತಮ ಆರಂಭ ಎಂಬ ಭರವಸೆ ಮೂಡಿಸಿದೆ.



ಸರ್ಕಾರವು ಸರಿದಾರಿಯಲ್ಲಿ ನ್ಯಾಯಯುತವಾಗಿ ಸಾಗುವಂತೆ ನೋಡಿಕೊಳ್ಳುವ ಜವಾಬ್ದಾರಿ ರಾಹುಲ್ ಅವರ ಮೇಲೆ ಇದೆ

ಸಿ.ಎಂ. ಸ್ಟೀಫನ್, ಅಟಲ್ ಬಿಹಾರಿ ವಾಜಪೇಯಿ, ಸುಷ್ಮಾ ಸ್ವರಾಜ್ ಅಂಥವರು ವಿರೋಧ ಪಕ್ಷದ ನಾಯಕರಾಗಿ ಪರಿಣಾಮಕಾರಿಯಾಗಿ ಕೆಲಸ ಮಾಡಿ ಸ್ಥಾನದ ಗೌರವವನ್ನು ಹೆಚ್ಚಿಸಿದ್ದಾರೆ. ಈ ಸ್ಥಾನದ ಗೌರವ ಇನ್ನಷ್ಟು ಹೆಚ್ಚುವ ರೀತಿಯಲ್ಲಿ ರಾಹುಲ್ ಅವರು ಕೆಲಸ ಮಾಡಬೇಕಿದೆ. ಇತ್ತೀಚಿನ ಕೆಲವು ವರ್ಷಗಳಲ್ಲಿ ಬಿಟ್ಟರೆ ಪ್ರಬಲವಾದ ವಿರೋಧ ಪಕ್ಷವನ್ನು ಭಾರತದ ಸಂಸತ್ತು ಕಂಡಿದೆ. 2019ಕ್ಕೆ ಹೋಲಿಸಿದರೆ, ಸಂಸತ್ತಿನಲ್ಲಿ ವಿರೋಧ ಪಕ್ಷ ಪ್ರಬಲವಾಗಿದೆ ಮತ್ತು ಸಂಖ್ಯಾಬಲದಲ್ಲಿ ಆಡಳಿತ ಪಕ್ಷದ ಸನಿಹದಲ್ಲಿಯೇ ಇದೆ. ಸಂಸತ್ತಿನ ನಿಯಮಗಳು ಮತ್ತು ಇತರ ಅವಕಾಶಗಳನ್ನು ಬಳಸಿಕೊಂಡು ನೀತಿಗಳು ಮತ್ತು ನಿರ್ಧಾರದ ವಿಚಾರದಲ್ಲಿ ಸರ್ಕಾರವನ್ನು ಉತ್ತರದಾಯಿಯನ್ನಾಗಿ ಮಾಡಬಹುದು. ಈ ಎಲ್ಲದರ ನೇತೃತ್ವವನ್ನು ರಾಹುಲ್ ಅವರು ವಹಿಸಿಕೊಳ್ಳಬೇಕಿದೆ. ಅದಕ್ಕಾಗಿ ಅವರು ಸೂಕ್ಷ್ಮ ವಿವೇಚನೆಯನ್ನು ಬೆಳೆಸಿಕೊಳ್ಳಬೇಕು; ನಿಯಮಗಳು ಮತ್ತು ಪ್ರಕ್ರಿಯೆಗಳ ಆಳವಾದ ಜ್ಞಾನವನ್ನು ರೂಢಿಸಿಕೊಳ್ಳಬೇಕು. ಸಮಯಸ್ಫೂರ್ತಿಯಿಂದ ವರ್ತಿಸಬೇಕು. ರಾಹುಲ್ ಅವರು ಸ್ಥಾನದ ಕಾರಣದಿಂದ ಹಲವು ಸಮಿತಿಗಳ ಸದಸ್ಯತ್ವವನ್ನು ಪಡೆಯುತ್ತಾರೆ. ಮುಖ್ಯ ಚುನಾವಣಾ ಆಯುಕ್ತ, ಚುನಾವಣಾ ಆಯುಕ್ತರು, ಮುಖ್ಯ ಜಾಗೃತ ಆಯುಕ್ತ, ಸಿಬಿಐ ನಿರ್ದೇಶಕ ಮುಂತಾದ ಸಾಂವಿಧಾನಿಕ ಹುದ್ದೆಗಳ ನೇಮಕಾತಿ ಸಮಿತಿಯಲ್ಲಿಯೂ ಅವರು ಇರುತ್ತಾರೆ. ಸಂಸದೀಯ ವ್ಯವಸ್ಥೆಯಲ್ಲಿ ಇವೆಲ್ಲವೂ ಪರಿಣಾಮ ಬೀರಬಲ್ಲ ಸ್ಥಾನಗಳಾಗಿವೆ. ಈ ಅವಕಾಶಗಳನ್ನು ಸಾರ್ವಜನಿಕ ಹಿತಾಸಕ್ತಿಗಾಗಿ ಬಳಸಿಕೊಳ್ಳಬೇಕು. ಸರ್ಕಾರವು ಸರಿದಾರಿಯಲ್ಲಿ ನ್ಯಾಯಯುತವಾಗಿ ಸಾಗುವಂತೆ ನೋಡಿಕೊಳ್ಳುವ ಜವಾಬ್ದಾರಿ ಅವರ ಮೇಲೆ ಇದೆ.

ಕಳೆದ ಕೆಲವು ವರ್ಷಗಳಲ್ಲಿ ಸಂಸತ್ ಸದನವು ಸಂಘರ್ಷಾತ್ಮಕವಾಗಿಯೇ ಇತ್ತು. ಆಡಳಿತ ಪಕ್ಷವು ಬಲಾಢ್ಯವಾಗಿದ್ದದ್ದು ಮತ್ತು ವಿರೋಧ ಪಕ್ಷವನ್ನು ಗಣನೆಗೇ ತೆಗೆದುಕೊಳ್ಳದಿದ್ದುದು ಮುಖ್ಯವಾಗಿ ಇದಕ್ಕೆ ಕಾರಣಗಳು. ಈ ಬಾರಿ ಲೋಕಸಭೆಯಲ್ಲಿ ವಿರೋಧ ಪಕ್ಷಗಳನ್ನು ಗೌರವದಿಂದ ನಡೆಸಿಕೊಳ್ಳುವ ಬಗ್ಗೆ ಸೂಚನೆಯನ್ನು ಸರ್ಕಾರ ನೀಡಿಲ್ಲ. ಸರ್ಕಾರವು ಹಲವು ಕಾರ್ಯಸೂಚಿಗಳನ್ನು ಹೊಂದಿದೆ. 'ಒಂದು ದೇಶ, ಒಂದು ಚುನಾವಣೆ', ಕ್ಷೇತ್ರ ಪುನರ್ ವಿಂಗಡಣೆಯಂತಹ ಕಾರ್ಯಸೂಚಿಗಳು ಇವುಗಳಲ್ಲಿ ಸೇರಿವೆ. ಇವು ವಿವಾದಾತ್ಮಕ ವಿಚಾರಗಳು. ಈ ವಿಚಾರಗಳಿಗೆ ಸಂಬಂಧಿಸಿದ ಚರ್ಚೆಯನ್ನು ಸರಿದಿಕ್ಕಿನಲ್ಲಿ ಸಾಗುವಂತೆ ಮಾಡಿ, ಸಕಾರಾತ್ಮಕ ಫಲಿತಾಂಶ ಬರುವಂತೆ ಮಾಡುವಲ್ಲಿ ವಿರೋಧ ಪಕ್ಷದ ನಾಯಕನಾಗಿ ರಾಹುಲ್ ಪಾತ್ರವು ನಿರ್ಣಾಯಕವಾದದ್ದು. ಸರ್ಕಾರ ಮತ್ತು ದೇಶವು ವಿರೋಧ ಪಕ್ಷದ ಮಾತನ್ನು ಆಲಿಸುವಂತೆ ಮಾಡುವುದಕ್ಕೆ ಬೆಳ್ಳಿ ಮತ್ತು ಅತ್ಯುತ್ಕೃಷ್ಟ ನಿಯಮಗಳು ಹಾಗೂ ತರ್ಕಬದ್ಧತೆಯೇ ಮುಖ್ಯ ಎಂಬುದನ್ನು ಅವರು ತೋರಿಸಿಕೊಡಬಹುದು.

ದಿನದ ಟ್ವೀಟ್

ನಿಜವಾಗಿ ಮಾಡಬೇಕಾದುದೇನು?

ಬಿಎಂಟಿಸಿ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಗಳಿಗೆ ಕೆಂಪೇಗೌಡರ ಹೆಸರು ಇಟ್ಟಾಯ್ತು, ನಾಡಪ್ರಭು ಕೆಂಪೇಗೌಡರ ಮೆಟ್ರೊ ಸ್ಟೇಷನ್ ಕೂಡ ಆಯ್ತು, ಕೆ.ಜಿ. ರಸ್ತೆ & ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಇದ್ದೇ ಇವೆ. ಇಷ್ಟೇ ಏಕೆ? ಬಿಬಿಎಂಪಿ, ಇದೇ ಹೆಸರಲ್ಲಿ ಅವಾರ್ಡ್ ಕೊಡುತ್ತದೆ. ಕಾಣೆಯಾಗಿರುವುದು ಕೆಂಪೇಗೌಡರು ಕಟ್ಟಿಸಿದ ಕೆರೆಗಳು ಮಾತ್ರ! #ಕೆಂಪೇಗೌಡರಜಯಂತಿ

ಅಶ್ವಿನಿ ಎಂ. ಶ್ರೀಪಾದ್, ಪತ್ರಕರ್ತೆ

ಕಿಡಿನುಡಿ



ಕೆರೆಗಳನ್ನು ಉಳಿಸಲು ತಾಲ್ಲೂಕು ಆಡಳಿತ ಎಷ್ಟೇ ಪ್ರಯತ್ನಿಸಿದರೂ ರಾಜಕೀಯ ಶಕ್ತಿಯ ಹಸ್ತಕ್ಷೇಪದಿಂದ ಅದು ಸಾಧ್ಯವಾಗುತ್ತಿಲ್ಲ. ಬೆಂಗಳೂರಿನಲ್ಲಷ್ಟೇ ಅಲ್ಲ, ರಾಜ್ಯದ ಪ್ರತಿ ತಾಲ್ಲೂಕಿನ ಹಳ್ಳಿಹಳ್ಳಿಯಲ್ಲೂ ಕೆರೆ ಮತ್ತು ಕಾಲುವೆಗಳ ಒತ್ತುವರಿ ಆಗಿದ್ದು, ತೆರವುಗೊಳಿಸಲು ಆಗುತ್ತಿಲ್ಲ. ರಾಜಕೀಯ ಸ್ವಾರ್ಥ ಇದಕ್ಕೆ ಕಾರಣ.

ಕೆ.ಕೆ.ಕೃಷ್ಣಮೂರ್ತಿ, ತಹಶೀಲ್ದಾರ್, ಹೊಳೆನರಸೀಪುರ

25 ವರ್ಷಗಳ ಹಿಂದೆ

ಸೋಮವಾರ, 28-6-1999

• ಉಗ್ರರ ತೆರವು ನಂತರ ಚರ್ಚೆ: ಭಾರತ ಸ್ಪಷ್ಟನೆ

ನವದೆಹಲಿ, ಜೂನ್ 27– ಪಾಕಿಸ್ತಾನವು ಶಸ್ತ್ರ ಸಜ್ಜಿತ ಅತಿಕ್ರಮಣಕಾರರನ್ನು ಕಾರ್ಗಿಲ್‌ನಿಂದ ವಾಪಸ್ ಕರೆಸಿಕೊಳ್ಳುವ ಬಗ್ಗೆ ತಕ್ಷಣವೇ ಕ್ರಮ ಕೈಗೊಂಡರೆ ಮಾತ್ರ ಆ ರಾಷ್ಟ್ರದೊಂದಿಗೆ ಮಾತುಕತೆ ನಡೆಸಲಾಗುವುದು ಎಂದು ಭಾರತವು ಅಮೆರಿಕಕ್ಕೆ ಸ್ಪಷ್ಟವಾಗಿ ಹೇಳಿದೆ.

ಈ ನಡುವೆ, ಕಾರ್ಗಿಲ್ ವಲಯದೊಳಕ್ಕೆ ನುಸುಳಿರುವ ಪಾಕಿಸ್ತಾನಿ ಸೈನಿಕರು ಮತ್ತು ಅತಿಕ್ರಮಣಕಾರರನ್ನು ಸುರಕ್ಷಿತವಾಗಿ ಹೊರಗೆ ಕಳುಹಿಸುವ ಯಾವುದೇ ಸೂತ್ರವನ್ನು ಅಮೆರಿಕವು ಭಾರತದ ಮುಂದಿಟ್ಟಿಲ್ಲ.

ಅಮೆರಿಕದ ವಿದೇಶಾಂಗ ಖಾತೆ ಡೆಪ್ಯುಟಿ ಅಸಿಸ್ಟೆಂಟ್ ಸೆಕ್ರೆಟರಿ ಗಿಬ್ಸನ್ ಲ್ಯಾಂಫೆರ್ ಇಂದು ಇಲ್ಲಿ ಈ ವಿಷಯವನ್ನು ಸ್ಪಷ್ಟಪಡಿಸಿದರು.

• ಭಿನ್ನರನ್ನು ಹೊರದಬ್ಬಲು ದಳ ತೀರ್ಮಾನ

ಬೆಂಗಳೂರು, ಜೂನ್ 27– ಪಕ್ಷದಲ್ಲಿ ಇದ್ದುಕೊಂಡೇ ಬೇರೆ ಪಕ್ಷಗಳಿಗೆ ಜಿಗಿಯಲು ತುದಿಗಾಲಲ್ಲಿ ನಿಂತಿರುವವರಿಗೆ ಬಾಗಿಲು ತೆಗೆದು ಹೊರ ಕಳುಹಿಸಲು ಜನತಾದಳ ಸದ್ಯದಲ್ಲೇ ನಿರ್ಣಯ ಕೈಗೊಳ್ಳಲಿದೆ.

ಜನತಾದಳ ಶಾಸಕಾಂಗ ಪಕ್ಷ ಸದ್ಯದಲ್ಲೇ ಈ ಬಗ್ಗೆ ನಿರ್ಣಯವನ್ನು ಕೈಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ಮಾಜಿ ಸಂಸತ್ ಸದಸ್ಯ ಖಮರುಲ್ ಇಸ್ಲಾಂ ಅವರಿಗೆ ಪಕ್ಷ ಬಿಟ್ಟು ಹೋಗಲು ನಾಳೆಯೇ ಕಟ್ಟುನಿಟ್ಟಿನ ಆದೇಶ ನೀಡುವ ಸಾಧ್ಯತೆ ಇದೆ.

ಇತರೆ ಪಕ್ಷಗಳ ಜತೆಗೆ ಹೊಂದಾಣಿಕೆ ವಿಚಾರದಲ್ಲಿ ಪಕ್ಷದ ಕೆಲವು ಮಂದಿ ನಾನಾ ರೀತಿಯ ಹೇಳಿಕೆಗಳನ್ನು ಕೊಟ್ಟು ಗೊಂದಲ ಸೃಷ್ಟಿಸಿರುವ ನಿಟ್ಟಿನಲ್ಲಿ ಪಕ್ಷದ ಮೇಲೆ ಆಗಿರುವ ಪರಿಣಾಮ ಕುರಿತಂತೆ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಕೇಂದ್ರದ ಮಾಜಿ ಸಚಿವ ಎಸ್.ಆರ್. ಬೊಮ್ಮಾಯಿ, ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಹಾಗೂ ಪಕ್ಷದ ಅಧ್ಯಕ್ಷ ಸಿದ್ದರಾಮಯ್ಯ ಅವರು ಇಂದು ಸುದೀರ್ಘ ಮಾತುಕತೆ ನಡೆಸಿದರು.

50 ವರ್ಷಗಳ ಹಿಂದೆ

ಶುಕ್ರವಾರ, 28-6-1974

• ರಾಷ್ಟ್ರಪತಿ ಪಟ್ಟಕ್ಕೆ ಫಕ್ರುದ್ದೀನ್ ಅಹ್ಮದ್

ನವದೆಹಲಿ, ಜೂನ್ 27– ರಾಷ್ಟ್ರಪತಿ ಸ್ಥಾನಕ್ಕೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಕೇಂದ್ರ ಆಹಾರ ಮತ್ತು ಕೃಷಿ ಸಚಿವ ಫಕ್ರುದ್ದೀನ್ ಅಲಿ ಅಹ್ಮದ್ ಅವರನ್ನು ನಾಳೆ ಇಲ್ಲಿ ಸೇರಲಿರುವ ಪಕ್ಷದ ಸಂಸದೀಯ ಮಂಡಲಿ ಆಯ್ಕೆ ಮಾಡುವುದು ಬಹುತೇಕ ಖಚಿತವೆಂದು ವೀಕ್ಷಕರು ಭಾವಿಸಿದ್ದಾರೆ.

ಪ್ರಧಾನಿ ಇಂದಿರಾ ಗಾಂಧಿ ಅವರು ಕಾಂಗ್ರೆಸ್ ಅಧ್ಯಕ್ಷ ಶಂಕರದಯಾಳ ಶರ್ಮಾ ಹಾಗೂ ಇತರ ಹಿರಿಯ ಸಹೋದ್ಯೋಗಿಗಳ ಜತೆ ನಿನ್ನೆ ಸಂಜೆ ಅಂತಿಮ ಚರ್ಚೆ ನಡೆಸಿದರು. ಸ್ವರಣ್‌ಸಿಂಗ್, ಜಗಜೀವನರಾಂ ಹಾಗೂ ಡಿ.ಕೆ. ಬರೂವಾ ಅವರು ಹಾಜರಿದ್ದರು.

• ಶ್ರೀಲಂಕಾಕ್ಕೆ ಕಛತೀವು ಬಿಟ್ಟುಕೊಡಲು ಒಪ್ಪಿಗೆ

ಕೊಲಂಬೊ, ಜೂನ್ 27– ಪಾಕ್ ಜಲಸಂಧಿಯಲ್ಲಿ ವಿವಾದಕ್ಕೊಳಗಾಗಿರುವ ಕಛತೀವು ದ್ವೀಪದ ಪರಮಾಧಿಕಾರವನ್ನು ಶ್ರೀಲಂಕಾಕ್ಕೆ ಬಿಟ್ಟುಕೊಡಲು ಭಾರತವು ನಿರ್ಧರಿಸಿರುವುದಾಗಿ ಇಂದು ತಿಳಿದುಬಂದಿದೆ.


ಉಭಯ ರಾಷ್ಟ್ರಗಳು ಸಹಿ ಮಾಡಿರುವ ಈ ಒಪ್ಪಂದದ ಅಧಿಕೃತ ಪ್ರಕಟಣೆ ನಾಳೆ ಹೊರಬೀಳುವ ನಿರೀಕ್ಷೆ ಇದೆ. ಪಾಕ್ ಜಲಸಂಧಿಯಲ್ಲಿ ಗಡಿ ಗುರುತಿಸುವ ವಿಷಯದಲ್ಲಿಯೂ ಸಮಗ್ರ ಒಪ್ಪಂದ ಏರ್ಪಟ್ಟಿರುವುದಾಗಿ ದೆಹಲಿಯಲ್ಲಿನ ಬಲ್ಲ ವಲಯಗಳಿಂದ ತಿಳಿದುಬಂದಿದೆ.

ನವದೆಹಲಿ ಮತ್ತು ಕೊಲಂಬೊದಲ್ಲಿ ಏಕಕಾಲದಲ್ಲಿ ನಾಳೆ ಪ್ರಕಟಿಸಲಾಗುವ ಈ ಒಪ್ಪಂದದ ವಿವರಗಳನ್ನು ಈ ವಲಯಗಳು ವರದಿ ಮಾಡಿಲ್ಲ.

ಶ್ರೀಮತಿ ಸಿರಿಮಾವೊ ಬಂಡಾರನಾಯಕೆ ಅವರು ಕಳೆದ ಜನವರಿಯಲ್ಲಿ ಭಾರತಕ್ಕೆ ಭೇಟಿ ನೀಡಿದ್ದಾಗ, ಕಛತೀವು ಬಗ್ಗೆ ಒಂದು ದಶಕದ ವಿವಾದವನ್ನು ಮುಕ್ತಾಯಗೊಳಿಸಬೇಕೆಂದು ಉಭಯ ರಾಷ್ಟ್ರಗಳ ಪ್ರಧಾನಿಯವರೂ ತೀರ್ಮಾನಕ್ಕೆ ಬಂದಿದ್ದರು.

ಮಹಾಭಾರತದ ಭೀಷ್ಮ ಎದುರಿಸಿದ ಸಂಕಟವೇ ಇವರಿಗೂ ಎದುರಾಗಿರಬಹುದೆ?

ಮುಳ್ಳಿನ ಮಂಚದ ಮೇಲೆ ಮಣ್ಣಿನ ಮಗ!



ಅನುಸಂಧಾನ

ರವೀಂದ್ರ ಭಟ್ಟ

ಮಹಾಭಾರತದ ಭೀಷ್ಮಾಚಾರ್ಯರಿಗೆ ತಮ್ಮ ಮೊಮ್ಮಕ್ಕಳಾದ ಕೌರವರು ಕೆಟ್ಟವರು ಎನ್ನುವುದು ಗೊತ್ತಿತ್ತು. ಅವರಿಗೆ ದುರ್ಜನರ ಸಹವಾಸ ಇದೆ ಎನ್ನುವುದೂ ತಿಳಿದಿತ್ತು. ಹಿರಿಯರು ಸಿದ್ಧಪಡಿಸಿದ್ದ ಸಿಂಹಾಸನದ ಮೇಲೆ ಕುಳಿತು ದೌಲತ್ತು ನಡೆಸುತ್ತಿದ್ದಾರೆ ಎಂಬ ಅರಿವೂ ಇತ್ತು. ಕೌರವರು ಯಾರ ಮಾತನ್ನೂ ಕೇಳದೆ ದ್ರೌಪದಿಯ ವಸ್ತ್ರಾಪಹರಣ ನಡೆಸಿದುದನ್ನು ಕಣ್ಣಾರೆ ನೋಡಿದ್ದರು. ಆದರೂ ಕೊನೆಗಾಲದಲ್ಲಿ ಭೀಷ್ಮಾಚಾರ್ಯರು ಕೌರವರ ಪರವಾಗಿಯೇ ಹೋರಾಡಿದರು. ಸೇನಾಧಿಪತ್ಯವನ್ನೂ ವಹಿಸಿಕೊಂಡರು. ಗೆಲುವು ಅವರಿಗೆ ಒಲಿಯಲಿಲ್ಲ. ಕುರುಕ್ಷೇತ್ರದಲ್ಲಿ ಅವರು ಮುಳ್ಳಿನ ಮಂಚದ ಮೇಲೆ ಮಲಗುವಂತಾಯಿತು.

ಕರ್ನಾಟಕ ರಾಜಕೀಯದ ಭೀಷ್ಮ ಎಚ್.ಡಿ. ದೇವೇಗೌಡರಿಗೂ ಈಗ ಅಂತಹದೇ ಸ್ಥಿತಿ ಬಂದೊದಗಿದೆ. ಇಬ್ಬರು ಮೊಮ್ಮಕ್ಕಳು ಜೈಲುಪಾಲಾಗಿದ್ದಾರೆ. ಒಬ್ಬ ಮಗ ಜೈಲಿಗೆ ಹೋಗಿ ಬಂದು ಜಾಮೀನಿನ ಮೇಲಿದ್ದಾರೆ. ಸೊಸೆ ಜೈಲಿಗೆ ಹೋಗುವುದನ್ನು ಸ್ವಲ್ಪದರಲ್ಲೇ ತಪ್ಪಿಸಿಕೊಂಡಿದ್ದಾರೆ. ಇನ್ನೊಬ್ಬ ಮಗ ಕೇಂದ್ರ ಸಚಿವರಾಗಿದ್ದರೂ ಆ ಸಂಭ್ರಮವನ್ನು ಆಚರಿಸುವ ಮನಃಸ್ಥಿತಿಯಲ್ಲಿ ಅವರಿಲ್ಲ. 91 ವರ್ಷ ವಯಸ್ಸಿನ ಈ ಅಜ್ಜನ ದೇಹ ಮತ್ತು ಮನಸ್ಸು ಈಗ ಮೊನಚಾದ ಮುಳ್ಳುಗಳಿಂದ ಗಾಸಿಗೊಳಗಾಗಿದೆ.


ಮೊಮ್ಮಕ್ಕಳ ನಡತೆಯ ಬಗ್ಗೆ ಅವರಿಗೆ ಗೊತ್ತಿರಲಿಲ್ಲ ಎಂದು ಕುಟುಂಬದವರು ಹೇಳುತ್ತಾರೆ. ಎಲ್ಲ ಗೊತ್ತಿದ್ದೂ ಹಾಸನ ಲೋಕಸಭಾ ಚುನಾವಣೆಯಲ್ಲಿ ಮೊಮ್ಮಗನನ್ನು ಗೆಲ್ಲಿಸಲು ಅವರು ಸೇನಾಧಿಪತ್ಯವನ್ನು ವಹಿಸಿಕೊಂಡಿದ್ದರು ಎಂದು ವಿರೋಧಿಗಳು ಹೇಳುತ್ತಾರೆ. ವಿಷಯ ಏನೇ ಇದ್ದರೂ ಅವರು ಮೊಮ್ಮಗನ ಗೆಲುವಿಗಾಗಿ ಹೋರಾಡಿದ್ದು ನಿಜ. ಮೊಮ್ಮಗ ಯುದ್ಧದಲ್ಲಿ ಸೋತಿದ್ದೂ ನಿಜ. ತನ್ನ ಅಟಾಟೋಪದಿಂದ ಈಗ ಜೈಲುಪಾಲಾಗಿದ್ದೂ ನಿಜ.

ಮಹಾಭಾರತದ ಭೀಷ್ಮಾಚಾರ್ಯರು ತಮ್ಮ ನಿಷ್ಠೆ ಏನಿದ್ದರೂ ಸಿಂಹಾಸನಕ್ಕೆ, ಏನೇ ಇದ್ದರೂ ತಾವು ಸಿಂಹಾಸನ ರಕ್ಷಣೆ ಕಾಯಕದಿಂದ ಹಿಂದೆ ಸರಿಯುವುದಿಲ್ಲ ಎನ್ನುತ್ತಾರೆ. ಅದೇ ರೀತಿ ದೇವೇಗೌಡರೂ ತಮ್ಮ ನಿಷ್ಠೆ ಪಕ್ಷಕ್ಕೆ ಎಂದು ಘೋಷಿಸಿಕೊಂಡವರು. ಪಕ್ಷ ನಿಷ್ಠೆಯಿಂದ ಎಂದೂ ಹಿಂದೆ ಸರಿದವರಲ್ಲ. ಪಕ್ಷ ಎಂದರೆ ಅವರ ಕುಟುಂಬ ಮಾತ್ರವೆಂದು ವ್ಯಂಗ್ಯವಾಡುವವರ ಸಂಖ್ಯೆಯೂ ಕಡಿಮೆಯೇನಿಲ್ಲ. ಆದರೂ ದೇವೇಗೌಡರ ಇಚ್ಛಾಶಕ್ತಿಯನ್ನು, ಈ ಇಳಿವಯಸ್ಸಿನಲ್ಲಿಯೂ ಹೋರಾಡುವ ಛಲವನ್ನು ಮೆಚ್ಚದೇ ಇರಲು ಸಾಧ್ಯವಿಲ್ಲ. ಫೀನಿಕ್ಸ್ ಪಕ್ಷಿಯಂತೆ ಪುಟಿದೆದ್ದು ಬರುವೆ ಎಂದು ಅವರೊಮ್ಮೆ ಹೇಳಿದ್ದರು. ಹೀಗೆ ಪುಟಿದೆದ್ದು ಬರುವುದು ಅವರ ಜಾಯಮಾನವೇ ಆಗಿತ್ತು. ಆದರೆ ಈಗ ಅವರು ಮೊಮ್ಮಕ್ಕಳ ಕಾರಣಕ್ಕೆ ಈ ನೋವು ಉಣ್ಣುವುದನ್ನು ನೋಡಿದರೆ ಎಂತಹವರಿಗೂ ಕರುಳು ಚುರುಕ್ ಎನ್ನದೇ ಇರದು.

ದೇವೇಗೌಡರ ಮಕ್ಕಳಿಗೆ, ಮೊಮ್ಮಕ್ಕಳಿಗೆ ರಾಜಕೀಯದ ಹಾದಿ ಸುಗಮವಾಗಿರಬಹುದು. ಆದರೆ ದೇವೇಗೌಡರಿಗೆ ಅದು ಕಠಿಣವಾದ ಹಾದಿಯಾಗಿತ್ತು. ರೈಲು ನಿಲ್ದಾಣದಲ್ಲಿ ಚಹಾ ಮಾರುತ್ತಿದ್ದ ಹುಡುಗನೊಬ್ಬ ಪ್ರಧಾನಿ ಹುದ್ದೆಗೆ ಏರಿದ್ದು ಮಹಾ ಸಾಧನೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ಹೇಳಲಾಗುತ್ತದೆ. ಅದು ನಿಜವೂ ಹೌದು. ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಹರದನಹಳ್ಳಿ ಎಂಬ ಕುಗ್ರಾಮದಿಂದ ಬಂದ ದೇವೇಗೌಡರು ಪ್ರಧಾನಿ ಸ್ಥಾನಕ್ಕೆ ಏರಿದ್ದು ಕೂಡ ಬಹುದೊಡ್ಡ ಸಾಧನೆಯೆ.

ನಿರ್ದಿಷ್ಟ ರಾಜಕೀಯ ಸಿದ್ಧಾಂತವನ್ನು ತಮ್ಮ ಜೀವನದ ಉಸಿರಾಗಿಸಿಕೊಂಡಿದ್ದ ಕೋಟ್ಯಂತರ ಕಾರ್ಯಕರ್ತರ ಪಡೆಯೇನೂ ಅವರ ಬೆನ್ನಿಗೆ ಇರಲಿಲ್ಲ. ಬಡತನದ ರೇಖೆಯನ್ನು ದಾಟಲಾಗದಂತಹ ಆರ್ಥಿಕ ಪರಿಸ್ಥಿತಿ ಇತ್ತು. ಇಂತಹ ರೈತನೊಬ್ಬನ ಮಗ ದೇಶದ ಅತ್ಯುನ್ನತ ಹುದ್ದೆಗೆ ಏರಿದ ರೀತಿ ಅತ್ಯಂತ ರೋಚಕ. ಭಾರತೀಯ ರಾಜಕೀಯ ರಂಗದಲ್ಲಿ ಪ್ರತಿಯೊಬ್ಬ ರಾಜಕಾರಣಿಯ ಅತ್ಯುನ್ನತ ಕನಸು ಎಂದರೆ ಅದು ಪ್ರಧಾನಿ ಹುದ್ದೆ. ಡಿಪ್ಲೊಮಾ ಪದವೀಧರರಾಗಿ ಜೀವನ ನಿರ್ವಹಣೆಗೆ ಲೋಕೋಪಯೋಗಿ ಇಲಾಖೆಯಲ್ಲಿ ಸಣ್ಣಪುಟ್ಟ ಗುತ್ತಿಗೆ ಕಾಯಕವನ್ನು ಮಾಡುತ್ತಿದ್ದ ವ್ಯಕ್ತಿಯೊಬ್ಬ ದೇಶದ ಅತ್ಯುನ್ನತ ಪದವಿಗೇರಿದ್ದು ವಿಸ್ಮಯ. ಒಂದೊಂದೇ ಇಟ್ಟಿಗೆಯನ್ನು ಜೋಡಿಸಿ ಕಟ್ಟಿದ ಮಹಲನ್ನು ತನ್ನ ಮಕ್ಕಳು, ಮೊಮ್ಮಕ್ಕಳೇ ಪುಡಿಗಟ್ಟಿದರೆ ಆಗುವ ನೋವು ಯಾವ ಶತ್ರುವಿಗೂ ಬೇಡ.

ಹೊಳೆನರಸೀಪುರದ ಆಂಜನೇಯ ಕೊ–ಆಪರೇಟಿವ್ ಸೊಸೈಟಿ ಅಧ್ಯಕ್ಷರಾಗಿ, ತಾಲ್ಲೂಕು ಅಭಿವೃದ್ಧಿ ಮಂಡಳಿ ಸದಸ್ಯರಾಗಿ ರಾಜಕೀಯ ಆರಂಭಿಸಿದ ದೇವೇಗೌಡರಿಗೆ ಸ್ವಾತಂತ್ರ್ಯ ಹೋರಾಟಗಾರ ಎ.ಜಿ.ರಾಮಚಂದ್ರ ರಾವ್ ಅವರೇ ಗುರುಗಳು. 1962ರಲ್ಲಿ ಕಾಂಗ್ರೆಸ್ ಪಕ್ಷ ಟಿಕೆಟ್ ನೀಡಲಿಲ್ಲ ಎಂದು ಹೊಳೆನರಸೀಪುರದಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದವರು ಅವರು. ತಮ್ಮ ರಾಜಕೀಯ ಜೀವನವನ್ನು ಕಾಂಗ್ರೆಸ್ ಪಕ್ಷದಿಂದಲೇ ಆರಂಭಿಸಿದರೂ ನಂತರ ತಮ್ಮ ಬದುಕಿನ ಬಹುತೇಕ ಭಾಗ ಕಾಂಗ್ರೆಸ್ ವಿರೋಧಿ ರಾಜಕೀಯವನ್ನೇ ಮಾಡುತ್ತಾ ಬಂದ ದೇವೇಗೌಡರು ಹೋರಾಟದ ಮನೋಭಾವವನ್ನು ಎಂದಿಗೂ ಬಿಟ್ಟುಕೊಟ್ಟವರಲ್ಲ.



1969ರಲ್ಲಿ ಕಾಂಗ್ರೆಸ್ ಪಕ್ಷ ಹೋಳಾದಾಗ ದೇವೇಗೌಡರು ಆಯ್ಕೆ ಮಾಡಿಕೊಂಡಿದ್ದು ನಿಜಲಿಂಗಪ್ಪನವರ ಸಂಸ್ಥಾ ಕಾಂಗ್ರೆಸ್ ಪಕ್ಷವನ್ನು. 1972ರಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ದೇವೇಗೌಡರು ತುರ್ತು ಪರಿಸ್ಥಿತಿ ಸಂದರ್ಭದಲ್ಲಿ 18 ತಿಂಗಳು ಸೆರೆವಾಸವನ್ನೂ ಅನುಭವಿಸಿದ್ದರು. ನಂತರ ಜನತಾ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾಗಿದ್ದ ಅವರು ಮುಖ್ಯಮಂತ್ರಿ ಗಾದಿಯ ಹತ್ತಿರಕ್ಕೆ ಹೋಗಿದ್ದರೂ ಏರಲು ಸಾಧ್ಯವಾಗಿರಲಿಲ್ಲ. 1962ರಿಂದ 1985ರವರೆಗೆ 'ಸೋಲಿಲ್ಲದ ಸರದಾರ'ರಾಗಿದ್ದ ಅವರು, 1989ರಲ್ಲಿ ಮೊದಲ ಬಾರಿಗೆ ಸೋತರು. ಹರಿದು ಹಂಚಿಹೋಗಿದ್ದ ಜನತಾ ಪರಿವಾರವನ್ನು ಒಟ್ಟು ಸೇರಿಸಿ 1994ರ ಚುನಾವಣೆಯಲ್ಲಿ ಗೆದ್ದು ಮುಖ್ಯಮಂತ್ರಿಯಾದರು. ನಂತರ 1996ರಲ್ಲಿ ಪ್ರಧಾನಿಯೂ ಆದರು. ಮುಖ್ಯಮಂತ್ರಿಯಾಗಿಯೂ ಪ್ರಧಾನಿಯಾಗಿಯೂ ಅವಧಿ ಪೂರೈಸದಿದ್ದರೂ ಅವರು ರಾಜಕೀಯ ರಂಗದಲ್ಲಿ ತಮ್ಮ ಛಾಪನ್ನು ಮೂಡಿಸುವಲ್ಲಿ ಯಶಸ್ವಿಯಾಗಿದ್ದರು.

ದೇವೇಗೌಡರನ್ನು ರಾಜಕೀಯವಾಗಿ ವಿರೋಧಿಸುವವರು ಬಹಳ ಜನ ಇರಬಹುದು. ಅವರ ಎಲ್ಲ ಹೋರಾಟಗಳನ್ನು ಒಪ್ಪದೇ ಇರಬಹುದು. ಕುಟುಂಬದ ಬಗ್ಗೆ ಅವರ ಅತಿಯಾದ ಪ್ರೀತಿ ನಮಗೆ ಬೇಸರ ತರಿಸಬಹುದು. ಆದರೆ ಅವರ ಹೋರಾಟ, ರಾಜ್ಯದ ಕುರಿತ ಅವರ ದೃಢವಾದ ನಿಲುವು, ನೀರಾವರಿ ವಿಷಯದಲ್ಲಿನ ಅವರ ಜ್ಞಾನ, ರೈತಪರ ಕಾಳಜಿ, ಕರ್ನಾಟಕಕ್ಕೆ ಒಳಿತು ಮಾಡಬೇಕು ಎಂಬ ಅವರ ಮನೋಭಿಲಾಷೆಯನ್ನು ಅಲ್ಲಗಳೆಯಲು ಸಾಧ್ಯವೇ ಇಲ್ಲ. ಇದೆಲ್ಲಕ್ಕಿಂತ ಹೆಚ್ಚಾಗಿ ಅವರ ನೈತಿಕತೆಯನ್ನು ಪ್ರಶ್ನಿಸುವ ಧೈರ್ಯ ಯಾರಿಗೂ ಇಲ್ಲ. ಶುದ್ಧ ಸಾಂಸಾರಿಕ ಜೀವನ ನಡೆಸಿದವರು. ರಾಜಕೀಯವಾಗಿ ಎಷ್ಟೇ ಮೇಲಕ್ಕೆ ಏರಿದರೂ ತಮ್ಮ ನಡತೆ ತಪ್ಪಿದವರಲ್ಲ.

ರಾಜಕೀಯವಾಗಿ ಒಂದು ಪಕ್ಷ ಅಥವಾ ವ್ಯಕ್ತಿ ಸೋಲುವುದು ಸಹಜ. ಸ್ವತಂತ್ರ ಭಾರತದಲ್ಲಿ ಎಷ್ಟೋ ರಾಜಕೀಯ ಪಕ್ಷಗಳು ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡಿವೆ. ಉತ್ತರಪ್ರದೇಶದಲ್ಲಿ ಮುಖ್ಯಮಂತ್ರಿಯಾಗಿ ಮೆರೆದ ಮಾಯಾವತಿ ನೇತೃತ್ವದ ಬಿಎಸ್‌ಪಿ ಈಗ ಆ ರಾಜ್ಯದಲ್ಲಿ ಶಕ್ತಿ ಕಳೆದುಕೊಂಡಿದೆ. ಮುಂದೊಂದು ದಿನ ಅದು ಮತ್ತೆ ಎದ್ದು ನಿಲ್ಲಬಹುದು. ಆದರೆ ನೈತಿಕವಾಗಿಯೇ ಸೋತುಹೋದರೆ ಯಾವುದೇ ಪಕ್ಷ ಅಥವಾ ನಾಯಕ ಎದ್ದು ನಿಲ್ಲುವುದು ಕಷ್ಟ. ದೇವೇಗೌಡರು ಈಗ ಅಂತಹ ಆಘಾತಕ್ಕೆ ಒಳಗಾಗಿದ್ದಾರೆ. ಬದುಕಿನ ಸಂಧ್ಯಾಕಾಲದಲ್ಲಿ ಇರುವ ಅವರಿಗೆ ಅವರ ಕುಟುಂಬದವರಿಂದಲೇ ಇಂತಹ ಸ್ಥಿತಿ ಬರಬಾರದಾಗಿತ್ತು.

ಮಹಾಭಾರತದ ಭೀಷ್ಮ ಕಡೆಗಾಲದಲ್ಲಿ ಕೆಟ್ಟವರ ಪರವಾಗಿಯೇ ಹೋರಾಡಿದರು ನಿಜ. ಆದರೂ ಮಹಾಭಾರತದಲ್ಲಿ ಅವರದ್ದು ಪ್ರಮುಖ ಪಾತ್ರ. ಈಗಲೂ ಯಾವುದೇ ಕ್ಷೇತ್ರದಲ್ಲಿ ಉನ್ನತ ಸಾಧನೆ ಮಾಡಿದವರನ್ನು ಭೀಷ್ಮ ಎಂದೇ ಗುರುತಿಸಲಾಗುತ್ತದೆ. ಮಹಾಭಾರತ ನೆನಪಿನಲ್ಲಿ ಇರುವಷ್ಟು ಕಾಲ ಕೂಡ ಭೀಷ್ಮ ನೆನಪಿನಲ್ಲಿ ಇರುತ್ತಾರೆ. ಅದೇ ರೀತಿ ದೇವೇಗೌಡರ ಸಂಧ್ಯಾಕಾಲದಲ್ಲಿ ಏನೇನೋ ಘಟನೆಗಳು ನಡೆದಿರಬಹುದು. ಆದರೆ ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಅವರ ಹೆಸರು ಚಿರಸ್ಥಾಯಿ. ಈಗಷ್ಟೇ 91ನೇ ಹುಟ್ಟುಹಬ್ಬ ಆಚರಿಸಿಕೊಂಡಿರುವ ಅವರು ನಂಬಿದ್ದು ರೈತರ ಕಲ್ಯಾಣ. ರೈತಹಿತಕ್ಕೆ ನಡೆಸಿದ ಸಂಘರ್ಷದ ಹೋರಾಟವೂ ಅನುಕರಣೀಯ.

ಚುರುಮುರಿ



ನಮ್ಮಲ್ಲೇ ಮೊದಲು!

• ಬಿ.ಎನ್.ಮಲ್ಲೇಶ್

'ರೀ... ನಾಳೆ ನಿಮ್ ಪ್ರೋಗ್ರಾಂ ಏನು? ಯಾರ ಬೆಡ್‌ರೂಂಗೆ ಕ್ಯಾಮೆರಾ ತಗಂಡ್ ಹೋಗ್ಬೇಕು? ಯಾರನ್ನ ಪರಪ್ಪನ ಅಗ್ರಹಾರಕ್ಕೆ ಬಿಟ್ ಬರ್ಬೇಕು?' ಟಿ.ವಿ. ಪತ್ರಕರ್ತ ತೆಪರೇಸಿಯನ್ನ ಅವನ ಹೆಂಡತಿ ಪಮ್ಮಿ ಕೇಳಿದಳು.

'ಏನೋಪ್ಪ, ನಾಳೆ ಯಾವ ಹೊಸ ಕೇಸ್ ತಗಲಾಕ್ಕಂತತೋ ಗೊತ್ತಿಲ್ಲ. ನಂಗಂತೂ ಸಾಕ್ ಸಾಕಾಗೇತಿ' ತಲೆ ಕೊಡವಿದ ತೆಪರೇಸಿ.

'ಅಲ್ಲರೀ... ನೀವು ದಿನಾ ಒಬ್ಬೊಬ್ರ ಖಾಸಗಿ ಬದುಕನ್ನು ಇಣುಕಿ ಬರ್ತೀರಲ್ಲ, ಒಂದಿನಾದ್ರು ನಮ್ ಬದುಕಿನ ಬಗ್ಗೆ ಯೋಚನೆ ಮಾಡಿದ್ದೀರಾ?'

'ಲೇಯ್, ದಿನ ಬೆಳಗಾದ್ರೆ ಯಾರಿಗೂ ಸಿಗದಂಥ ನ್ಯೂಸ್ ಹುಡುಕಿ 'ನಮ್ಮಲ್ಲೇ ಮೊದಲು' ಅಂತ ಕೊಡದಿದ್ರೆ ನನ್ ಕೆಲ್ಸ ಹೋಕ್ಕತಿ. ರೇಪ್ ಮಾಡಿದೋನ ಚೆಡ್ಡಿ ಸಿಕ್ರೆ, ಅದು ಯಾವ ಬ್ರ್ಯಾಂಡು, ಎಲ್ಲಿ ತಗಂಡಿದ್ದ ಎಲ್ಲ ತೋರುಸ್ಬೇಕು ಗೊತ್ತಾ?'

'ಅಲ್ಲ, ಮಾತಿಗೆ ಕೇಳ್ತೀನಿ, ಪೊಲೀಸ್ ವಿಚಾರಣೆ ಟೈಮಲ್ಲಿ ಅಲ್ಲಿ ನೀವಿರ್ತೀರಾ? ಅಥ್ವ ಜೈಲೊಳಕ್ಕೆ ನಿಮ್ಮನ್ನ ಬಿಡ್ತಾರಾ?'

'ಇಲ್ಲ, ಯಾಕೆ?'

'ಮತ್ತೆ ಪೊಲೀಸ್ರು ಇಂತಿಂಥದೇ ಪ್ರಶ್ನೆ ಕೇಳಿದ್ರು ಅಂತ ಹೆಂಗ್ ಹೇಳ್ತೀರಿ? ಜೈಲಲ್ಲಿ ಆರೋಪಿ ಇಂಥದೇ ಊಟ ತಿಂದ, ನಿದ್ದೆ ಬರದೆ ಒದ್ದಾಡಿದ, ಗೊಳೋ ಅಂತ ಅತ್ತ, ಗುರ್ ಅಂದ, ಕಿರ್ ಅಂದ ಅಂತ ಹೆಂಗ್ ತೋರಿಸ್ತೀರಿ?'

'ಅದೂ... ಅಲ್ಲೆಲ್ಲ ಜನ ಇಟ್ಕಿರ್ತೀವಿ ಕಣೆ, ನಿಂಗ್ ಗೊತ್ತಾಗಲ್ಲ...'

'ಆಮೇಲೆ ಇಂತಿಂಥ ಕೇಸ್‌ಗೆ ಇಂಥದೇ ಸೆಕ್ಷನ್ನು ಅಂತ ಪಟಪಟ ಹೇಳ್ತೀರಲ್ಲ, ಸ್ಕೂಲಲ್ಲಿ ನಿಮ್ ಮಗ ಯಾವ ಸೆಕ್ಷನ್‌ನಲ್ಲಿ ಓದ್ತಾ ಇದಾನೆ ಗೊತ್ತಾ? ಹೋಗ್ಲಿ, ಅವಳು ಇವನನ್ನ ಎರಡನೇ ಮದ್ವೆ ಆದ್ಲು, ಇವನು ಇನ್ಯಾವಳನ್ನೋ ಮೂರನೇ ಮದ್ವೆ ಆದ ಅಂತ ಎಷ್ಟು ಕರೆಕ್ಟಾಗಿ ಹೇಳ್ತೀರಲ್ಲ, ನಾವು ಮದುವೆ ಆಗಿದ್ದು ಯಾವಾಗ ಗೊತ್ತಾ? ನಿನ್ನೆ ನಮ್ ಆ್ಯನಿವರ್ಸರಿ ಇತ್ತು, ನೆನಪಿತ್ತಾ?'

ತೆಪರೇಸಿ ಪಿಟಿಕ್ಕನ್ನದೆ ಯಾವುದೋ ಫೋನ್ ಬಂದಂತೆ ನಟಿಸಿ 'ಹಲೋ ಹಲೋ' ಎನ್ನುತ್ತ ಹೊರಗೆ ಹೋದ.

ಸಂಗತ

ಮಹಿಳಾ ಸಬಲೀಕರಣಕ್ಕೆ 'ಶಕ್ತಿ'

ಮಹಿಳೆಯರಿಗೆ ಒದಗಿಸಿರುವ ಉಚಿತ ಬಸ್ ಪ್ರಯಾಣ ಸೌಲಭ್ಯವು ಅವರ ಸಬಲೀಕರಣಕ್ಕೆ, ಆ ಮೂಲಕ ಸಾಮಾಜಿಕ ಹಾಗೂ ಆರ್ಥಿಕ ಪ್ರಗತಿಗೆ ಕಾರಣವಾಗಿದೆ

• ಎಸ್.ಆರ್.ವಿಜಯಶಂಕರ

ರಾಜ್ಯ ಸರ್ಕಾರ ನೀಡಿರುವ ಐದು ಗ್ಯಾರಂಟಿಗಳಲ್ಲಿ ಹೆಚ್ಚಿನವುಗಳ ಉದ್ದೇಶ ಮಹಿಳೆಯರ ಸಬಲೀಕರಣ. ಅವುಗಳಲ್ಲಿ 'ಶಕ್ತಿ' ಯೋಜನೆಯು ಮಹಿಳೆಯರಿಗೆ ಸರ್ಕಾರಿ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸುವ ಅವಕಾಶ ಕಲ್ಪಿಸಿದೆ.

ಯಾವುದೇ ಯೋಜನೆ ಜನರನ್ನು ಎಷ್ಟರ ಮಟ್ಟಿಗೆ ತಲುಪಿದೆ ಎಂಬುದನ್ನು ಅಳೆಯುವುದು, ಆ ಯೋಜನೆಯ ಸೂಕ್ತ ಮುಂದುವರಿಕೆಗೆ ಮುಖ್ಯ. ಅದಕ್ಕಾಗಿ ಸರ್ಕಾರವು ಲೋಕಸಭಾ ಚುನಾವಣಾ ಫಲಿತಾಂಶಕ್ಕೂ ಮುನ್ನ ಜಸ್ಟ್ ಜಾಬ್ಸ್ ನೆಟ್‌ವರ್ಕ್ ಹಾಗೂ ಸರ್ಕಾರಿ ಸ್ವಾಮ್ಯದ ಫಿಸ್ಕಲ್ ಪಾಲಿಸಿ ಇನ್‌ಸ್ಟಿಟ್ಯೂಟ್ ಮೂಲಕ ಈ ಯೋಜನೆಯ ಸಮೀಕ್ಷೆ ನಡೆಸಿದೆ.

ಈ ಸಂಸ್ಥೆಗಳು ಅಂತಿಮ ಸಮೀಕ್ಷಾ ವರದಿಯನ್ನು ಸಲ್ಲಿಸಿಲ್ಲವಾದರೂ ವರದಿಯ ಕರಡು ಆವೃತ್ತಿಯ ವಿವರ ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಯೋಜನೆಯ ಸಾಮಾಜಿಕ ಹಾಗೂ ಆರ್ಥಿಕ ಯಶಸ್ಸು, ಆ ಮೂಲಕ ಮಹಿಳೆಯರ ಸಬಲೀಕರಣ, ಅವರಿಗೆ ಆಗಿರುವ ಆರ್ಥಿಕ ಅನುಕೂಲಗಳ ಬಗೆಗೆ ಅದು ಮಾಹಿತಿ ನೀಡಿದೆ. ಈ ಯೋಜನೆಯಿಂದ ಬೆಂಗಳೂರಿನಲ್ಲಿ ಮಹಿಳೆಯರಿಗೆ ತಿಂಗಳಿಗೆ ಸರಾಸರಿ ₹ 1,326 ಉಳಿತಾಯವಾದರೆ, ಉಡುಪಿ ಜಿಲ್ಲೆಯಲ್ಲಿ ಈ ಪ್ರಮಾಣ ಕನಿಷ್ಠ ಅಂದರೆ ₹ 681. ಉದ್ಯೋಗ, ಶಿಕ್ಷಣ, ಪ್ರವಾಸ, ತೀರ್ಥಕ್ಷೇತ್ರ ಪ್ರವಾಸ, ಮನರಂಜನಾ ತಿರುಗಾಟ, ಔಷಧಿಯಂತಹ ಅಗತ್ಯ ವಸ್ತುಗಳ ಕೊಳ್ಳುವಿಕೆ ಹಾಗೂ ಬಂಧುಮಿತ್ರರ ಭೇಟಿಗೆ ಅನುಕೂಲವಾಗುವಂತಹ ಸಂಚಾರಕ್ಕೆ ಮಹಿಳೆಯರು ಈ ಯೋಜನೆಯನ್ನು ಬಳಸಿಕೊಂಡಿರುವುದು ತಿಳಿದುಬಂದಿದೆ.

ಉಡುಪಿ ಸೇರಿದಂತೆ ಕೆಲವೆಡೆ ಖಾಸಗಿ ಬಸ್ಸುಗಳ ಮೇಲಿನ ಅವಲಂಬನೆ ಹೆಚ್ಚು. ಉಳಿದಂತೆ ಬಸ್ ಸಂಚಾರದಲ್ಲಿ ಒಟ್ಟು ಶೇ 7ರಷ್ಟು ಹೆಚ್ಚಳವಾಗಿದ್ದರೆ, ರೈಲು ಹಾಗೂ ಮೆಟ್ರೊ ಸಂಚಾರದಲ್ಲಿ ಕ್ರಮವಾಗಿ ಶೇ 3.18 ಹಾಗೂ ಶೇ 1.28ರಷ್ಟು ಹೆಚ್ಚಳವಾಗಿದೆ ಎಂಬ ಮಾಹಿತಿ ಹೊರಬಿದ್ದಿದೆ.

ಮಹಿಳೆಯರ ಸಬಲೀಕರಣವು ಅವರ ಕರ್ತೃತ್ವ ಶಕ್ತಿಯನ್ನು ಹೆಚ್ಚಿಸುತ್ತದೆ. ಇದರಿಂದ ಸಮಾಜಕ್ಕೆ ಹಲವು ಪರೋಕ್ಷ ಪ್ರಯೋಜನಗಳಾಗುವುದರ ಜೊತೆಗೆ ಕುಟುಂಬದ ಇತರ ಸದಸ್ಯರ ಮೇಲೂ ಮಹಿಳೆಯರು ಸಕಾರಾತ್ಮಕ ಪ್ರಭಾವ ಬೀರುತ್ತಾರೆ. ಉದಾಹರಣೆಗೆ, ಬೀದಿಬದಿ ವ್ಯಾಪಾರಿಯಾದ ಪರಿಚಿತ ಮಹಿಳೆಯೊಬ್ಬರು, ಗಂಡ ತೀರಿಕೊಂಡ ಬಳಿಕ ಮನೆ ಬಾಡಿಗೆ ಕಟ್ಟಲಾರದೆ ಬೆಂಗಳೂರಿನಿಂದ ನೆಲಮಂಗಲಕ್ಕೆ ಸ್ಥಳಾಂತರಗೊಂಡರು. ವ್ಯಾಪಾರಕ್ಕಾಗಿ ಪ್ರತಿನಿತ್ಯ ಆಕೆ ಬೆಂಗಳೂರಿಗೆ ಬಸ್ಸಿನಲ್ಲಿ ಉಚಿತವಾಗಿ ಪ್ರಯಾಣಿಸುತ್ತಾರೆ. ಇದರಿಂದ ಉಳಿತಾಯವಾಗುವ ಹಣದಲ್ಲಿ ಅವರು ತಮ್ಮ ಎರಡನೇ ಮಗನನ್ನು ಸರ್ಕಾರಿ ಕಾಲೇಜಿನಲ್ಲಿ ಬಿ.ಕಾಂ. ಪದವಿಗೆ ಸೇರಿಸಿದ್ದಾರೆ. ಈ ಹಣ ಇಲ್ಲದಿದ್ದರೆ, ಹಿರಿಯ ಮಗನೊಡನೆ ಈ ಮಗನನ್ನೂ ಗಾರೆ ಕೆಲಸಕ್ಕೆ ಕಳುಹಿಸುವ ಯೋಚನೆ ಆಕೆಗಿತ್ತು.

ಒಂದು ವರ್ಷದಲ್ಲಿ ಸರ್ಕಾರಿ ಬಸ್ಸುಗಳಲ್ಲಿ ಮಹಿಳೆಯರು ಸಂಚರಿಸಿದ್ದಕ್ಕಾಗಿ ಸಾರಿಗೆ ನಿಗಮಗಳಿಗೆ ಆಗಿರುವ ವೆಚ್ಚ ₹ 4,380 ಕೋಟಿ. ಅವು ಪ್ರಯಾಣಿಕರು ಕಡಿಮೆ ಸಂಖ್ಯೆಯಲ್ಲಿ ಇದ್ದರೂ ಸಂಚರಿಸುವ ಬಸ್ಸುಗಳು. ಪ್ರವಾಸಿ ತಾಣಗಳು ಹಾಗೂ ತೀರ್ಥಕ್ಷೇತ್ರಗಳೂ ಹೆಚ್ಚಿನ ಆದಾಯ ಗಳಿಸಿವೆ. ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಇದೇ ಮೊದಲ ಬಾರಿಗೆ ತಿಂಗಳಿಗೆ ₹ 20 ಕೋಟಿಗೂ ಹೆಚ್ಚು ಕಾಣಿಕೆ ಹಣ ಸಂಗ್ರಹವಾಗಿದೆ. ಭಕ್ತರಿಗೆ ಆದ ಅನುಕೂಲವನ್ನು ವಿವರಿಸಿ ಧರ್ಮಸ್ಥಳದ ಧರ್ಮಾಧಿಕಾರಿಯವರು ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ.

ರಾಜ್ಯದ ₹ 3.71 ಲಕ್ಷ ಕೋಟಿ ಮೊತ್ತದ ವಾರ್ಷಿಕ ಬಜೆಟ್‌ನಲ್ಲಿ 'ಶಕ್ತಿ'ಗಾಗಿ ವ್ಯಯಿಸುವ ಹಣ ದೊಡ್ಡದೇನಲ್ಲ. ಇದರಿಂದ ಮಹಿಳಾ ಕಾರ್ಮಿಕ ಭಾಗಿದಾರಿಕೆ ಶೇ 5ರಷ್ಟು ಹೆಚ್ಚಾಗಿದೆ. ಜಿಎಸ್‌ಟಿ ಸಂಗ್ರಹವೂ ಸ್ವಲ್ಪ ಪ್ರಮಾಣದಲ್ಲಿ ಹೆಚ್ಚಾಗಿದೆ.



ಬೆಂಗಳೂರಿನಲ್ಲಿ ನಾನು ವಾಸಿಸುವ ಫ್ಲ್ಯಾಟ್‌ನಲ್ಲಿ ಕಸ ಗುಡಿಸಲು ಈ ಮೊದಲು ತನ್ನ ಮನೆಯಿಂದ ನಡೆದುಕೊಂಡು ಬರುತ್ತಿದ್ದ ಮಹಿಳೆ, ಈಗ ಬಸ್‌ನಲ್ಲಿ ಬರುತ್ತಾಳೆ. ಇದರಿಂದ ಆಕೆಗೆ ದಿನಕ್ಕೆ ಎರಡು ಗಂಟೆ ಸಮಯ ಉಳಿತಾಯವಾಗುತ್ತಿದೆ. ನಡೆದುಕೊಂಡು ಬರುವುದರಿಂದ ಆಗುವ ಆಯಾಸ ತಪ್ಪಿರುವುದರಿಂದ, ಹತ್ತಿರದ ಅಂಗಡಿಯೊಂದರಲ್ಲಿ ಆಕೆ ಹೊಸದಾಗಿ ಪಾರ್ಟ್‌ಟೈಮ್ ಕೆಲಸಕ್ಕೆ ಸೇರಿದ್ದಾಳೆ. ಇದರಿಂದ ತಿಂಗಳಿಗೆ ₹ 1,250 ಹೆಚ್ಚುವರಿ ಆದಾಯ ಗಳಿಸುತ್ತಿದ್ದಾಳೆ.

ಬೆಂಗಳೂರು ನಗರದಲ್ಲಿ ಬಡ ಕುಟುಂಬವೊಂದರ ತಿಂಗಳ ಖರ್ಚಿಗೆ ಸರಾಸರಿ ಅಂದಾಜು ₹ 12,497 ಬೇಕು ಎಂದು ವರದಿಗಳು ಹೇಳುತ್ತವೆ. ಹೀಗಿರುವಾಗ, ತಿಂಗಳಿಗೆ ಬಸ್ ಸಂಚಾರಕ್ಕೆ ವ್ಯಯಿಸಬೇಕಾದ ಹಣ ಉಳಿತಾಯವಾಗುವುದು ಅವರ ಜೀವನದಲ್ಲಿ ದೊಡ್ಡ ಬದಲಾವಣೆಯನ್ನು ತರಬಲ್ಲದು.

ಮಹಿಳೆಯರು ಪ್ರಯಾಣಿಸುವಾಗ ಮಾಡುವ ಖರ್ಚು ವೆಚ್ಚದಿಂದ ಸರ್ಕಾರಕ್ಕೆ ಸ್ವಲ್ಪಮಟ್ಟಿಗೆ ಪರೋಕ್ಷ ತೆರಿಗೆಯ ಆದಾಯ ಇದೆ. ಸರ್ಕಾರ ಭರಿಸುವ ಮಹಿಳಾ ಟಿಕೆಟ್ ವೆಚ್ಚದಲ್ಲೂ ಜಿಎಸ್‌ಟಿ ಸೇರಿರುತ್ತದೆ. ಹಾಗಾಗಿ, ಇದು ಸರ್ಕಾರಕ್ಕೆ ತೀರಾ ಶೂನ್ಯ ವರಮಾನದ ಖರ್ಚೇನಲ್ಲ.

ಯಾವುದೇ ಸರ್ಕಾರ ಕೃಷಿ, ಕೈಗಾರಿಕೆ, ನಗರೀಕರಣ, ರೈಲು, ರಸ್ತೆ, ಮೆಟ್ರೊ, ಶಿಕ್ಷಣ, ಆರೋಗ್ಯದಂತಹ ಕ್ಷೇತ್ರಗಳಿಗೆ ಮಾಡುವ ಹೂಡಿಕೆಯು ಆರ್ಥಿಕ ಲಾಭದ ಉದ್ದೇಶವನ್ನು ಪ್ರಧಾನವಾಗಿ ಹೊಂದಿರುವುದಿಲ್ಲ. ಸಮಾಜದ ಸಮಗ್ರ ಅಭಿವೃದ್ಧಿಗಾಗಿ, ಸುಗಮ ಸಂಚಾರಕ್ಕಾಗಿ ಅಂತಹ ಯೋಜನೆಗಳು ಬೇಕು. ಹಾಗೆಯೇ ಮಾನವ ಸಂಪನ್ಮೂಲದ ಸಮಗ್ರ ಪ್ರಗತಿಗಾಗಿ ಮಹಿಳಾ ಸಬಲೀಕರಣ ಹಾಗೂ ಅದಕ್ಕೆ ಪೂರಕವಾದ ಯೋಜನೆಗಳು ಅತ್ಯಗತ್ಯವಾಗಿ ಇರಬೇಕಾಗುತ್ತದೆ.

ವಾಚಕರ ವಾಣಿ

ಸಮ್ಮೇಳನಾಧ್ಯಕ್ಷರ ಆಯ್ಕೆ: ಉಳಿಯಲಿ ಸ್ವಾಯತ್ತ ಪರಂಪರೆ

ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಪಟ್ಟಕ್ಕೆ ಅರ್ಜಿಗಳ ಮಹಾಪೂರವೇ ಹರಿದುಬರುತ್ತಿದೆ ಎಂದು ವರದಿಯಾಗಿದೆ (ಪ್ರ.ವಾ., ಜೂನ್ 27). ಸಮ್ಮೇಳನದ ಅಧ್ಯಕ್ಷರನ್ನು ನಿಯಮಾನುಸಾರವಾಗಿ ಆಯ್ಕೆ ಮಾಡುವ ಅಧಿಕಾರ ಕಸಾಪ ಕಾರ್ಯಕಾರಿ ಸಮಿತಿಗೆ ಮಾತ್ರ ಇದೆ. ಇದು ಕಸಾಪದ ಈವರೆಗಿನ ಸ್ವಾಯತ್ತ ಪರಂಪರೆಯೂ ಆಗಿದೆ. ಆದರೆ ಈಗ ಅಲ್ಲಿಯೂ ಅರ್ಜಿಗಳನ್ನು ಹಾಕಿಕೊಳ್ಳುವುದು ಮತ್ತು ಆ ಮೂಲಕ ಸಮ್ಮೇಳನದ ಅಧ್ಯಕ್ಷರ ಆಯ್ಕೆ ನಡೆಯುವುದು ಶೋಭೆ ತರುವ ವಿಷಯ ಅಲ್ಲ. ಈವರೆಗೆ ನಡೆದುಬಂದಂತೆ ಕಸಾಪ ಕಾರ್ಯಕಾರಿ ಸಮಿತಿ ತನಗಿರುವ ಅಧಿಕಾರದಿಂದ ಅರ್ಹ ಸಾಹಿತಿಯನ್ನು ಆಯ್ಕೆ ಮಾಡಿ, ಸಮ್ಮೇಳನದ ಅಧ್ಯಕ್ಷತೆಯ ಘನತೆ, ಗೌರವವನ್ನು ಎತ್ತಿ ಹಿಡಿಯಬೇಕು.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಕುಕಲಾಕೃತಿಕಾರರು ವಿಮರ್ಶೆಗೆ ಒಳಗಾಗಲಿ

'ಸಾಹಿತಿಗಳಿಗಿದು ಸ್ವವಿಮರ್ಶೆಯ ಸಮಯ' ಎಂಬ ರಘುನಾಥ ಚ.ಹ. ಅವರ ಲೇಖನ (ಪ್ರ.ವಾ., ಜೂನ್ 25) ಮಾರ್ಮಿಕವಾಗಿದೆ. ಇಂದು, ಅಕಾಡೆಮಿಗಳ ಅಧಿಕಾರದ ಸ್ಥಾನಗಳಿಗೆ ನಾಮಕರಣ ಹೊಂದಲೆಂದು, ಅವು ಕೊಡುವ ಮತ್ತು ಸರ್ಕಾರವು ತಾನೇ ನೇರವಾಗಿ ಕೊಡಮಾಡುವ ಪಂಪ, ಗುಬ್ಬಿ ವೀರಣ್ಣದಂತಹ ಪ್ರಶಸ್ತಿಗಳನ್ನು ಪಡೆಯಲೆಂದು, ವಿಶ್ವವಿದ್ಯಾಲಯಗಳ ಕುಲಪತಿಗಳಾಗಲೆಂದು ಹಾಗೂ ಲಕ್ಷಗಟ್ಟಲೆ, ಕೋಟಿಗಟ್ಟಲೆ ವೆಚ್ಚವಾಗುವ ಸರ್ಕಾರಿ ಪ್ರಾಜೆಕ್ಟುಗಳನ್ನು ಪಡೆಯಲೆಂದು ಆಸೆ-ದುರಾಸೆಪಟ್ಟು ಲಾಬಿ ಮಾಡುವ ಸಾಹಿತಿ, ಕಲಾವಿದರು (ಅಥವಾ ಹಾಗೆಂದು ತಮ್ಮನ್ನು ತಾವು ಕರೆದು, ಕರೆಸಿಕೊಳ್ಳುವವರು) ಹಲವರಿದ್ದಾರೆ. ಅಂಥವರು ರಾಜಕಾರಣಿಗಳ ಮರ್ಜಿಗೆ ಒಳಗಾಗುವುದು ತಮ್ಮ ಆ ಅಗ್ಗದ ಆಸೆಯಿಂದಾಗಿಯೇ.

ಟಿ.ವಿ. ವಾಹಿನಿಗಳು ಹಾಗೂ ಪತ್ರಿಕೆಗಳ ಪುಟಗಳಲ್ಲಿ ವಿಜೃಂಭಿಸುವುದು ಬಹುತೇಕ ಅವರ ಸುದ್ದಿಯೇ. ಅದು ನಿಲ್ಲಬೇಕು. ಕಲೆ, ಕಲೆಗಾರಿಕೆಯ ಹೆಸರಿನಲ್ಲಿ ಮತ್ತು ಕೆಲವೊಮ್ಮೆ, ಸಾಮಾಜಿಕ ನ್ಯಾಯ ಸಲ್ಲಿಸುವುದರ ಹೆಸರಿನಲ್ಲಿ ನಡೆಯುವ ಆ ಥರದವರ ದಂಧೆಯಿಂದ ಸೃಷ್ಟಿಯಾಗುವ ಕುಕಲಾಕೃತಿಗಳು ಹಾಗೂ ಅವುಗಳ ಕೃತಿಕಾರರು ಔಚಿತ್ಯಪೂರ್ಣವಾದ ಟೀಕೆ-ವಿಮರ್ಶೆಗೆ ಒಳಗಾಗಬೇಕು. ಇಲ್ಲವಾದರೆ ಈ ರೋಗಕ್ಕೆ ಮದ್ದಿರುವುದಿಲ್ಲ. ಜೊತೆಗೆ, ತಮಗೆ ಒಪ್ಪಿಗೆಯಾಗದ್ದನ್ನು, ಒಪ್ಪಿಗೆ ಆಗದವರನ್ನು ಕುರಿತು ಫೇಸ್‌ಬುಕ್‌ನಂತಹ ಸಾಮಾಜಿಕ ಮಾಧ್ಯಮಗಳಲ್ಲಿ ಘನ-ಸಂಯಮವಾದ ವಿಮರ್ಶೆಗೆ ಬದಲು ಬೈಗುಳದ ನುಡಿಗಟ್ಟಿನ ಷರಾ ಬರೆಯುವುದು, ದುಬಾರಿ ಮಾತಿನ ವಿಡಂಬನೆ, ಕಟಕಿ ಆಡುವುದು ಕೂಡ ಈ ರೋಗದ ಲಕ್ಷಣ ಮತ್ತು ಪರಿಣಾಮಗಳಾಗಿವೆ.

ರಘುನಂದನ, ಬೆಂಗಳೂರು

ಹಂಸಕ್ಷೀರ ನ್ಯಾಯ!

50 ಮಿ.ಲೀ. ಹೆಚ್ಚುವರಿ
ಹಾಲು ಪಡೆದು
₹ 2 ಅಧಿಕವಾಗಿ
ಪಾವತಿಸುವುದರಿಂದ
ಗ್ರಾಹಕರಿಗೆ
ಲಾಭವೋ ನಷ್ಟವೋ
ಎಂದು ನೀಡುವ
ನ್ಯಾಯ ತೀರ್ಮಾನವೇ
ಹಂಸಕ್ಷೀರ ನ್ಯಾಯ!

ಪಿ.ಜೆ.ರಾಘವೇಂದ್ರ, ಮೈಸೂರು

ಅರಣ್ಯ ನಾಶದ ಯೋಜನೆ: ನಿರ್ಧಾರ ಪುನರ್‌ಪರಿಶೀಲಿಸಿ

ಸಂಡೂರು ತಾಲ್ಲೂಕಿನ ಸ್ವಾಮಿಮಲೈ ಪ್ರದೇಶದ ದೇವದಾರಿ ಶ್ರೇಣಿಯಲ್ಲಿ ಕುದುರೆಮುಖ ಕಬ್ಬಿಣ ಅದಿರು ಕಂಪನಿಯ ಗಣಿಗಾರಿಕೆಗೆ ಅರಣ್ಯ ನೀಡದಂತೆ ಅರಣ್ಯ ಸಚಿವರಾಗಿ ಈಶ್ವರ ಖಂಡ್ರೆ ಅವರು ಅಧಿಕಾರಿಗಳಿಗೆ ಆದೇಶ ನೀಡಿದ್ದು ಕೇಳಿ ನಮಗೆಲ್ಲ ಬಹಳ ಸಂತಸವಾಗಿದೆ. ಎಚ್.ಡಿ.ಕುಮಾರಸ್ವಾಮಿ ಅವರು ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವರಾಗಿ ಪ್ರಮಾಣವಚನ ಸ್ವೀಕರಿಸುತ್ತಲೇ ದೇವದಾರಿ ಅರಣ್ಯಕ್ಕೆ ಕೊಡಲಿ ಹಾಕಲು ಸಹಿ ಹಾಕಿಯೇ ಹೊರಬಂದಿದ್ದಾರೆ. ಈಗ ಅದನ್ನು ಸಮರ್ಥಿಸಿಕೊಳ್ಳಲು ಹೇಳಿಕೆಗಳನ್ನು ನೀಡುತ್ತಿದ್ದಾರಾದರೂ ಸಹಿ ಹಾಕಲು ಅವರಿಗೆ ಇದ್ದ ಒತ್ತಡವನ್ನು ನಾವು ಊಹಿಸಬಲ್ಲೆವು. ರಾಜಕೀಯ ಮುಖಂಡರಿಗಾಗಲೀ ಉನ್ನತ ಅಧಿಕಾರ ಸ್ಥಾನದಲ್ಲಿ ಇರುವವರಿಗಾಗಲೀ ಅಥವಾ ಗಣಿಗಾರಿಕೆಯಂಥ ಉದ್ದಿಮೆಯಿಂದ ಬರುವ ಲಾಭವನ್ನೇ ನೋಡುವ ಕಂಪನಿಯವರಿಗಾಗಲೀ ಈಗ ಇಡೀ ಭೂಮಿ ಎದುರಿಸುತ್ತಿರುವ ಹವಾಮಾನ ವೈಪರೀತ್ಯದ ಸಂಕಟವು ಇನ್ನೂ ಮನದಟ್ಟಾಗಿಲ್ಲ ಎನ್ನುವುದು ಅತಿ ವಿಷಾದಕರ ವಿಚಾರ. ಒಂದು ಕಡೆ, ಗಣಿಗಾರಿಕೆ ಆಗಿರುವಲ್ಲಿ ಗಿಡಗಳನ್ನು ನೆಡಲು, 'ಕಾಡು ಬೆಳೆಸಲು' ಕೋಟ್ಯಂತರ ರೂಪಾಯಿ ಎತ್ತಿಡುವುದು, ಇನ್ನೊಂದು ಕಡೆ, ಅಲ್ಲೇ ಪಕ್ಕದಲ್ಲಿರುವ ದಟ್ಟ ಕಾಡಿನ ಲಕ್ಷಾಂತರ ಗಿಡಮರಗಳನ್ನು ಉರುಳಿಸಿ ಬೋಳಾಗಿಸುವುದು... ಇದೆಲ್ಲಿಯ ನ್ಯಾಯ? ಹಣ ಹಾಕಿ ಬೆಳೆಸಿರುವ ಒಂದಾದರೂ ಕಾಡು ಇದೆಯೇ?

ಗಣಿಗಾರಿಕೆಗೆ ಅರಣ್ಯ ನೀಡದಿರುವುದರ ಸಂತಸವನ್ನು ಹಂಚಿಕೊಳ್ಳಲು ತಯಾರಾಗುತ್ತಿದ್ದಂತೆಯೇ ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳ 20 ಸಾವಿರ ಹೆಕ್ಟೇರ್ ಅರಣ್ಯ ಪ್ರದೇಶವನ್ನು ಎಂಪಿಎಂ ಕಂಪನಿಗೆ ಮತ್ತೆ ಗುತ್ತಿಗೆಗೆ ಕೊಡುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುವ ಸಚಿವರ ನಡೆ ಆತಂಕವನ್ನು ಉಂಟುಮಾಡುತ್ತಿದೆ. ಸದಾ ಹಸಿರು ಕಾಡುಗಳನ್ನು ಕಡಿದು ಮತ್ತೆ ಅಕೇಶಿಯಾ, ನೀಲಗಿರಿ ನೆಡುವ ಯೋಚನೆಯೇ? ಸ್ಥಳೀಯವಲ್ಲದ ಈ ಎರಡೂ ಮರಗಳು ನೆಲದೊಳಗಿನ ಎಲ್ಲ ಸತ್ವವನ್ನೂ ಹೀರಿಕೊಂಡು ಸುತ್ತೆಲ್ಲ ಬೇರೇನೂ ಬೆಳೆಯದಂತೆ ಮಾಡುತ್ತವೆ ಎನ್ನುವುದು ಸರ್ವವಿದಿತ. ಆ ಕಾರಣಕ್ಕಾಗಿಯೇ ನೀಲಗಿರಿಯ ನಿಷೇಧವಾಗಿದ್ದು. ಈ ನಿಷೇಧವನ್ನು ತೆಗೆದುದಾದರೂ ಯಾತಕ್ಕೆ? ಹವಾಮಾನ ವೈಪರೀತ್ಯದಿಂದ ಇಡೀ ಭೂಮಿಯೇ ಸುಟ್ಟು ಹೋಗುತ್ತಿರುವಾಗ, ಇರುವ ಹಸಿರು ಮತ್ತು ವೈವಿಧ್ಯವನ್ನು ಉಳಿಸಿಕೊಳ್ಳುವತ್ತ ನಮ್ಮ ನಡೆ ಇರಬೇಕಲ್ಲವೇ? ಈ ಕಾಡುಗಳ ನಾಶ ಮತ್ತು ಏಕಜಾತಿಯ ಗಿಡಗಳನ್ನು ಬೆಳೆಸುವ ವಿಚಾರವನ್ನು ಸಚಿವರು ತಕ್ಷಣವೇ ಕೈಬಿಡಲಿ. ಸಂಡೂರಿಗೆ ಸಂಬಂಧಿಸಿದ ಆದೇಶ ಹಿಂತೆಗೆದುಕೊಳ್ಳುವಂತೆ ಸಚಿವರಿಗೆ ಮೇಲಿಂದ, ಅತ್ತ, ಇತ್ತಲಿಂದ ಒತ್ತಡಗಳು ಬರಬಹುದು. ಆದರೆ ಸಚಿವರು ಈ ನಿರ್ಧಾರಕ್ಕೆ ಅಚಲರಾಗಿ ನಿಲ್ಲಬೇಕೆಂಬುದು ನಮ್ಮೆಲ್ಲರ ಆಗ್ರಹದ ಮನವಿ. ಹಾಗೆಯೇ ಎಂಪಿಎಂ ವಿಚಾರದಲ್ಲಿ ಸಚಿವರು ಪುನರ್‌ವಿಚಾರ ಮಾಡಬೇಕೆಂದು ಒತ್ತಾಯಿಸುತ್ತೇವೆ.

ಶಾರದಾ ಗೋಪಾಲ, ಡಾ. ಪ್ರಕಾಶ ಭಟ್, ಸುನಂದಾ ಭಟ್, ಶ್ರೀನಿವಾಸ ಕುಲಕರ್ಣಿ, ಶಿವಕುಮಾರ ಪಾಟೀಲ್, ಕವಿತಾ, ದಾಕ್ಷಾಯಿನಿ ಕುಂಬಾರ, ನೇತ್ರಾವತಿ, ಡಾ. ಪೂರ್ಣಿಮಾ ದೌರೋಜಿ

'ಪರಿಸರಕ್ಕಾಗಿ ನಾವು' ಧಾರವಾಡ ಜಿಲ್ಲಾ ಘಟಕದ ಕಾರ್ಯಕರ್ತರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಲೋಕಸಭೆ: ಪ್ರಮಾಣ ವಚನ ಸ್ವೀಕಾರ ಸಂದರ್ಭದಲ್ಲೇ ಸಮಸ್ಯೆಗಳ ಪ್ರಸ್ತಾಪ

ವಿಪಕ್ಷ ಸಂಸದರ ಹೊಸ ಕಾರ್ಯತಂತ್ರ

ಲೋಕಸಭೆಯಲ್ಲಿ ಈ ಬಾರಿ ನೂತನ ಸಂಸದರ ಪ್ರಮಾಣ ವಚನ ಸ್ವೀಕಾರ ಪ್ರಕ್ರಿಯೆಯು ಹಲವು ಹೊಸ ಸಂಗತಿಗಳಿಗೆ ಸಾಕ್ಷಿಯಾಯಿತು. 'ಇಂಡಿಯಾ' ಮೈತ್ರಿಕೂಟದ ಸಂಸದರು ಪ್ರಮಾಣ ವಚನ ಸ್ವೀಕಾರದ ಸಂದರ್ಭದಲ್ಲಿ ಕೆಲವು ಘೋಷಣೆಗಳನ್ನು ಕೂಗಿದ್ದಾರೆ. ಈ ಪಕ್ಷಗಳು ರಾಜ್ಯಮಟ್ಟದ ವಿಷಯಗಳನ್ನು, ರಾಷ್ಟ್ರೀಯ ಮಟ್ಟದ ಕೆಲವು ಸಮಸ್ಯೆಗಳನ್ನು ಈ ಬಾರಿಯ ಲೋಕಸಭಾ ಚುನಾವಣೆಯ ವಿಷಯಗಳನ್ನಾಗಿಸಿದ್ದವು. ಅವುಗಳ ಆಧಾರದಲ್ಲೇ ಮತ ಕೇಳಿದ್ದವು. ಈಗ ಪ್ರಮಾಣ ವಚನ ಸ್ವೀಕಾರದ ಸಂದರ್ಭದಲ್ಲಿಯೂ ರಾಜ್ಯಮಟ್ಟದ, ರಾಷ್ಟ್ರಮಟ್ಟದ ಸಮಸ್ಯೆಗಳನ್ನು ಪ್ರಸ್ತಾಪಿಸಿ ಸದನಕ್ಕೆ ಧುಮುಕಿದ್ದಾರೆ

• ಜಯಸಿಂಹ ಆರ್., ಸುಕೃತ ಎಸ್.

ಲೋಕಸಭೆ ಇರಲಿ, ರಾಜ್ಯಸಭೆ ಇರಲಿ ಅಥವಾ ರಾಜ್ಯ ವಿಧಾನಸಭೆ ಇರಲಿ ಚುನಾಯಿತ ಜನಪ್ರತಿನಿಧಿಗಳು ಪ್ರಮಾಣ ವಚನ ಸ್ವೀಕರಿಸುತ್ತಾರೆ. ಸಿದ್ಧ ಮಾದರಿಯ ಪ್ರಮಾಣ ವಚನವನ್ನು ಸ್ವೀಕರಿಸುವುದು ವಾಡಿಕೆ. ಪ್ರಮಾಣ ವಚನದ ಸಂದರ್ಭದಲ್ಲಿ ಇತರ ಯಾವುದೇ ಮಾತು, ಘೋಷಣೆ ಮಾಡುವುದಿಲ್ಲ. ಮಾಡಿದರೂ ಅದನ್ನು ಕಡತದಿಂದ ತೆಗೆದು ಹಾಕಲಾಗುತ್ತದೆ. ಆದರೆ ಈ ಬಾರಿ 'ಇಂಡಿಯಾ' ಮೈತ್ರಿಕೂಟದ ಸಂಸದರಲ್ಲಿ ಹಲವು ಮಂದಿ ಪ್ರಮಾಣ ವಚನ ಸ್ವೀಕಾರದ ಸಂದರ್ಭದಲ್ಲಿ ಘೋಷಣೆ ಕೂಗಿದರು. 'ಇಂಡಿಯಾ' ಮೈತ್ರಿಕೂಟದ ಸಂಸದರು ತಾವು ಪ್ರಮಾಣ ವಚನ ಸ್ವೀಕರಿಸುವ ಸಂದರ್ಭದಲ್ಲಿ ಸಂವಿಧಾನದ ಪ್ರತಿ, ಸಂವಿಧಾನದ ಕಿರು ಹೊತ್ತಗೆ ಕೈಯಲ್ಲಿ ಹಿಡಿದಿದ್ದರು, ಮತ್ತು 'ಸಂವಿಧಾನಕ್ಕೆ ಜಯವಾಗಲಿ' ಎಂದು ಘೋಷಣೆ ಕೂಗಿದರು.

ವಿರೋಧ ಪಕ್ಷಗಳ 'ಇಂಡಿಯಾ' ಮೈತ್ರಿಕೂಟದ ಸಂಸದರು ಪ್ರಮಾಣ ವಚನ ಸ್ವೀಕರಿಸುವ ಸಂದರ್ಭದಲ್ಲಿ ಘೋಷಣೆ ಕೂಗಿದ್ದಕ್ಕೆ ಆಡಳಿತಾರೂಢ ಎನ್‌ಡಿಎಯ ಸಂಸದರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ಇದು ನಿಷಿದ್ಧ, ಇಂತಹ ಘೋಷಣೆಗೆ ಅವಕಾಶ ನೀಡಬಾರದು ಎಂದು ಆಗ್ರಹಿಸಿದರು. ಸ್ಪೀಕರ್ ಸ್ಥಾನದಲ್ಲಿ ಇರುವವರೂ, 'ನಿಮ್ಮ ಕೈಯಲ್ಲಿರುವ ಪ್ರತಿಯಲ್ಲಿ ಇರುವಷ್ಟನ್ನೇ ಓದಿ' ಎಂದು ವಿರೋಧ ಪಕ್ಷಗಳ ಸಂಸದರಿಗೆ ಸೂಚಿಸಿದರು. ಆದರೆ ಅದನ್ನು ಧಿಕ್ಕರಿಸಿದ ವಿರೋಧ ಪಕ್ಷಗಳ ಸಂಸದರು ಘೋಷಣೆಗಳನ್ನು ಕೂಗಿಯೇ ಪ್ರಮಾಣ ವಚನ ಸ್ವೀಕಾರ ಪ್ರಕ್ರಿಯೆಯನ್ನು ಪೂರೈಸಿದರು. ಇದಕ್ಕೆ ಬಿಜೆಪಿ ಮತ್ತು ಎನ್‌ಡಿಎಯ ಮಿತ್ರ ಪಕ್ಷಗಳ ಸಂಸದರು ಆಕ್ಷೇಪ ವ್ಯಕ್ತಪಡಿಸಿದಾಗ ಸ್ಪೀಕರ್ ಅವರು, ಇದನ್ನು ಕಡತಕ್ಕೆ ಸೇರಿಸುವುದಿಲ್ಲ ಎಂದು ಹೇಳಿದ್ದರು. ಆದರೆ ಈ ಎಲ್ಲಾ ಘೋಷಣೆಗಳೂ ನೇರ ಪ್ರಸಾರದಲ್ಲಿ ಪ್ರಸಾರವಾದವು. ಸುದ್ದಿಸಂಸ್ಥೆಗಳೂ ಇವನ್ನು ಪ್ರಕಟಿಸಿದವು.


2014 ಮತ್ತು 2019ರಲ್ಲಿ ರಾಷ್ಟ್ರ ಮಟ್ಟದ ವಿಷಯಗಳೇ ಚುನಾವಣೆಯ ಚಾಲಕ ಶಕ್ತಿಗಳಾಗಿದ್ದವು. ಆದರೆ ಈ ಬಾರಿ ಹಾಗಾಗಲಿಲ್ಲ. ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ವಿರೋಧ ಪಕ್ಷಗಳ 'ಇಂಡಿಯಾ' ಮೈತ್ರಿಕೂಟವು ಸಂವಿಧಾನವನ್ನು ಉಳಿಸಿ, ದಲಿತರು, ಆದಿವಾಸಿಗಳು ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಯ ವಿಷಯಗಳನ್ನು ಮುಂದು ಮಾಡಿದ್ದವು. ಮಣಿಪುರದಲ್ಲಿನ ಜನಾಂಗೀಯ ಸಂಘರ್ಷ, ಈಶಾನ್ಯದ ಇತರ ರಾಜ್ಯಗಳಲ್ಲಿನ ಸ್ಥಳೀಯ ಸಮಸ್ಯೆಗಳು, ಪಶ್ಚಿಮ ಬಂಗಾಳದ ಗುಡ್ಡಗಾಡು ಜನರ ಸಮಸ್ಯೆಗಳು, ದಕ್ಷಿಣದಲ್ಲಿ ನೀಟ್ ವಿರೋಧಿ ಹೋರಾಟ, ಉತ್ತರ ಮತ್ತು ವಾಯವ್ಯ ಭಾರತದಲ್ಲಿ ರೈತರ ಸಮಸ್ಯೆಗಳನ್ನು ಮುಂದಿರಿಸಿಕೊಂಡು 'ಇಂಡಿಯಾ' ಮೈತ್ರಿಕೂಟವು ಚುನಾವಣೆಯನ್ನು ಎದುರಿಸಿತ್ತು.


ಆಡಳಿತಾರೂಢ ಎನ್‌ಡಿಎಯನ್ನು ಅಧಿಕಾರದಿಂದ ಕೆಳಗೆ ಇಳಿಸುವಲ್ಲಿ 'ಇಂಡಿಯಾ' ಮೈತ್ರಿಕೂಟ ವಿಫಲವಾಯಿತು. ಆದರೆ ಎನ್‌ಡಿಎಯ ಬಲವನ್ನು ಗಣನೀಯ ಮಟ್ಟಕ್ಕೆ ಕುಸಿಯುವಂತೆ ಮಾಡಿದ್ದಲ್ಲದೇ, ತನ್ನ ಸ್ಥಾನವನ್ನೂ ಉತ್ತಮಪಡಿಸಿಕೊಂಡಿತು. ಆಗ ಚುನಾವಣೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಗಳನ್ನೇ ಈಗ ಸದನದ ಒಳಗೆಯೂ ಪ್ರಸ್ತಾಪಿಸಿದ್ದಾರೆ. ಸ್ಪೀಕರ್ ಅವರಿಗೆ ಅಭಿನಂದನೆ ಸಲ್ಲಿಸುವ ಭಾಷಣದ ಸಂದರ್ಭದಲ್ಲೂ ಅದೇ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ.

'ಜಸ್ಟೀಸ್ ಫಾರ್ ಮಣಿಪುರ'

ವರ್ಷದ ಹಿಂದೆ ಮಣಿಪುರದಲ್ಲಿ ನಡೆದಿದ್ದ ಜನಾಂಗೀಯ ಸಂಘರ್ಷ ಈವರೆಗೂ ಸಂಪೂರ್ಣವಾಗಿ ನಿಯಂತ್ರಣಕ್ಕೆ ಬಂದಿಲ್ಲ. ಬಹುಸಂಖ್ಯಾತ ಮೈತೇಯಿ ಸಮುದಾಯ ಹಾಗೂ ಕುಕಿ ಬುಡಕಟ್ಟು ಸಮುದಾಯಗಳ ನಡುವಿನ ಜನಾಂಗೀಯ ಸಂಘರ್ಷವು ನಿಲ್ಲುವ ಸೂಚನೆಯನ್ನೂ ನೀಡುತ್ತಿಲ್ಲ. ಲೋಕಸಭಾ ಚುನಾವಣೆಯುದ್ದಕ್ಕೂ ಮಣಿಪುರದ ಸಂಘರ್ಷದ ವಿಚಾರಗಳು ಮುನ್ನೆಲೆಯಲ್ಲಿಯೇ ಇದ್ದವು. ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಸರ್ಕಾರವು ಈ ಸಂಘರ್ಷದ ಕುರಿತು ನಡೆದುಕೊಂಡ ರೀತಿಯ ಕುರಿತು ವಿರೋಧ ಪಕ್ಷಗಳು ಗಟ್ಟಿ ದನಿಯಲ್ಲಿ ವಿರೋಧ ವ್ಯಕ್ತಪಡಿಸಿದ್ದವು ಮತ್ತು ಈಗಲೂ ವಿರೋಧಿಸುತ್ತಿವೆ. ಈ ಹಂತದಲ್ಲಿ ದೇಶದಲ್ಲಿ ಲೋಕಸಭಾ ಚುನಾವಣೆಯೂ ನಡೆಯಿತು. ಇನ್ನರ್ ಮಣಿಪುರ ಲೋಕಸಭಾ ಹಾಗೂ ಔಟರ್ ಮಣಿಪುರ ಲೋಕಸಭಾ ಕ್ಷೇತ್ರಗಳೆರಡರಲ್ಲಿಯೂ ಕಾಂಗ್ರೆಸ್ ಜಯಸಾಧಿಸಿದೆ.

ಮಣಿಪುರದ ಇಬ್ಬರೂ ಸಂಸದರು ಪ್ರಮಾಣವಚನ ಸ್ವೀಕರಿಸಿದ ಸಂದರ್ಭದಲ್ಲಿಯೂ 'ಜಸ್ಟೀಸ್ ಫಾರ್ ಮಣಿಪುರ' ಘೋಷಣೆಯು ಸಂಸತ್ತಿನಲ್ಲಿ ಮೊಳಗಿದೆ. ಇನ್ನರ್ ಮಣಿಪುರ ಕ್ಷೇತ್ರದ ಸಂಸದ ಅಂಗೋಮ್ಚ ಬಿಮೋಲ್ ಅಕೋಯಿಜಮ್ ಅವರ ಹೆಸರು ಕೂಗುತ್ತಿದ್ದಂತೆಯೇ 'ಇಂಡಿಯಾ' ಮೈತ್ರಿಕೂಟದ ಸಂಸದರು 'ಮಣಿಪುರ, ಮಣಿಪುರ' ಹಾಗೂ 'ಜಸ್ಟೀಸ್ ಫಾರ್ ಮಣಿಪುರ' ಎಂದು ಕೂಗಿದ್ದಾರೆ. ಮೈತೇಯಿ ಭಾಷೆಯಲ್ಲಿ ಪ್ರಮಾಣ ಸ್ವೀಕರಿಸಿದರು. ಈ ಬಳಿಕ, 'ಜೈ ಹಿಂದ್, ಮಾತೃಭೂಮಿಗೆ ಜಯವಾಗಲಿ, ಮಣಿಪುರಕ್ಕೆ ಜಯವಾಗಲಿ' ಎಂದರು. ಈ ಬಳಿಕ, ಔಟರ್ ಮಣಿಪುರ ಕ್ಷೇತ್ರದ ಸಂಸದ ಆಲ್ಫ್ರೆಡ್ ಕಂಗಮ್ ಆರ್ಥರ್ ಅವರು ಇಂಗ್ಲಿಷ್‌ನಲ್ಲಿ ಪ್ರಮಾಣವಚನ ಸ್ವೀಕರಿಸಿದರು. ಇವರು ಪ್ರಮಾಣವಚನ ಸ್ವೀಕರಿಸುವ ವೇಳೆಯೂ 'ಇಂಡಿಯಾ' ಸಂಸದರು ಘೋಷಣೆಗಳನ್ನು ಕೂಗಿದರು. ಸಾಂಪ್ರದಾಯಿಕ ಶಾಲನ್ನೂ ಇವರು ಹೊದ್ದಿದ್ದರು. ಕೊನೆಯಲ್ಲಿ, 'ಮಣಿಪುರಕ್ಕೆ ನ್ಯಾಯ ದೊರಕಿಸಿಕೊಡಿ, ದೇಶವನ್ನು ರಕ್ಷಿಸಿ' ಎಂದು ಹಿಂದಿಯಲ್ಲಿ ಆರ್ಥರ್ ಘೋಷಣೆ ಕೂಗಿದರು. ಮೇಘಾಲಯದ ತುರಾ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಸಂಸದ ಎಸ್. ಸಂಗ್ಮಾ ಅವರು ಸಂವಿಧಾನದ ಕಿರು ಹೊತ್ತಗೆಯನ್ನು ಹಿಡಿದು ಪ್ರಮಾನವಚನ ಸ್ವೀಕರಿಸಿದರು. ಈ ಬಳಿಕ ಕೊನೆಯಲ್ಲಿ ಘೋಷಣೆ ಕೂಗಿದ ಸಂಗ್ಮಾ ಅವರು, 'ಸಂವಿಧಾನವನ್ನು ರಕ್ಷಿಸಿ' ಎಂದರು.


ಇನ್ನರ್ ಮಣಿಪುರ ಕ್ಷೇತ್ರದ ಸಂಸದ ಅಂಗೋಮ್ಚ ಬಿಮೋಲ್ ಅಕೋಯಿಜಮ್



ಆಧಾರ: ಸಂಸದ್ ಟಿ.ವಿ, ಪಿಟಿಐ

ಇಂಡಿಯಾ ಅದು ಭಾರತ: ಧರಮ್‌ವೀರ್ ಗಾಂಧಿ

ಪಂಜಾಬ್ ಕಾಂಗ್ರೆಸ್ ಸಂಸದ ಧರಮ್‌ವೀರ್ ಗಾಂಧಿ ಅವರು ಪ್ರಮಾಣ ವಚನ ಸ್ವೀಕರಿಸಿದ ನಂತರ, 'ಇಂಡಿಯಾ ಎಂದರೆ ಭಾರತವೇ' (INDIA that is BHARATH) ಎಂದು ಘೋಷಣೆ ಕೂಗಿದರು. ಜತೆಗೆ ಜೈ ಸಂವಿಧಾನ ಎಂದೂ ಘೋಷಣೆ ಕೂಗಿದರು.

2023ರಲ್ಲಿ ಭಾರತದಲ್ಲಿ ನಡೆದಿದ್ದ ಜಿ–20 ಶೃಂಗಸಭೆಯ ಸಂದರ್ಭದಲ್ಲಿ, ಕೇಂದ್ರ ಸರ್ಕಾರವು 'ಇಂಡಿಯಾ' ಎಂದು ಆಂಗ್ಲಭಾಷೆಯಲ್ಲಿ ಬರೆಯುವೆಡೆ 'ಭಾರತ್' ಎಂದು ಆಂಗ್ಲಭಾಷೆಯಲ್ಲಿ ಬರೆದಿತ್ತು. ಇದಕ್ಕೆ ವಿರೋಧ ಪಕ್ಷಗಳಿಂದ ವ್ಯಾಪಕ ಆಕ್ಷೇಪ ವ್ಯಕ್ತವಾಗಿತ್ತು. ಸಂವಿಧಾನದಲ್ಲಿ ದೇಶದ ಹೆಸರನ್ನು, 'ಇಂಡಿಯಾ ಎಂದರೆ ಭಾರತ' ಎಂದು ಇದೆ. ಇಂಡಿಯಾ ಎಂಬುದನ್ನು ಕೈಬಿಡುವ ಮೂಲಕ ಸರ್ಕಾರವು ಸಂವಿಧಾನಕ್ಕೆ ಅಪಮಾನ ಮಾಡಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿದ್ದವು. ಈಗ ಧರಮ್‌ವೀರ್ ಗಾಂಧಿ ಅವರು ಪ್ರಮಾಣ ವಚನ ಸ್ವೀಕಾರದ ಸಂದರ್ಭದಲ್ಲಿ ಆ ಮಾತನ್ನು ಪ್ರಸ್ತಾಪಿಸಿದರು.


ಜೈ ಸಂವಿಧಾನ: ಚಂದ್ರಶೇಖರ್

ಉತ್ತರ ಪ್ರದೇಶದಿಂದ ಸಂಸದರಾಗಿ ಚುನಾಯಿತರಾಗಿರುವ ಆಜಾದ್ ಸಮಾಜ್ ಪಾರ್ಟಿಯ ಚಂದ್ರಶೇಖರ್ ಅವರು ಸಂವಿಧಾನದ ಪ್ರತಿಯನ್ನು ಕೈಯಲ್ಲಿ ಹಿಡಿದುಕೊಂಡೇ ಪ್ರಮಾಣ ವಚನ ಸ್ವೀಕರಿಸಿದರು. ನಂತರ, 'ಜೈ ಭೀಮ್, ಜೈ ಭಾರತ್, ಜೈ ಸಂವಿಧಾನ, ಜೈ ಮಂಡಲ್, ಜೈ ಜೋಹರ್, ಜೈ ಜವಾನ್–ಜೈ ಕಿಸಾನ್' ಎಂದು ಘೋಷಣೆ ಕೂಗಿದರು.



ಅವರು ಘೋಷಣೆ ಕೂಗುತ್ತಿರುವ ಸಂದರ್ಭದಲ್ಲೇ ಆಡಳಿತ ಪಕ್ಷದ ಬೆಂಚುಗಳ ಕಡೆಯಿಂದ ಸಂಸದರೊಬ್ಬರು, 'ಪೂರ್ತಿ ಭಾಷಣ ಈಗಲೇ ಮಾಡಿಬಿಡುತ್ತೀರಾ' ಎಂದು ಕೂಗಿದರು. ಸ್ಪೀಕರ್ ಕುರ್ಚಿಯ ಬಳಿಯಿಂದಲೇ ಇದಕ್ಕೆ ಪ್ರತಿಕ್ರಿಯಿಸಿದ ಚಂದ್ರಶೇಖರ್ ಅವರು, 'ಹೌದು ಸರ್, ಅದಕ್ಕಾಗಿಯೇ ಬಂದಿದ್ದೇನೆ' ಎಂದರು. ಬಳಿಕ, 'ನೀವು ಅದನ್ನು ಕೇಳಲೇಬೇಕಾಗುತ್ತದೆ' ಎಂದೂ ಹೇಳಿದರು.

ಜನರ ನ್ಯಾಯ ಮಹುವಾ ಮೊಯಿತ್ರಾ




ಪಶ್ಚಿಮ ಬಂಗಾಳದ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರು ಪ್ರಮಾಣ ವಚನ ಸ್ವೀಕಾರ ಸಂದರ್ಭದಲ್ಲಿ ಮೊದಲಿಗೇ, 'ಜನರ ನ್ಯಾಯ' ಎಂದು ಘೋಷಣೆ ಕೂಗಿದರು. ಆಗ ವಿರೋಧ ಪಕ್ಷದ ಪಾಳಯದಲ್ಲಿನ ಸಂಸದರು ಅದನ್ನು ಪುನರುಚ್ಚರಿಸಿದರು. ಮಹುವಾ ಅವರು ಪ್ರಮಾಣ ವಚನ ಸ್ವೀಕಾರದ ನಂತರ, 'ಜೈ ಸಂವಿಧಾನ, ಜೈ ಬಾಂಗಾಳ' ಎಂದು ಘೋಷಣೆ ಕೂಗಿದರು. ಹಿಂದಿನ ಲೋಕಸಭೆಯಲ್ಲಿ ಪ್ರಶ್ನೆ ಕೇಳಲು ಹಣ ಪಡೆದ ಪ್ರಕರಣದಲ್ಲಿ ಮಹುವಾ ಅವರನ್ನು ಅಮಾನತು ಮಾಡಲಾಗಿತ್ತು. ಆಗ ಸಂಸತ್ ಭವನದಿಂದ ಹೊರ ನಡೆದಿದ್ದ ಅವರು, 'ನಾನು ಜನರ ಬಳಿ ನ್ಯಾಯ ಪಡೆದು ಇಲ್ಲಿಗೆ ವಾಪಸ್ ಬರುತ್ತೇನೆ' ಎಂದು ಸವಾಲು ಹಾಕಿದ್ದರು. ಪ್ರಮಾಣ ವಚನ ಸ್ವೀಕಾರ ಸಂದರ್ಭದಲ್ಲಿ ಆ ವಿಷಯವನ್ನೇ ಸೂಚ್ಯವಾಗಿ ಪ್ರಸ್ತಾವಿಸಿ, ಮಹುವಾ ಈ ಘೋಷಣೆ ಕೂಗಿದರು ಎನ್ನಲಾಗಿದೆ.

ನೀಟ್ ಮರುಪರೀಕ್ಷೆ ನಡೆಸಿ: ಪಪ್ಪು ಯಾದವ್

ಬಿಹಾರದ ಪಕ್ಷೇತರ ಸಂಸದ ಪಪ್ಪು ಯಾದವ್ ಅವರು ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ನಂತರ ಸಂವಿಧಾನವನ್ನು ಉಳಿಸಿ ಎಂದು ಘೋಷಣೆ ಕೂಗಿದ್ದರು. ಪ್ರಮಾಣ ವಚನ ಸ್ವೀಕಾರ ಸಂದರ್ಭದಲ್ಲಿ ಅವರು '#RENEET' ಎಂಬ ಬರಹ ಇದ್ದ ಟಿ–ಶರ್ಟ್ ಧರಿಸಿದ್ದರು. ಜತಗೆ, 'ನೀಟ್ ಮರುಪರೀಕ್ಷೆ ನಡೆಸಿ ಮತ್ತು ಬಿಹಾರಕ್ಕೆ ವಿಶೇಷ ಸ್ಥಾನವನ್ನು ನೀಡಿ' ಎಂದು ಆಗ್ರಹಿಸಿದರು.

ಆಡಳಿತಾರೂಢ ಬಿಜೆಪಿಯು ಬಿಹಾರಕ್ಕೆ ವಿಶೇಷ ಸ್ಥಾನ ನೀಡುವುದಾಗಿ ಹಲವು ಬಾರಿ ಘೋಷಿಸಿತ್ತು. ಈ ಹಿಂದಿನ ರಾಜ್ಯ ವಿಧಾನಸಭಾ ಚುನಾವಣೆ ಮತ್ತು ಲೋಕಸಭಾ ಚುನಾವಣೆಯಲ್ಲೂ ಇದು ಪ್ರಮುಖ ವಿಷಯವಾಗಿತ್ತು. 'ಇಂಡಿಯಾ' ಮೈತ್ರಿಕೂಟದ ಅಭ್ಯರ್ಥಿಗಳು ತಮ್ಮ ಒಕ್ಕೂಟ ಅಧಿಕಾರಕ್ಕೆ ಬಂದರೆ ಬಿಹಾರಕ್ಕೆ ವಿಶೇಷ ಸ್ಥಾನ ನೀಡುವುದಾಗಿ ಪ್ರಚಾರದಲ್ಲಿ ಹೇಳಿದ್ದರು. 'ಇಂಡಿಯಾ' ಮೈತ್ರಿಕೂಟ ಬೆಂಬಲಿತ ಅಭ್ಯರ್ಥಿಯಾಗಿದ್ದ ಪಪ್ಪು ಯಾದವ್ ಸಹ ಪ್ರಚಾರದಲ್ಲಿ ಈ ಮಾತುಗಳನ್ನು ಹೇಳಿದ್ದರು.

ಲೋಕಸಭಾ ಚುನಾವಣೆಯ ಮತಎಣಿಕೆ ನಡೆದ ದಿನವೇ ನೀಟ್–ಯುಜಿ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿತ್ತು. ಪರೀಕ್ಷೆಯಲ್ಲಿ ಅಕ್ರಮ ನಡೆದಿದೆ ಎಂದು ಹಲವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಕೆಲವು ವಿದ್ಯಾರ್ಥಿಗಳ ಫಲಿತಾಂಶವನ್ನು ತಡೆಹಿಡಿದು, ಮರುಪರೀಕ್ಷೆ ನಡೆಸಲಾಗಿತ್ತು. ಈ ಪ್ರಕರಣದಲ್ಲಿ ಹಲವರ ಬಂಧನವೂ ನಡೆದಿದೆ. ವಿದ್ಯಾರ್ಥಿಗಳು ಮತ್ತು ವಿರೋಧ ಪಕ್ಷಗಳು ನೀಟ್ ಮರುಪರೀಕ್ಷೆಗೆ ಆಗ್ರಹಿಸುತ್ತಿದ್ದಾರೆ. ಇದನ್ನೇ ಪಪ್ಪು ಯಾದವ್ ಲೋಕಸಭೆಯಲ್ಲೂ ಪ್ರಸ್ತಾಪಿಸಿದರು.



ಜೈ ಜವಾನ್–ಜೈ ಕಿಸಾನ್ ಸಂಜನಾ ಜಾಟವ್



ರಾಜಸ್ಥಾನದ ಕಾಂಗ್ರೆಸ್ ಸಂಸದೆ ಸಂಜನಾ ಜಾಟವ್ ಅವರು ಪ್ರಮಾಣ ವಚನ ಸ್ವೀಕರಿಸಿದ ನಂತರ, 'ಜೈ ಜವಾನ್–ಜೈ ಕಿಸಾನ್, ಜೈ ಸಂವಿಧಾನ' ಎಂದು ಘೋಷಣೆ ಕೂಗಿದರು.

ರೈತಾಪಿ ಜಾಟವ್ ಸಮುದಾಯವು ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳ (ಈಗ ರದ್ದಾಗಿರುವ) ವಿರುದ್ಧ ಪ್ರತಿಭಟನೆ ನಡೆಸಿತ್ತು. ಕೃಷಿ ಉತ್ಪನ್ನಗಳ ಕನಿಷ್ಠ ಬೆಂಬಲ ಬೆಲೆಗೆ (ಎಂಎಸ್‌ಪಿ) ಕಾನೂನಿನ ಭದ್ರತೆ ಒದಗಿಸುವಂತೆ ಹೋರಾಟ ನಡೆಸುತ್ತಿರುವ ರೈತ ಸಮುದಾಯಗಳಲ್ಲಿ ಇದೂ ಒಂದು. ಇದೇ ಸಮುದಾಯದ ಸಂಜನಾ ಅವರು ಪ್ರಚಾರದ ವೇಳೆ ತಮ್ಮ ಒಕ್ಕೂಟ ಅಧಿಕಾರಕ್ಕೆ ಬಂದರೆ ಎಂಎಸ್‌ಪಿಗೆ ಕಾನೂನಿನ ಖಾತರಿ ನೀಡುವುದಾಗಿ ಹೇಳಿದ್ದರು.

ದೌರ್ಜನ್ಯ ನಿಲ್ಲಿಸಿ ಶಶಿಕಾಂತ್ ಸೆಂಥಿಲ್

ತಮಿಳುನಾಡಿನ ತಿರುವಳ್ಳೂರು ಕ್ಷೇತ್ರದ ಕಾಂಗ್ರೆಸ್ ಸಂಸದ ಶಶಿಕಾಂತ್ ಸೆಂಥಿಲ್ ಅವರು ಪ್ರಮಾಣವಚನ ಸ್ವೀಕಾರದ ನಂತರ, ಸಂವಿಧಾನ ಉಳಿಸಿ ಎಂದು ಘೋಷಣೆ ಕೂಗಿದ್ದರು. ಬಳಿಕ, 'ಅಲ್ಪಸಂಖ್ಯಾತರು, ದಲಿತರು ಮತ್ತು ಆದಿವಾಸಿಗಳ ಮೇಲೆ ನಡೆಸುತ್ತಿರುವ ಹೇಯ ದೌರ್ಜನ್ಯಗಳನ್ನು ನಿಲ್ಲಿಸಿ' ಎಂದು ಆಗ್ರಹಿಸಿದರು.

ನೀಟ್ ಬೇಡ, ನಿಷೇಧಿಸಿ: ದಯಾನಿಧಿ ಮಾರನ್

ತಮಿಳುನಾಡಿನ ಡಿಎಂಕೆ ಸಂಸದರಾದ ದಯಾನಿಧಿ ಮಾರನ್ ಅವರು ಪ್ರಮಾಣ ವಚನ ಸ್ವೀಕರಿಸಿದ ನಂತರ ನೀಟ್ ಪರೀಕ್ಷೆಯ ವಿಷಯವನ್ನು ಪ್ರಸ್ತಾಪಿಸಿದರು. ಪ್ರಮಾಣ ವಚನ ಸ್ವೀಕಾರದ ನಂತರ, 'ಜೈ ದ್ರಾವಿಡ, ಜೈ ಡಿಎಂಕೆ' ಎಂದು ಘೋಷಣೆ ಕೂಗಿದರು. ನಂತರ 'ನಮಗೆ ನೀಟ್ ಬೇಡ. ನೀಟ್ ಅನ್ನು ನಿಷೇಧಿಸಿ' ಎಂದು ಗಟ್ಟಿಯಾಗಿ ಹೇಳಿದರು.



ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ರಾಷ್ಟ್ರ ಮಟ್ಟದಲ್ಲಿ ನಡೆಯುವ ನೀಟ್ ಪರೀಕ್ಷೆಗೆ ಆರಂಭದ ದಿನದಿಂದಲೂ ತಮಿಳುನಾಡಿನಲ್ಲಿ ವ್ಯಾಪಕ ವಿರೋಧವಿದೆ. ಅಲ್ಲಿನ ಎಲ್ಲಾ ಪಕ್ಷಗಳೂ ನೀಟ್ ಅನ್ನು ವಿರೋಧಿಸಿವೆ. ನೀಟ್ ಪರೀಕ್ಷೆಯನ್ನು ಬರೆದಿದ್ದ ತಮಿಳುನಾಡಿನ ಹಲವು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದರು. 'ನೀಟ್ ಭಾಷಾ ನೀತಿ ಮತ್ತು ಕೇಂದ್ರ ಸರ್ಕಾರದ ಕೋಟಾ ಕಾರಣಕ್ಕೆ ತಮಿಳುನಾಡಿನ ವಿದ್ಯಾರ್ಥಿಗಳಿಗೆ ಸೀಟು ಸಿಗುತ್ತಿಲ್ಲ. ಹೀಗಾಗಿಯೇ ನೀಟ್ ಅನ್ನು ನಿಷೇಧಿಸಬೇಕು' ಎಂಬುದು ಇಲ್ಲಿನ ಪಕ್ಷಗಳ ಆಗ್ರಹವಾಗಿತ್ತು. 'ಇಂಡಿಯಾ' ಮೈತ್ರಿಕೂಟದ ಅಭ್ಯರ್ಥಿಗಳು ಪ್ರಚಾರದ ವೇಳೆ, 'ನಮ್ಮ ಒಕ್ಕೂಟ ಅಧಿಕಾರಕ್ಕೆ ಬಂದರೆ ನೀಟ್ ನಿಷೇಧಿಸುತ್ತೇವೆ' ಎಂದು ಹೇಳಿದ್ದರು. ಈಗ ಪ್ರಮಾಣ ವಚನ ಸ್ವೀಕಾರದ ಸಂದರ್ಭದಲ್ಲಿ ನೀಟ್‌ಗೆ ವಿರೋಧವನ್ನು ವ್ಯಕ್ತಪಡಿಸಿದ್ದಾರೆ.

ಜೈ ಪ್ಯಾಲೆಸ್ಟೀನ್: ಬಿಜೆಪಿ ಸಂಸದರ ದೂರು, ವಿವಾದ

'ಇಂಡಿಯಾ' ಮೈತ್ರಿಕೂಟದ ಸಂಸದರು ಸಂವಿಧಾನದ ಕಿರುಪ್ರತಿಗಳನ್ನು ಹಿಡಿದು ಪ್ರಮಾಣ ವಚನ ಸ್ವೀಕರಿಸುತ್ತಿದ್ದರು. ಪ್ರಮಾಣ ವಚನ ಸ್ವೀಕರಿಸಿದ ಬಳಿಕ, ಹಲವು ಸಂಸದರು ಕೇಂದ್ರ ಸರ್ಕಾರದ ಕ್ರಮಗಳ ಕುರಿತು ವಿರೋಧ ವ್ಯಕ್ತಪಡಿಸಿ ಘೋಷಣೆಗಳನ್ನು ಕೂಗಿದರು. ಈ ಎಲ್ಲದರ ಮಧ್ಯೆ, ಎಐಎಂಐಎಂ ನಾಯಕ, ಹೈದರಾಬಾದ್‌ನ ಸಂಸದ ಅಸಾದುದ್ದೀನ್ ಒವೈಸಿ ಅವರು ಯುದ್ಧಪೀಡಿತ ಪ್ಯಾಲೆಸ್ಟೀನ್ ಪರ ಘೋಷಣೆಯನ್ನು ಕೂಗಿದ್ದು, ಆಡಳಿತ ಪಕ್ಷದ ವಿರೋಧಕ್ಕೆ, ನಂತರ ವಿವಾದಕ್ಕೆ ಕಾರಣವಾಯಿತು.

ಪ್ರಮಾಣ ವಚನ ಸ್ವೀಕರಿಸಿದ ಬಳಿಕ, 'ಜೈ ಭೀಮ್, ಜೈ ತೆಲಂಗಾಣ, ಜೈ ಪಾಲೆಸ್ಟೀನ್' ಎಂದು ಒವೈಸಿ ಅವರು ಘೋಷಣೆ ಕೂಗಿದರು. ಇದು ಬಿಜೆಪಿ ಸದಸ್ಯರ ಸಿಟ್ಟಿಗೆ ಕಾರಣವಾಯಿತು. ಒವೈಸಿ ಅವರನ್ನು ಸಂಸದ ಸ್ಥಾನದಿಂದ ಅಮಾನತು ಮಾಡಬೇಕು ಎಂದು ಹಲವು ಹಿಂದೂಪರ ಸಂಘಟನೆಗಳೂ ಒತ್ತಾಯಿಸಿವೆ. ಜೊತೆಗೆ, 'ಒವೈಸಿ ವಿರುದ್ಧ ಕೆಲವು ಸಂಸದರು ನನ್ನ ಬಳಿ ದೂರು ನೀಡಿದ್ದಾರೆ' ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಪ್ರತಿಕ್ರಿಯಿಸಿದ್ದಾರೆ.

'ಪ್ಯಾಲೆಸ್ಟೀನ್ ಕುರಿತು ನಮಗೆ ವೈರತ್ವವಿಲ್ಲ. ಇದು ವಿಷಯವೇ ಅಲ್ಲ. ಆದರೆ, ಪ್ರಮಾಣ ವಚನ ಸ್ವೀಕರಿಸುವ ವೇಳೆ ಬೇರೊಂದು ದೇಶದ ಕುರಿತು ಘೋಷಣೆ ಕೂಗುವುದು ಉಚಿತವೇ? ಈ ಬಗ್ಗೆ ಇರುವ ನಿಯಮಗಳೇನು ಎನ್ನುವ ಬಗ್ಗೆ ತಿಳಿದುಕೊಳ್ಳಬೇಕಿದೆ' ಎಂದು ಸಚಿವ ರಿಜಿಜು ಹೇಳಿದರು. ಭಾರತವು ಈಗಲೂ ಅಧಿಕೃತವಾಗಿ ಪ್ಯಾಲೆಸ್ಟೀನ್ ದೇಶದ ಪರವಾಗಿಯೇ ಇದೆ. ಇದನ್ನು ಕೇಂದ್ರ ವಿದೇಶಾಂಗ ಸಚಿವಾಲಯವೂ ಹಲವು ಬಾರಿ ಸ್ಪಷ್ಟಪಡಿಸಿದೆ.

ತಮ್ಮ ಹೇಳಿಕೆ ಬಗ್ಗೆ ಸಮರ್ಥಿಸಿಕೊಂಡಿರುವ ಒವೈಸಿ, 'ಅವರು ಹಿಂಸೆಗೆ ತಳ್ಳಲ್ಪಟ್ಟ ಜನರು. ಪ್ಯಾಲೆಸ್ಟೀನ್ ಪರವಾಗಿ ಮಹಾತ್ಮ ಗಾಂಧಿ ಅವರು ಏನು ಹೇಳಿದ್ದಾರೆ ಎಂದು ಓದಿ ತಿಳಿದುಕೊಳ್ಳಿ. ಬೇರೆಲ್ಲಾ ಸಂಸದರು ವಿವಿಧ ವಿಚಾರಗಳ ಕುರಿತು ಘೋಷಣೆ ಕೂಗಿದರು. ನಾನು ಕೂಗಿದ್ದು ಮಾತ್ರವೇ ಯಾಕೆ ತಪ್ಪು? ಹೀಗೆ ಘೋಷಣೆ ಕೂಗಬಾರದು ಎಂದು ಸಂವಿಧಾನದಲ್ಲಿ ಇದೆಯೇ?' ಎಂದರು.


ಗುಂಡಣ್ಣ



ಮೇಷ್ಟ್ರನ್ನು ಕೇಳೋದೇ ಒಳ್ಳೆಯದು ಅಂತ...



ನುಡಿ ಬೆಳಗು


ಪ್ರೊ ಎಂ. ಕೃಷ್ಣೇಗೌಡ

ಒಂದು ಸಾವಿರದ ಒಂಬೈನೂರ ಅರವತ್ತೈದನೇ ಇಸವಿಯ ಸುಮಾರಿನಲ್ಲಿ ನಡೆದ ಒಂದು ಕತೆ. ಮಂಡ್ಯ ಜಿಲ್ಲೆಯ ಒಂದು ಹಳ್ಳಿ ಅದು. ಅಲ್ಲೊಂದು ಸರ್ಕಾರಿ ಪ್ರಾಥಮಿಕ ಪಾಠಶಾಲೆ. ಶಾಲೆಯೊಳಗೆ ಪಾಠ ನಡೀತಾ ಇತ್ತು. ಇನ್ನೇನು ಮಕ್ಕಳನ್ನು ಮಧ್ಯಾಹ್ನದ ಊಟಕ್ಕೆ ಬಿಡುವ ಹೊತ್ತು.

ಆಗ ಆ ಶಾಲೆಯ ಮುಂದೆ ಒಂದು ಹಸಿರು ಬಣ್ಣದ ಅಂಬಾಸಿಡರ್ ಕಾರು ಬಂದು ನಿಂತಿತು. ಅದರೊಳಗಿಂದ ಮುಚ್ಚುಕಾಲರಿನ ಕೋಟು, ಪ್ಯಾಂಟು, ತಲೆಗೆ ಪೇಟ ತೊಟ್ಟಿದ್ದ ತೇಜಸ್ವಿ ವ್ಯಕ್ತಿಯೊಬ್ಬರು ಕೆಳಗಿಳಿದರು. ಆಗೆಲ್ಲಾ ಹಳ್ಳಿಗಳಿಗೆ ಕಾರು ಬರುವುದೇ ಅಪರೂಪ. ಕಾರನ್ನು ನೋಡಿ ಹಳ್ಳಿಯ ನಾಲ್ಕಾರು ಜನ ಹತ್ತಿರಕ್ಕೆ ಬಂದರು. ಶಾಲೆಯೊಳಗೆ ಪಾಠ ಮಾಡುತ್ತಿದ್ದ ಮೇಷ್ಟರುಗಳೂ ತೀರಾ ಗಾಬರಿಯಾದರು- ಯಾರಾದರೂ ಮೇಲಧಿಕಾರಿಗಳು ತನಿಖೆಗೆ ಬಂದಿರಬಹುದಾ ಅಂತ. ಆದರೂ ಪಾಠ ಬಿಟ್ಟು ಹೊರಗೆ ಹೋಗಲಿಲ್ಲ.

ಇತ್ತ ಆ ದೊಡ್ಡ ಮನುಷ್ಯರು ಆ ಜನರನ್ನು, 'ಈ ಶಾಲೆಯಲ್ಲಿ ತುಂಬಾ ಒಳ್ಳೆಯ ಮೇಷ್ಟ್ರು ಅಂದ್ರೆ ಯಾರು?' ಅಂತ ಕೇಳಿದರು. ಜನರು ಒಕ್ಕರಲಿನಿಂದ 'ವೀರಭದ್ರಪ್ಪ ಮೇಷ್ಟ್ರು ಸ್ವಾಮಿ' ಅಂದರು. 'ಆಗಲಿ' ಅಂತ ಆ ಮಹನೀಯರು ಶಾಲೆಯ ಬೆಲ್ಲು ಹೊಡೆಯುವವರೆಗೆ ಹಳ್ಳಿಯವರ ಜೊತೆ ಮಳೆ ಬೆಳೆ ಕಷ್ಟ ಸುಖ ಕೇಳುತ್ತಾ ನಿಂತಿದ್ದರು.

ಬೆಲ್ ಹೊಡೆಯಿತು. ಮಕ್ಕಳು ಹೋ ಅಂತ ಹೊರಗೆ ಓಡಿದರು. ಆಗ ಆ ದೊಡ್ಡ ಮನುಷ್ಯರು ಶಾಲೆಯ ಕಡೆಗೆ ಹೋದರು. ಅವರು ಶಾಲೆಗೆ ಬರುತ್ತಿದ್ದುದನ್ನು ನೋಡಿ ಮೇಷ್ಟರುಗಳು ಮತ್ತಷ್ಟು ಗಾಬರಿಯಾದರು. ಬಂದ ಮಹನೀಯರನ್ನು ಗುರುತಿಸಿದವರು ವೀರಭದ್ರಪ್ಪ ಮೇಷ್ಟ್ರು ಮಾತ್ರವೇ. ಬಂದಿದ್ದವರು ಯಾರೋ ಅಲ್ಲ,

ಮೈಸೂರು ರಾಜ್ಯದ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರು.

ಎಲ್ಲ ಮೇಷ್ಟರೂ ಅವರಿಗೆ ಶಿರಬಾಗಿ ನಮಸ್ಕರಿಸಿದರು. ಹನುಮಂತಯ್ಯನವರು 'ಇಲ್ಲಿ ವೀರಭದ್ರಪ್ಪ ಮೇಷ್ಟ್ರು ಯಾರು?' ಅಂದರು. ಆಗ ವೀರಭದ್ರಪ್ಪನವರು ಬೆವರುತ್ತಾ, ನಡುಗುತ್ತಾ ಮುಂದೆ ಬಂದು 'ಅಪ್ಪಣೆಯಾಗಬೇಕು ಮಹಾಸ್ವಾಮಿ' ಅಂತ ತೊದಲಿದರು. ಆಗ ಹನುಮಂತಯ್ಯನವರು ಮೇಷ್ಟ್ರ ಭುಜದ ಮೇಲೆ ಕೈಯಿಟ್ಟು 'ಗಾಬರಿ ಆಗಬೇಡಿ ವೀರಭದ್ರಪ್ಪನವರೆ, ನಿಮ್ಮ ಹತ್ರ ಸ್ವಲ್ಪ ಮಾತಾಡಬೇಕಿತ್ತು. ಸ್ವಂತ ವಿಷಯ' ಅಂದರು. ಉಳಿದ ಮೇಷ್ಟರು ಹೊರಗೆ ಹೋದರು.

ಆಗ ಹನುಮಂತಯ್ಯನವರು- 'ಮೇಷ್ಟ್ರೆ, ಈ ಊರಿನಿಂದ ನನ್ನ ಮಗಳಿಗೆ ಒಂದು ಮದುವೆ ಪ್ರಸ್ತಾಪ ಬಂದಿದೆ. ವರನ ಗುಣ, ನಡತೆ, ಮನೆ, ಮನೆತನ ವಿಚಾರಿಸೋಕೆ ನಿಮ್ಮಂಥ ಮೇಷ್ಟ್ರನ್ನೇ ಕೇಳೋದು ಸೂಕ್ತ ಅಂತ ಅನ್ನಿಸಿತು. ಅದಕ್ಕೆ ಬಂದೆ' ಅಂದರು.

ಮೇಷ್ಟ್ರು - 'ಒಳ್ಳೆ ಹುಡುಗ ಮಹಾಸ್ವಾಮಿ, ಒಳ್ಳೆಯ ಮನೆತನ, ತಾವು ಧಾರಾಳವಾಗಿ ಮುಂದುವರಿಯಬಹುದು'.

ಮತ್ತೊಬ್ಬರನ್ನು ವಿಚಾರಿಸಲಿಲ್ಲ ಹನುಮಂತಯ್ಯನವರು. ಅದೇ ವರನಿಗೆ ಮಗಳನ್ನು ಕೊಟ್ಟು ಮದುವೆ ಮಾಡಿದರು.

ಮೇಷ್ಟ್ರು ಅಂದರೆ ಆ ಕಾಲದಲ್ಲಿ ಎಂಥಾ ವಿಶ್ವಾಸಾರ್ಹತೆ... ಹನುಮಂತಯ್ಯನವರದು ಎಂಥಾ ಸರಳತೆ... ಕೇಳಿ ಹೃದಯ ತೇವವಾದಂತಾಯ್ತು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಜೂನ್ 28, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ಸಪ್ತಮಿ ಗಂ. 16-28 ನಕ್ಷತ್ರ: ಪೂರ್ವಾಭಾದ್ರ ಗಂ. 10-11 ಯೋಗ: ಸೌಭಾಗ್ಯ ಗಂ. 21-39 ಕರಣ: ವಿಷ್ಟಿ ಗಂ. 05-33, ಮಿಥುನ ಮಾಸದ 14 ನೇ ದಿನ, ಮಳೆನಕ್ಷತ್ರ: ಆರ್ದ್ರಾ 2.

ರಾಹುಕಾಲ : ಬೆಳಿಗ್ಗೆ 10-30 – 12-00

ಸೂರ್ಯೋದಯ : 06-11 ಸೂರ್ಯಾಸ್ತ : 06-57

ಮುಸ್ಲಿಂ ದಿನಾಂಕ : 22 ಜುಲ್‌ಹಿಜಾ

ಅದೃಷ್ಟ ಸಂಖ್ಯೆ : 4, 8

ಮೇಷ: ಕೆಲಸ ಆರಂಭಿಸುವ ಮುನ್ನ ಪ್ರಾಜ್ಞರಲ್ಲಿ ಸಮಯವು ಸರಿಯೇ ಎಂದು ವಿಚಾರಿಸಿ. ಮಕ್ಕಳ ಜವಾಬ್ದಾರಿಯನ್ನು ಅಪ್ಪಿತಪ್ಪಿ ಬೇರೆಯವರಿಗೆ ಒಪ್ಪಿಸಲು ಹೋಗದಿರಿ. ನೆರೆ ಹೊರೆಯವರೊಡನೆ ಉತ್ತಮ ಬಾಂಧವ್ಯ ಹೊಂದುವಿರಿ.

ವೃಷಭ: ಎದುರಾಗುವ ಸನ್ನಿವೇಶಗಳಲ್ಲಿ ಯಾವ ದಿಕ್ಕಿನಲ್ಲಿ ಸಾಗಬೇಕೆಂಬ ಗೊಂದಲಗಳು ಕಾಡಲಿದೆ. ಕೇಟರಿಂಗ್ ಮತ್ತು ಹೊಟೆಲ್ ಉದ್ಯಮ ನಡೆಸುವವರಿಗೆ ಶುಭದಿನ. ಮಧುರ ಖಾದ್ಯಗಳ ಭೋಜನ ನಿಮ್ಮದಾಗುವುದು.

ಮಿಥುನ: ಧಾರ್ಮಿಕ ಪ್ರವಚನದಂಥ ಕಾರ್ಯದ ಸಂಕಲ್ಪ ಹೊಂದಿದವರಿಗೆ ದೇವರ ಅನುಗ್ರಹದಿಂದ ಜನ ಹಾಗು ಧನ ಸಹಾಯ ದೊರೆಯುವುದು. ರಚನಾತ್ಮಕ ಕೆಲಸಗಳಿಗೆ ಪ್ರಾಶಸ್ತ್ಯ ಕೊಡುವುದರಿಂದ ಸಂತಸ ಹೊಂದುವಿರಿ.

ಕರ್ಕಾಟಕ: ನ್ಯಾಯಾಲಯದಲ್ಲಿರುವ ಪ್ರಕರಣಗಳು ನಿಮ್ಮ ವಿರುದ್ಧವಾಗಿ ತಿರುಗುವಂತೆ ಷಡ್ಯಂತ್ರ ನಡೆಯಬಹುದು. ವಿದ್ಯಾರ್ಥಿಗಳು ಪೈಪೋಟಿ ಎದುರಿಸುವ ದಿನವಾಗುವುದು. ವ್ಯಾಪಾರದ ವಿಚಾರದಲ್ಲಿ ಚರ್ಚೆ ನಡೆಯಲಿದೆ.

ಸಿಂಹ: ವರಿಷ್ಠ ಅಧಿಕಾರಿಗಳಿಗೆ ವಿಶೇಷ ಸ್ಥಾನಮಾನ, ಅಧಿಕಾರಗಳು ಪ್ರಾಪ್ತವಾಗಲಿದೆ. ರಫ್ತು ವ್ಯವಹಾರದಲ್ಲಿ ಹೇರಳ ಲಾಭ– ತಲೆಬಿಸಿಯ ವಾತಾವರಣ ಗಳೆರಡೂ ಇರುವುದು. ತಂಗಿಯ ದುಃಖಕ್ಕೆ ಹೆಗಲಾಗಿ ನಿಲ್ಲುವಿರಿ.

ಕನ್ಯಾ: ನಿರೀಕ್ಷೆಯ ಫಲಿತಾಂಶವು ವೃತ್ತಿ ಜೀವನದಲ್ಲಿ ದೊರೆಯಲು ಹರ ಸಾಹಸ ಪಡಬೇಕಾದ ಸಂದರ್ಭ ಬರುತ್ತದೆ. ಪಾಲಕರಾಗುವ ಸುದ್ದಿ ತಿಳಿದು ಅತೀವ ಸಂತಸ. ಬಂಗಾರದ ವ್ಯಾಪಾರಿಗಳಿಗೆ ಸಾಧಾರಣ ಲಾಭವಿರುವುದು.

ತುಲಾ: ಮನೆಯಲ್ಲಿ ನಡೆದ ಕಾರ್ಯಕ್ರಮದ ಫಲವಾಗಿ ದೈನಂದಿನ ವೇಳಾಪಟ್ಟಿ ಬದಲಾವಣೆಯಾಗಲಿದೆ. ಗೃಹ ಕೈಗಾರಿಕೆ ಕೆಲಸಗಳಲ್ಲಿ ಮನೆಯವರ ಪರಿಶ್ರಮ ಸಾರ್ಥಕವೆನಿಸುವುದು. ಹಣ ಖರ್ಚು ಮಾಡುವ ಪರಿಸ್ಥಿತಿ ಬರುವುದು.

ವೃಶ್ಚಿಕ: ಸುತ್ತಮುತ್ತಲಿನ ವಾತಾವರಣವು ಶಾಂತಿಯನ್ನು ಕೆಡಿಸುವ ಕೆಲಸವನ್ನು ಮಾಡುವುದು. ಯೋಜನೆಗಳು ಕಾರ್ಯಗತಗೊಳ್ಳಲು ಪ್ರಯತ್ನ ನಡೆಸಬೇಕಾಗುವುದು. ಉದ್ರೇಕಕ್ಕೆ ಒಳಗಾಗದೆ ಕೆಲಸವನ್ನು ಮಾಡಿ.

ಧನು: ರಂಗಿನ ಲೋಕದ ಕನಸನ್ನು ನನಸು ಮಾಡಿಕೊಳ್ಳುವ ಭರದಲ್ಲಿ ಹಣ ಹಾಳು ಮಾಡಿಕೊಳ್ಳದಿರಿ. ರಕ್ತ ಅಥವಾ ರಕ್ತನಾಳಕ್ಕೆ ಸಂಬಂಧಿಸಿದ ಕಾಯಿಲೆಯಿಂದ ಬಳಲುತ್ತಿರುವವರಿಗೆ ಔಷಧಿಯಿಂದ ಚೇತರಿಕೆ ಸಿಗಲಿದೆ.

ಮಕರ: ಪರಪೀಡನೆಯನ್ನೇ ತನ್ನ ವೃತ್ತಿ ಎಂದು ತಿಳಿಯುವ ವ್ಯಕ್ತಿಗಳ ಜತೆ ಸಂಭಾಷಣೆ ನಡೆಸಿ ಪ್ರಯೋಜನವಿಲ್ಲ. ತಕ್ಷಣದಲ್ಲಿ ನಡೆಯಬೇಕೆಂಬ ಅಗತ್ಯ ಕಾರ್ಯಗಳಲ್ಲಿ ವಿಳಂಬ ತೋರಿಬಂದೀತು.

ಕುಂಭ: ಏನಾದರೂ ಸಾಧಿಸಲೇಬೇಕೆಂಬ ಆಸೆ-ಆಕಾಂಕ್ಷೆಗೆ ಆತ್ಮವಿಶ್ವಾಸದ ಕೊರತೆಯಂತೂ ಕಾಣಿಸದು. ಕರ್ತವ್ಯದ ಕೊರತೆ ಮೇಲಧಿಕಾರಿಗಳಿಗೆ ಎದ್ದು ಕಾಣಲಿದೆ. ಸಂಸಾರ ನಿರ್ವಹಣೆಗಾಗಿ ಅಧಿಕ ಹಣ ವ್ಯಯಿಸುವಿರಿ.

ಮೀನ: ಕೆಲಸದಲ್ಲಿ ಗುಣಮಟ್ಟದ ಕೊರತೆಯಿಂದಾಗಿ ಸಮಾಧಾನ ಇಲ್ಲದಂತೆ ಆಗುತ್ತದೆ. ಕ್ರೀಡಾಕ್ಷೇತ್ರದಲ್ಲಿನ ಹೆಸರು ನಿರಂತರ ಪ್ರಯತ್ನದಿಂದಾಗಿ ಉತ್ತಮ ಸ್ಥಾನ ತಲುಪುತ್ತದೆ. ಆಕಸ್ಮಿಕವಾಗಿ ಧನಲಾಭ ಹೊಂದುವಿರಿ.

ಪದಬಂಧ 5725


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕೊನೆಗೆ ಆವೇಶದಿಂದ ಎಲ್ಲರೂ ಸೇರುವುದು (4)
3.ಅಭಿಮಾನವನ್ನು ಹೊಂದಿರುವವನು (4)
5.ತಿರುಗಿಸಿದರೂ ಇದು ಹೊಸತು (3)
6.ಈತ ಕಾಪಾಡುವವನು (3)
8.ತಡ ಎಂದು ಹೀಗೆ ಹೇಳಿ (3)
10.ದೀಪವನ್ನು ಹಚ್ಚಿಡುವ ಚಿಕ್ಕ ಬಟ್ಟಲು (3)
11.ನೈತಿಕವಾಗಿ ಪತನ ಹೊಂದಿದವನು (3)
13.ಕೆಟ್ಟ ರೂಪವಿದು (3)
15.ಕೊನೆಗೆ ಹಾರವನ್ನಿಟ್ಟು ಹೋಗಲಾಡಿಸುವಿಕೆ (4)
16.ಅವಸರ ಇಲ್ಲಿ ಕಾಣುತ್ತಿದೆ (4)

ಮೇಲಿಂದ ಕೆಳಕ್ಕೆ

1.ಕೊನೆಗೆ ಗರ ಬಡಿದರೂ ಇದು ಸಂಭ್ರಮ! (4)
2.ಮಲಗುವಿಕೆಗೊಂದು ಪರ್ಯಾಯ ಪದ (3)
3.ಆಹಾರ ಇಲ್ಲಿದೆ (3)
4.ಎವೆಯನ್ನು ಮುಚ್ಚುವುದು (4)
7.ಕೃಪಣನ ಬಳಿಯಿರುವ ಭೌದ್ಧಭಿಕ್ಷು (3)
9.ತವಕ ಹೀಗೆ ಬಂದಿದೆ (3)
10.ಕೈ ಮೊದಲಿಟ್ಟು ಮಧ್ಯ ಪ್ರವೇಶಿಸುವಿಕೆ (4)
12.ತೆಳ್ಳಗಿನ ಸೊಂಟದವಳು (4)
13.ಅಷ್ಟದಿಕ್ಪಾಲಕರಲ್ಲಿ ಅತೀ ಶ್ರೀಮಂತನೀತ (3)
14.ಅಗಲವಾದ ತಟ್ಟೆಯಿದು (3)



5724ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಒಳಸಂಚು 3.ಅನುಭವ
5.ದಳಪತಿ 7.ಪಾಷಾಣ
8.ಕರತಾಡನ 11.ಬುಗುಟು
12.ಕರಣಿಕ 14.ದಶಮಾಂಶ
15.ವಾಸಸ್ಥಾನ

ಮೇಲಿಂದ ಕೆಳಕ್ಕೆ:
1.ಒಳದನಿ 2.ಸಂತಾಪ
4.ವರುಣ 6.ತಿಮಿರ
7.ಪಾವನ 8.ಕಗ್ಗಂಟು
9.ದನ್ಯಕ 10.ಸಂಕಲನ
11.ಬುದ್ಬುದ 13.ರಭಸ

ಸುಡೊಕು 6110

		6		7		3		8
			2		4			
7		1		5		4		9
	9		5				7	
1				4	7			3
	6				8		5	
9		5			6			1
				3			8	
6		8	4			9		5


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6109 ಸುಡೊಕು

8	5	3	1	6	2	4	9	7
6	1	9	7	5	4	3	2	8
7	4	2	8	9	3	1	6	5
4	6	7	5	3	9	2	8	1
1	2	8	6	4	7	9	5	3
3	9	5	2	1	8	7	4	6
5	7	4	3	2	6	8	1	9
9	3	1	4	8	5	6	7	2
2	8	6	9	7	1	5	3	4

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,868
ಇಂದಿನ ಅಂತ್ಯ	24,044
▲	175
ದಿನದ ಗರಿಷ್ಠ	24,087

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹202
ಆರ್‌ಎಸ್‌ಎಸ್-5	₹194
ಗುಡ್ ಲಾಟ್ (ಪ್ರತಿ ಕೆ.ಜಿಗೆ)	₹181

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹560
12 ಕ್ಕೆ	₹75
ಮೈಸೂರು	
100ಕ್ಕೆ	₹565

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1525 (1530)
ಸೋಯಾ (ರಿಫೈನ್ಡ್)	₹965 (965)
ಸೂರ್ಯಕಾಂತಿ (ರಿಫೈನ್ಡ್)	₹965 (965)
ಪಾಮೋಲಿನ್	₹905 (904)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹360-502
ದ್ವಿತಳಿ (ಬಿ.ವಿ)	₹378-647

ಅರುಂಧತಿಗೆ 'ಪೆನ್ ಪಿಂಟರ್' ಗೌರವ



ಲಂಡನ್ (ಪಿಟಿಐ): ಲೇಖಕಿ, ಹೋರಾಟಗಾರ್ತಿ ಅರುಂಧತಿ ರಾಯ್ ಅವರು 2024ರ ಸಾಲಿನ ಪ್ರತಿಷ್ಠಿತ 'ಪೆನ್ ಪಿಂಟರ್' ಪ್ರಶಸ್ತಿಗೆ ಭಾಜನರಾಗಿದ್ದಾರೆ.

ನೊಬೆಲ್ ಪ್ರಶಸ್ತಿ ವಿಜೇತ ನಾಟಕಕಾರ ಹೆರಾಲ್ಡ್ ಪಿಂಟರ್ ಅವರ ಸ್ಮರಣಾರ್ಥ 'ಇಂಗ್ಲಿಷ್ ಪೆನ್' ಸಂಸ್ಥೆಯು 2009 ರಲ್ಲಿ ಸ್ಥಾಪಿಸಿರುವ ಈ ಪ್ರಶಸ್ತಿಯನ್ನು ಸಾಹಿತ್ಯ ಕ್ಷೇತ್ರದಲ್ಲಿ ಅಪ್ರತಿಮ ಸಾಧನೆ ಮಾಡಿದವರಿಗೆ ನೀಡಲಾಗುತ್ತದೆ.

'ಪೆನ್ ಪಿಂಟರ್ ಪ್ರಶಸ್ತಿ ಸ್ವೀಕರಿಸಲು ನನಗೆ ಸಂತಸವಾಗುತ್ತಿದೆ. ಜಗತ್ತಿನಲ್ಲಿ ಆಗುತ್ತಿರುವ ಬದಲಾವಣೆಗಳ ಬಗ್ಗೆ ಬರೆಯಲು ಹೆರಾಲ್ಡ್ ಪಿಂಟರ್ ಅವರು ಇಂದು ನಮ್ಮೊಂದಿಗೆ ಇರಬೇಕಿತ್ತು ಎಂದು ಬಯಸುತ್ತೇನೆ. ಅವರು ಇಲ್ಲದಿರುವುದರಿಂದ, ಅವರ ಸ್ಥಾನವನ್ನು ತುಂಬಲು ನಮ್ಮಲ್ಲಿ ಕೆಲವರು ಕೈಲಾದಷ್ಟು ಪ್ರಯತ್ನಿಸಬೇಕು' ಎಂದು ಅರುಂಧತಿ ಪ್ರತಿಕ್ರಿಯಿಸಿದ್ದಾರೆ.

'ಅರುಂಧತಿ ರಾಯ್ ಅವರು ಈ ಪ್ರತಿಷ್ಠಿತ ಪ್ರಶಸ್ತಿಗೆ ಒಮ್ಮತದಿಂದ ಆಯ್ಕೆಯಾಗಿದ್ದಾರೆ. ಸಾಹಿತ್ಯಕ್ಕೆ ಅವರು ನೀಡಿರುವ ಅಪ್ರತಿಮ ಕೊಡುಗೆಯನ್ನು ಇದು ಸೂಚಿಸುತ್ತದೆ' ಎಂದು ಆಯ್ಕೆ ಸಮಿತಿಯಲ್ಲಿದ್ದ ಸಂಗೀತಗಾರ ರೋಜರ್ ರಾಬಿನ್ಸನ್ ಹೇಳಿದ್ದಾರೆ.

62 ವರ್ಷದ ಅರುಂಧತಿ ಅವರು ಬ್ರಿಟಿಷ್ ಲೈಬ್ರರಿ ಸಹಯೋಗದಲ್ಲಿ ಅ.10ರಂದು ನಡೆಯಲಿರುವ ಸಮಾರಂಭದಲ್ಲಿ ಪ್ರಶಸ್ತಿ ಸ್ವೀಕರಿಸಲಿದ್ದಾರೆ. 2010ರಲ್ಲಿ ಪ್ರಚೋದನಕಾರಿ ಭಾಷಣ ಮಾಡಿದ್ದಕ್ಕಾಗಿ ಅರುಂಧತಿ ವಿರುದ್ಧ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯಡಿ (ಯುಎಪಿಎ) ಪ್ರಕರಣ ದಾಖಲಾಗಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ		ಕೆಂಪುಗೋಟು	20569-35480	ಬಿಳಿಗೋಟು	21069-29619
ಕೋಕ	18000-28500	ರಾಶಿ	32699-50899	ಚಾಲಿ	32412-35611
ಹೊಸತು	28500-37500	ಸಿಪ್ಪೆಗೋಟು	7099-18289	ಕೆಂಪುಗೋಟು	24499-28699
ಹಳತು	37500-45500	ಸಿದ್ದಾಪುರ		ರಾಶಿ	45699-48889
ಶಿವಮೊಗ್ಗ		ಬಿಳಿಗೋಟು	25311-28499	ಯಲ್ಲಾಪುರ	
ಬೆಟ್ಟೆ	43574-56659	ಚಾಲಿ	31555-35499	ಅಪಿ	60699-60699
ಗೊರಬಲು	18000-37109	ಕೋಕ	24699-28699	ಬಿಳಿಗೋಟು	21899-30800
ರಾಶಿ	26280-51259	ಕೆಂಪುಗೋಟು	24699-27619	ಚಾಲಿ	30900-35570
ಸರಕು	46119-86396	ರಾಶಿ	40699-46899	ಕೋಕ	6899-22109
ಸಾಗರ		ತಟ್ಟಿಬೆಟ್ಟೆ	42699-42699	ಕೆಂಪುಗೋಟು	26020-32610
ಬಿಳಿಗೋಟು	12009-25899	ಶಿರಸಿ		ರಾಶಿ	44899-52399
ಚಾಲಿ	21611-33599	ಬೆಟ್ಟೆ	30099-41009	ತಟ್ಟಿಬೆಟ್ಟೆ	34742-44567
ಕೋಕ	9009-22119				

12 ವರ್ಷದ ಕನಿಷ್ಠ ಮಟ್ಟಕ್ಕೆ ದಾಖಲು: ಆರ್‌ಬಿಐ ವರದಿ ಬಿಡುಗಡೆ

ತಗ್ಗಿದ ಸರಾಸರಿ ಎನ್‌ಪಿಎ

ಮುಂಬೈ (ಪಿಟಿಐ): ದೇಶದ ಆರ್ಥಿಕತೆ ಹಾಗೂ ಹಣಕಾಸು ವ್ಯವಸ್ಥೆಯು ಸದೃಢವಾಗಿದೆ. ಮಾರ್ಚ್ ಅಂತ್ಯಕ್ಕೆ ವಾಣಿಜ್ಯ ಬ್ಯಾಂಕ್‌ಗಳ ವಸೂಲಾಗದ ಸಾಲದ (ಎನ್‌ಪಿಎ) ಸರಾಸರಿ ಪ್ರಮಾಣವು 12 ವರ್ಷಗಳ ಕನಿಷ್ಠ ಮಟ್ಟವಾದ ಶೇ 2.8ರಷ್ಟಕ್ಕೆ ತಗ್ಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ಸ್ಥಿರತೆ ವರದಿ ಹೇಳಿದೆ.

ನಿವ್ವಳ ಎನ್‌ಪಿಎ ಪ್ರಮಾಣ ಶೇ 0.6ಕ್ಕೆ ಇಳಿಕೆಯಾಗಿದೆ. ಪ್ರಸಕ್ತ ಹಣಕಾಸು ವರ್ಷದ ಅಂತ್ಯಕ್ಕೆ ಈ ಬ್ಯಾಂಕ್‌ಗಳ ಸರಾಸರಿ ಎನ್‌ಪಿಎ ಪ್ರಮಾಣವು ಶೇ 2.5ಕ್ಕೆ ಇಳಿಕೆಯಾಗಲಿದೆ. ಬ್ಯಾಂಕ್‌ಗಳ ಆಸ್ತಿ ಗುಣಮಟ್ಟವೂ ಸುಧಾರಣೆ ಕಂಡಿದೆ ಎಂದು ಗುರುವಾರ ಬಿಡುಗಡೆಯಾಗಿರುವ ವರದಿ ತಿಳಿಸಿದೆ.

ಆರ್ಥಿಕತೆ ಬೆಳವಣಿಗೆ ಮತ್ತು ಹಣಕಾಸು ವ್ಯವಸ್ಥೆಯ ಚೇತರಿಕೆ ಮತ್ತು ಸದೃಢತೆಗೆ ದೇಶದ ಸ್ಥೂಲ ಆರ್ಥಿಕ ಸ್ಥಿರತೆಯು ನೆರವಾಗಿದೆ. ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳಲ್ಲಿ ನಗದು ಲಭ್ಯತೆ ಪ್ರಮಾಣ ಹೆಚ್ಚಿದೆ. ಅಲ್ಲದೆ, ಸಾಲ ನೀಡಿಕೆಯಲ್ಲಿ ಸುಸ್ಥಿರತೆ ಕಾಯ್ದುಕೊಂಡಿರುವುದು ಆರ್ಥಿಕ ಚಟುವಟಿಕೆಗಳಿಗೆ ವರದಾನವಾಗಿದೆ ಎಂದು ಹೇಳಿದೆ.

ಬ್ಯಾಂಕ್‌ಗಳ ಸುರಕ್ಷತೆಯ ಮಾನದಂಡವಾದ ಬಂಡವಾಳ ಪರ್ಯಾಪ್ತತಾ ಅನುಪಾತ (ಸಿಆರ್‌ಎಆರ್) ಶೇ 16.8ರಷ್ಟಿದೆ. ಬಂಡವಾಳ ಸೃಷ್ಟಿಯಲ್ಲಿ ಹೊಂದಿರುವ ಸಾಮಾನ್ಯ ಈಕ್ವಿಟಿ ಶ್ರೇಣಿ 1 (ಸಿಇಟಿ1) ಅನುಪಾತವು ಶೇ 13.9ರಷ್ಟಿದೆ ಎಂದು ವಿವರಿಸಿದೆ. 2023–24ನೇ ಹಣಕಾಸು ವರ್ಷದ ದ್ವಿತೀಯಾರ್ಧದಲ್ಲಿ ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಜಿಎನ್‌ಪಿಎ ಶೇ 0.76ರಷ್ಟು ಇಳಿಕೆಯಾಗಿದೆ ಎಂದು ತಿಳಿಸಿದೆ.

ಆರ್ಥಿಕ ಸ್ಥಿರತೆ ಕಾಯ್ದುಕೊಳ್ಳಲು ಹಣಕಾಸು ವ್ಯವಸ್ಥೆ ವ್ಯಾಪ್ತಿಗೆ ಒಳಪಡುವ ಎಲ್ಲಾ ಮಧ್ಯಸ್ಥಗಾರರು ಉತ್ತಮ ಆಡಳಿತಕ್ಕೆ ಒತ್ತು ನೀಡುವುದು ಅತ್ಯಗತ್ಯ

ಶಕ್ತಿಕಾಂತ ದಾಸ್, ಗವರ್ನರ್, ಆರ್‌ಬಿಐ

ಎನ್‌ಬಿಎಫ್‌ಸಿ ಸ್ಥಿತಿಗತಿ ಏನು?

ಬ್ಯಾಂಕೇತರ ಹಣಕಾಸು ಕಂಪನಿಗಳ (ಎನ್‌ಬಿಎಫ್‌ಸಿ) ಬಂಡವಾಳ ಪರ್ಯಾಪ್ತತಾ ಅನುಪಾತವೂ ಉತ್ತಮವಾಗಿದೆ ಎಂದು ಆರ್‌ಬಿಐ ವರದಿ ತಿಳಿಸಿದೆ.

ಸಿಆರ್‌ಎಆರ್ ಶೇ 26.6ರಷ್ಟು ಹಾಗೂ ವಸೂಲಾಗದ ಸಾಲದ ಸರಾಸರಿ ಪ್ರಮಾಣವು ಶೇ 4.0ರಷ್ಟಿದೆ. ಕಂಪನಿಗಳ ಸ್ವತ್ತು ಮೇಲಿನ ಆದಾಯವು ಶೇ 3.3ರಷ್ಟಿದೆ ಎಂದು ತಿಳಿಸಿದೆ.

ಜಾಗತಿಕ ಆರ್ಥಿಕತೆ ಕುರಿತಂತೆ ವರದಿಯು ಕಳವಳ ವ್ಯಕ್ತಪಡಿಸಿದೆ. ಇಸ್ರೇಲ್–ಗಾಜಾ ನಡುವಿನ ಬಿಕ್ಕಟ್ಟು ಮುಂದುವರಿದಿದೆ. ಇದು ಸಾರ್ವಜನಿಕ ಸಾಲದ ಪ್ರಮಾಣದ ಹೆಚ್ಚಳಕ್ಕೆ ಕಾರಣವಾಗಲಿದೆ. ಚಿಲ್ಲರೆ ಹಣದುಬ್ಬರ ಇಳಿಕೆಯು ಮಂದಗತಿಯಲ್ಲಿದೆ ಎಂದು ಹೇಳಿದೆ. ಈ ಸವಾಲುಗಳ ನಡುವೆಯೂ ಜಾಗತಿಕ ಹಣಕಾಸು ವ್ಯವಸ್ಥೆಯು ಚೇತರಿಕೆಯ ಹಳಿಗೆ ಮರಳಿದೆ. ಆರ್ಥಿಕ ಸ್ಥಿತಿಗತಿಗಳು ಸ್ಥಿರವಾಗಿವೆ ಎಂದು ತಿಳಿಸಿದೆ.

ಸುದ್ದಿ 2 ನಿಮಿಷ

ವಿವಾಹಿತೆಯರಿಗೆ ತಾರತಮ್ಯ ಮಾಡಿಲ್ಲ: ಫಾಕ್ಸ್‌ಕಾನ್

ನವದೆಹಲಿ (ಪಿಟಿಐ): 'ಹೊಸ ನೇಮಕಾತಿಯಲ್ಲಿ ಶೇ 25ರಷ್ಟು ವಿವಾಹಿತೆಯರನ್ನು ನೇಮಿಸಿಕೊಳ್ಳಲಾಗಿದ್ದು, ಯಾವುದೇ ತಾರತಮ್ಯ ಎಸಗಿಲ್ಲ' ಎಂದು ಐಫೋನ್ ತಯಾರಿಕಾ ಕಂಪನಿ ಫಾಕ್ಸ್‌ಕಾನ್ ಸ್ಪಷ್ಟಪಡಿಸಿದೆ.

ತಮಿಳುನಾಡಿನಲ್ಲಿ ಇರುವ ಫಾಕ್ಸ್‌ಕಾನ್ ಘಟಕದಲ್ಲಿ ವಿವಾಹಿತೆಯರ ನೇಮಕಕ್ಕೆ ತಾರತಮ್ಯ ನೀತಿ ಅನುಸರಿಸಲಾಗುತ್ತಿದೆ ಎಂಬ ಆರೋಪ ಕೇಳಿಬಂದಿತ್ತು. ಅಲ್ಲದೆ, ಹಿಂದೂ ಮಹಿಳೆಯರು ಮಾಂಗಲ್ಯ ಧರಿಸುವುದರಿಂದ ಸುರಕ್ಷತೆಯ ನೆಪವೊಡ್ಡಿ ಉದ್ಯೋಗ ನೀಡುತ್ತಿಲ್ಲ ಎಂದು ಹೇಳಲಾಗಿತ್ತು.

ಇದರ ಬೆನ್ನಲ್ಲೇ ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯವು ಈ ಕುರಿತು ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ತಮಿಳುನಾಡಿನ ಕಾರ್ಮಿಕ ಇಲಾಖೆಗೆ ಸೂಚಿಸಿತ್ತು.

'ತಮಿಳುನಾಡಿನಲ್ಲಿ ಇರುವ ಘಟಕದಲ್ಲಿ ವಿವಾಹಿತೆಯರನ್ನು ನೇಮಿಸಿಕೊಳ್ಳಲಾಗಿಲ್ಲ ಎಂಬ ಆರೋಪ ನಿರಾಧಾರವಾದದ್ದು. ಒಟ್ಟು ಉದ್ಯೋಗಿಗಳ ಪೈಕಿ ಶೇ 70ರಷ್ಟು ಮಹಿಳೆಯರು ಇದ್ದಾರೆಂದು ಕೇಂದ್ರ ಸರ್ಕಾರಕ್ಕೆ ಫಾಕ್ಸ್‌ಕಾನ್ ವರದಿ ಸಲ್ಲಿಸಿದೆ' ಎಂದು ಮೂಲಗಳು ತಿಳಿಸಿವೆ.

'ಐಫೋನ್ ತಯಾರಿಕೆಯಲ್ಲಿ ಸುರಕ್ಷತೆಗೆ ಒತ್ತು ನೀಡಬೇಕಿದೆ. ಹಾಗಾಗಿ, ಪುರುಷರು ಹಾಗೂ ಮಹಿಳೆಯರು ಚಿನ್ನಾಭರಣಗಳನ್ನು ಧರಿಸುವಂತಿಲ್ಲ. ಕಾರ್ಖಾನೆಯಲ್ಲಿ ಕೆಲಸ ನಿರ್ವಹಿಸುವಾಗ ಇವುಗಳನ್ನು ತೆಗೆದಿಟ್ಟು ಕೆಲಸ ಮಾಡಬೇಕಿದೆ. ಹಲವು ಕಂಪನಿಗಳಲ್ಲಿ ಈಗಾಗಲೇ ಈ ನಿಯಮ ಜಾರಿಯಲ್ಲಿದೆ. ಸರ್ಕಾರಕ್ಕೂ ಈ ಬಗ್ಗೆ ಮಾಹಿತಿ ಇದೆ' ಎಂದು ಹೇಳಿದೆ.



ಅಲ್ಟ್ರಾಟೆಕ್‌ನಿಂದ ಇಂಡಿಯಾ ಸಿಮೆಂಟ್ ಷೇರು ಖರೀದಿ

ನವದೆಹಲಿ (ಪಿಟಿಐ): ಚೆನ್ನೈ ಮೂಲದ ಇಂಡಿಯಾ ಸಿಮೆಂಟ್ ಲಿಮಿಟೆಡ್‌ನಲ್ಲಿ ಶೇ 23ರಷ್ಟು ಷೇರುಗಳ ಖರೀದಿಗೆ ನಿರ್ಧರಿಸಲಾಗಿದ್ದು, ಇದಕ್ಕಾಗಿ ₹1,900 ಕೋಟಿ ವ್ಯಯಿಸಲಾಗುವುದು ಎಂದು ದೇಶದ ಪ್ರಮುಖ ಸಿಮೆಂಟ್ ತಯಾರಿಕಾ ಕಂಪನಿ ಅಲ್ಟ್ರಾಟೆಕ್ ಗುರುವಾರ ತಿಳಿಸಿದೆ.

ಪ್ರತಿ ಷೇರಿಗೆ ₹267 ದರ ನಿಗದಿಪಡಿಸಲಾಗಿದ್ದು, ಒಟ್ಟು 7 ಕೋಟಿ ಷೇರುಗಳನ್ನು ಖರೀದಿಸಲಾಗುವುದು. ಇದಕ್ಕೆ ಆಡಳಿತ ಮಂಡಳಿಯು ಒಪ್ಪಿಗೆ ನೀಡಿದೆ ಎಂದು ಆದಿತ್ಯ ಬಿರ್ಲಾ ಸಮೂಹಕ್ಕೆ ಸೇರಿದ ಅಲ್ಟ್ರಾಟೆಕ್ ಕಂಪನಿಯು, ಷೇರುಪೇಟೆಗೆ ಮಾಹಿತಿ ನೀಡಿದೆ.

ಪ್ರಸ್ತುತ ಅಲ್ಟ್ರಾಟೆಕ್ ಕಂಪನಿಯು ವಾರ್ಷಿಕ 152.7 ದಶಲಕ್ಷ ಟನ್‌ನಷ್ಟು ಸಿಮೆಂಟ್ ಉತ್ಪಾದಿಸುತ್ತಿದೆ. ಉತ್ಪಾದನಾ ಸಾಮರ್ಥ್ಯದ ವಿಸ್ತರಣೆಗೆ ಮುಂದಾಗಿದೆ. ಹಾಗಾಗಿ, ಮಹಾರಾಷ್ಟ್ರದಲ್ಲಿ ಇರುವ ಇಂಡಿಯಾ ಸಿಮೆಂಟ್‌ನ ಗ್ರೈಂಡಿಂಗ್ ಘಟಕವನ್ನು ₹315 ಕೋಟಿ ವೆಚ್ಚದಲ್ಲಿ ಸ್ವಾಧೀನಪಡಿಸಿಕೊಳ್ಳುವುದಾಗಿ ಪ್ರಕಟಿಸಿತ್ತು.

ಸೆಬಿ ನಿಯಮಾವಳಿಗಳ ಉಲ್ಲಂಘನೆ ಆರೋಪ

ಇನ್ಫೊಸಿಸ್‌ಗೆ ₹25 ಲಕ್ಷ ದಂಡ

ನವದೆಹಲಿ (ಪಿಟಿಐ): ಇನ್ಫೊಸಿಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಸಲೀಲ್ ಪರೇಖ್ ವಿರುದ್ಧ ಆಂತರಿಕ ವ್ಯಾಪಾರ ನಿಯಮಾವಳಿಗಳನ್ನು ಉಲ್ಲಂಘಿಸಿರುವ ಆರೋಪ ಕೇಳಿಬಂದಿದೆ. ಈ ಸಂಬಂಧ ಇನ್ಫೊಸಿಸ್‌ಗೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ₹25 ಲಕ್ಷ ದಂಡ ವಿಧಿಸಿದೆ.

ಆಂತರಿಕ ವ್ಯಾಪಾರಕ್ಕೆ (ಇನ್‌ಸೈಡರ್ ಟ್ರೇಡಿಂಗ್) ಸಂಬಂಧಿಸಿದಂತೆ ಸಮರ್ಪಕ ಹಾಗೂ ಪರಿಣಾಮಕಾರಿ ವ್ಯವಸ್ಥೆಯನ್ನು ರೂಪಿಸಲಾಗಿದೆ. ಆದರೆ, ಇದರ ಪರಿಪಾಲನೆಯಲ್ಲಿ ಪರೇಖ್ ವಿಫಲರಾಗಿದ್ದಾರೆ ಎಂದು ಸೆಬಿ ಆದೇಶದಲ್ಲಿ ತಿಳಿಸಿದೆ.

ಏನಿದು ಪ್ರಕರಣ?: 2020ರ ಜುಲೈನಲ್ಲಿ ಅಮೆರಿಕ ಮೂಲದ ಸ್ವತ್ತು ನಿರ್ವಹಣಾ ಸಂಸ್ಥೆಯಾದ ವ್ಯಾನ್‌ಗಾರ್ಡ್ ಜೊತೆಗೆ ಇನ್ಫೊಸಿಸ್ ಒಪ್ಪಂದ ಮಾಡಿಕೊಂಡಿತ್ತು. ಕ್ಲೌಡ್ ಆಧಾರಿತ ದಾಖಲೆ ಸಂಗ್ರಹಕ್ಕೆ ವೇದಿಕೆ ಕಲ್ಪಿಸುವ ಒಪ್ಪಂದ ಇದಾಗಿದೆ.

ಸೆಬಿ ನಿಯಮಾವಳಿಗಳ ಅನ್ವಯ ಯಾವುದೇ ಕಂಪನಿಗಳು ಒಪ್ಪಂದ ಅಂತಿಮಗೊಳ್ಳುವುದಕ್ಕೆ ಮೊದಲೇ ಮಾಹಿತಿ ಪ್ರಕಟಿಸುವಂತಿಲ್ಲ. ಇದು ಷೇರುಪೇಟೆಯ ವಹಿವಾಟಿನ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ. ಇದನ್ನು ಅಪ್ರಕಟಿತ ಬೆಲೆ ಸೂಕ್ಷ್ಮ ಮಾಹಿತಿ (ಯುಪಿಎಸ್‌ಐ) ಎಂದು ಕರೆಯಲಾಗುತ್ತದೆ.

ಕೆಲವರು ಷೇರುಪೇಟೆಯಲ್ಲಿ ಲಾಭ ಪಡೆಯಲು ಈ ಅಕ್ರಮ ಆಂತರಿಕ ವ್ಯಾಪಾರಕ್ಕೆ ಮುಂದಾಗುವುದು ಉಂಟು. ಹಾಗಾಗಿ, ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಅವರೇ ಇದಕ್ಕೆ ಅಧಿಕೃತ ಹೊಣೆಗಾರರಾಗಿರುತ್ತಾರೆ. ಆದರೆ, ಎರಡೂ ಕಂಪನಿಗಳ ನಡುವಿನ ಒಪ್ಪಂದ ಕುರಿತ ಮಾಹಿತಿಯು ಸೋರಿಕೆಯಾಗಿತ್ತು ಎಂದು ಹೇಳಲಾಗಿದೆ.

ಈ ಬಗ್ಗೆ ತನಿಖೆ ನಡೆಸಿದ್ದ ಸೆಬಿಯು, ಇನ್ಫೊಸಿಸ್ ನಿಯಮಾವಳಿ ಉಲ್ಲಂಘಿಸಿರುವುದನ್ನು ಪತ್ತೆ ಹಚ್ಚಿತ್ತು. ಷೇರುಗಳ ಕೃತಕ ಏರಿಕೆ ಅಥವಾ ಇಳಿಕೆ ತಡೆಯಲು ಸೆಬಿಯು ಈ ನಿಯಮಾವಳಿಗಳನ್ನು ರೂಪಿಸಿದೆ.

ಮುಂಬೈ ಧಾರಣೆ

ಶೇಂಗಾ

27-6-2024

ಜಾವಾ 70/80(ಹೊಸ)	11500-11600
ಜಾವಾ 80/90(ಹೊಸ)	11100-11200
ದಪ್ಪ ಮಧ್ಯಪ್ರದೇಶ(ಹೊಸ)	10100-10200
ದಪ್ಪ ಗುಜರಾತ್(ಹೊಸ)	10900-11000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1535 (1540)
ಒಂದು ವಾರದ ಡೆಲಿವರಿ	1530 (1535)
ಸೋಯಾ ಕಚ್ಚಾ	915 (910)
ಪಾಮ್ ವಾರದ ಡೆಲಿವರಿ	903 (902)
ಸೂರ್ಯಕಾಂತಿ ಎಣ್ಣೆ ಕಚ್ಚಾ	910 (915)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹**71,000** (70,800)
ಬೆಳ್ಳಿ ಕೆ.ಜಿ ₹**87,000** (86,800)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

79,000 ದಾಟಿದ ಸೆನ್ಸೆಕ್ಸ್; ಐ.ಟಿ ಷೇರಿನ ಮೌಲ್ಯ ಏರಿಕೆ

ಹೊಸ ಎತ್ತರಕ್ಕೆ ಜಿಗಿದ ಷೇರುಪೇಟೆ



ಮುಂಬೈ (ಪಿಟಿಐ): ಇನ್ಫೊಸಿಸ್, ರಿಲಯನ್ಸ್ ಇಂಡಸ್ಟ್ರಿಸ್ ಹಾಗೂ ಟಿಸಿಎಸ್ ಷೇರುಗಳ ಖರೀದಿ ಭರಾಟೆಯಿಂದಾಗಿ ಸತತ ನಾಲ್ಕನೇ ದಿನವಾದ ಗುರುವಾರವೂ ದೇಶದ ಷೇರುಪೇಟೆಗಳಲ್ಲಿ ಗೂಳಿ ಓಟ ಮುಂದುವರಿಯಿತು.

ಇದೇ ಮೊದಲ ಬಾರಿಗೆ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 79 ಸಾವಿರ ಹಾಗೂ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 24 ಸಾವಿರ ಅಂಶದ ಗಡಿ ದಾಟಿ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿವೆ.

ಸೆನ್ಸೆಕ್ಸ್ 568 ಅಂಶ ಏರಿಕೆ ಏರಿಕೆ ಕಂಡು, 79,243 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು. ದಿನದ ವಹಿವಾಟಿನಲ್ಲಿ 721 ಅಂಶ ಏರಿಕೆ ಕಂಡಿತ್ತು. ನಿಫ್ಟಿ 175 ಅಂಶ ಏರಿಕೆಯಾಗಿದ್ದು, 24,044 ಅಂಶಕ್ಕೆ ತಲುಪಿದೆ. ಇಂಟ್ರಾಡೇನಲ್ಲಿ 218 ಅಂಶ ಏರಿಕೆ ಕಂಡಿತ್ತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಅಲ್ಟ್ರಾಟೆಕ್ ಸಿಮೆಂಟ್ ಷೇರಿನ ಮೌಲ್ಯದಲ್ಲಿ ಶೇ 5ರಷ್ಟು ಏರಿಕೆಯಾಗಿದೆ. ಇನ್ಫೊಸಿಸ್, ಟಿಸಿಎಸ್, ಎನ್‌ಟಿಪಿಸಿ, ಜೆಎಸ್‌ಡಬ್ಲ್ಯು ಸ್ಟೀಲ್, ಟಾಟಾ ಮೋಟರ್ಸ್, ಭಾರ್ತಿ ಏರ್‌ಟೆಲ್, ಪವರ್ ಗ್ರಿಡ್, ಕೋಟಕ್ ಮಹೀಂದ್ರ, ಟೆಕ್ ಮಹೀಂದ್ರ ಕಂಪನಿಯ ಷೇರಿನ ಮೌಲ್ಯದಲ್ಲಿ ಹೆಚ್ಚಳವಾಗಿದೆ.

ಎಲ್ ಆ್ಯಂಡ್ ಟಿ, ಸನ್ ಫಾರ್ಮಾ, ನೆಸ್ಲೆ ಇಂಡಿಯಾ, ಎಚ್‌ಡಿಎಫ್‌ಸಿ ಬ್ಯಾಂಕ್ ಹಾಗೂ ಮಾರುತಿ ಸುಜುಕಿ ಕಂಪನಿಯ ಷೇರುಗಳು ಇಳಿಕೆ ಕಂಡಿವೆ.

'ಬಹುತೇಕ ಎಲ್ಲಾ ವಲಯದ ಷೇರುಗಳು ಏರಿಕೆ ಕಂಡಿವೆ. ಅದರಲ್ಲೂ ಐ.ಟಿ ಮತ್ತು ಎನರ್ಜಿ ವಲಯದ ಕಂಪನಿಗಳ ಷೇರಿನ ಮೌಲ್ಯದಲ್ಲಿ ಭಾರಿ ಏರಿಕೆಯಾಗಿದೆ' ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಸೋಲ್, ಟೋಕಿಯೊ, ಹಾಂಗ್‌ಕಾಂಗ್ ಮಾರುಕಟ್ಟೆಯು ಇಳಿಕೆ ದಾಖಲಿಸಿವೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಬುಧವಾರ ನಡೆದ ವಹಿವಾಟಿನಲ್ಲಿ ₹3,535 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 85.97 ಡಾಲರ್‌ಗೆ ತಲುಪಿದೆ

ಸಾವಿರಾರು ವೈದ್ಯರ ಮುಷ್ಕರ

ಬ್ರಿಟನ್: ಸಾರ್ವತ್ರಿಕ ಚುನಾವಣೆಗೆ ಒಂದು ವಾರವಷ್ಟೇ ಬಾಕಿ

ಲಂಡನ್ (ಎಪಿ): ವೇತನ ತಾರತಮ್ಯ, ಕೆಲಸದ ಸ್ಥಿತಿಗತಿ ಸುಧಾರಣೆ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ, ಬ್ರಿಟನ್‌ನಲ್ಲಿ ಸಾವಿರಾರು ಕಿರಿಯ ವೈದ್ಯರು ಗುರುವಾರ ಕೆಲಸ ಬಹಿಷ್ಕರಿಸಿ ಮುಷ್ಕರ ಆರಂಭಿಸಿದ್ದಾರೆ.

ಬ್ರಿಟನ್‌ನಲ್ಲಿ ಜುಲೈ 4ರಂದು ಸಾರ್ವತ್ರಿಕ ಚುನಾವಣೆ ನಡೆಯಲಿದ್ದು, ವೈದ್ಯರ ಈ ಮುಷ್ಕರ ಮಹತ್ವ ಪಡೆದುಕೊಂಡಿದೆ.

ಬ್ರಿಟನ್ ಸರ್ಕಾರದ ಅನುದಾನದಲ್ಲಿ ನಡೆಯುವ ರಾಷ್ಟ್ರೀಯ ಆರೋಗ್ಯ ಯೋಜನೆ (ಎನ್‌ಎಚ್‌ಎಸ್) ಅಡಿಯಲ್ಲಿ ಕೆಲಸ ಮಾಡುವ ಕಿರಿಯ ವೈದ್ಯರು ತಮ್ಮ ವೃತ್ತಿ ಜೀವನದ ಆರಂಭದಲ್ಲಿ ಅತ್ಯಂತ ಕಡಿಮೆ ವೇತನಕ್ಕೆ ಕೆಲಸ ಮಾಡುತ್ತಿದ್ದಾರೆ. ಇದನ್ನು ಖಂಡಿಸಿ, ಐದು ದಿನ ವೈದ್ಯರು ಮುಷ್ಕರ ಆರಂಭಿಸಿದ್ದಾರೆ.

ಎನ್‌ಎಚ್‌ಎಸ್‌ಗೆ ಒಳಪಟ್ಟ ಆಸ್ಪತ್ರೆ ಹಾಗೂ ಕ್ಲಿನಿಕಲ್‌ಗಳಿಗೆ ಕಿರಿಯ ವೈದ್ಯರೇ ಬೆನ್ನೆಲುಬು. ವೇತನ ವಿಚಾರಕ್ಕೆ ಸಂಬಂಧಿಸಿದಂತೆ 2022ರಿಂದಲೂ ಸರ್ಕಾರದ ಜೊತೆಗೆ ನಿರಂತರ ಸಂಘರ್ಷ ನಡೆಸುತ್ತಿದ್ದಾರೆ. ಇದೇ ಜನವರಿಯಲ್ಲಿ ಆರು ದಿನಗಳ ಕಾಲ ಮುಷ್ಕರ ನಡೆಸಿದ್ದರು. ಎನ್‌ಎಚ್‌ಎಸ್‌ನ ಇತಿಹಾಸದಲ್ಲೇ ಅತ್ಯಂತ ದೀರ್ಘಕಾಲದ ಪ್ರತಿಭಟನೆ ಇದಾಗಿದ್ದು, ಪೂರ್ವ ನಿಗದಿಯಾಗಿದ್ದ ಸಾವಿರಾರು ಶಸ್ತ್ರಚಿಕಿತ್ಸೆಗಳನ್ನು ರದ್ದುಗೊಳಿಸಲಾಗಿತ್ತು.



ಉತ್ತಮ ವೇತನ ನೀಡುವಂತೆ ಆಗ್ರಹಿಸಿ ಬ್ರಿಟನ್‌ನ ವೈದ್ಯಕೀಯ ಒಕ್ಕೂಟದ ಸದಸ್ಯರು ಲಂಡನ್‌ನ ಸೇಂಟ್ ಥಾಮಸ್ ಆಸ್ಪತ್ರೆ ಮುಂಭಾಗದಲ್ಲಿ ಫಲಕ ಪ್ರದರ್ಶಿಸಿ ಗುರುವಾರ ಪ್ರತಿಭಟನೆ ನಡೆಸಿದರು —ಎಎಫ್‌ಪಿ ಚಿತ್ರ

ಗುರುವಾರದಿಂದಲೇ ಮುಷ್ಕರ ಆರಂಭಗೊಂಡಿದ್ದು, ಮಂಗಳವಾರದವರೆಗೆ ನಡೆಯಲಿದೆ. ಬ್ರಿಟನ್‌ನ ಸಂಸತ್‌ನ ಕೆಳಮನೆಯಾದ 'ಹೌಸ್ ಆಫ್ ಕಾಮನ್ಸ್'ಗೆ ಮತದಾನ ನಡೆಯುವ ಎರಡು ದಿನ ಮುಂಚಿತವಾಗಿ ಮುಷ್ಕರ ಕೊನೆಗೊಳಿಸುವ ಮೂಲಕ ಜನರ ಮೇಲೂ ಒತ್ತಡತಂತ್ರ ಹೇರಲು ವೈದ್ಯರು ಮುಂದಾಗಿದ್ದಾರೆ.

ಬ್ರಿಟನ್‌ನ ವೈದ್ಯಕೀಯ ಒಕ್ಕೂಟದ ಪ್ರಕಾರ, 'ಕಳೆದ 15 ವರ್ಷಗಳಲ್ಲಿ ವೇತನದಲ್ಲಿ ಇಳಿಕೆ ಕಂಡಿದ್ದು, ಶೇಕಡ 35ರಷ್ಟು ವೇತನ ಏರಿಕೆಗೆ ಬೇಡಿಕೆ ಮುಂದಿಡಲಾಗಿದೆ. ಹೊಸತಾಗಿ ಪರಿಣತ ವೈದ್ಯರು ಪ್ರತಿ ತಾಸಿಗೆ ₹1,583 (15 ಪೌಂಡ್) ವೇತನ ಪಡೆಯುತ್ತಿದ್ದು, ಬ್ರಿಟನ್‌ನ ಎನ್‌ಎಚ್‌ಎಸ್‌ನ ಅಡಿಯಲ್ಲಿ ಕನಿಷ್ಠ ವೇತನ ಪ್ರತಿ ತಾಸಿಗೆ ₹1,055 (10 ಪೌಂಡ್)ನಷ್ಟಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದೆ.

ಎನ್‌ಎಚ್‌ಎಸ್‌ನ ಕಿರಿಯ ವೈದ್ಯರ ಒಕ್ಕೂಟದ ಉಪಾಧ್ಯಕ್ಷ ಡಾ. ಸುಮಿ ಮಣಿರಾಜನ್ ಪ್ರಕಾರ, 'ಎನ್‌ಎಚ್‌ಎಸ್‌ಗೆ ಕಡಿಮೆ ಅನುದಾನ ನೀಡುತ್ತಿರುವ ಕಾರಣ, ಕಿರಿಯ ವೈದ್ಯರು ಉತ್ತಮ ವೇತನ ಹುಡುಕಿಕೊಂಡು ಬೇರೆ ದೇಶಗಳಿಗೆ ತೆರಳುತ್ತಿದ್ದಾರೆ. ನಾನು ಲಂಡನ್‌ನಲ್ಲಿ ತರಬೇತಿ ನೀಡಿದ ಹಲವು ವೈದ್ಯರು ನ್ಯೂಜಿಲೆಂಡ್‌ಗೆ ತೆರಳಿದ್ದಾರೆ. ನಾನು ಕೂಡ ಅವರ ರೀತಿ ಏಕೆ ಮಾಡಬಾರದು ಎಂದು ಯೋಚಿಸುತ್ತಿದ್ದೇನೆ' ಎಂದು ಸರ್ಕಾರವನ್ನು ಖಾರವಾಗಿ ಪ್ರಶ್ನಿಸಿದ್ದಾರೆ.

ಪನ್ನೂ ಹತ್ಯೆಗೆ ಸಂಚು: ತನಿಖಾ ವಿವರ ನಿರೀಕ್ಷೆ –ಅಮೆರಿಕ

ವಾಷಿಂಗ್ಟನ್ (ಪಿಟಿಐ): 'ಸಿಖ್ ಪ್ರತ್ಯೇಕತಾವಾದಿ ನಾಯಕ ಗುರ್‌ಪತ್ವಂತ್ ಸಿಂಗ್ ಪನ್ನೂ ಹತ್ಯೆಗೆ ನಡೆಸಿದ್ದ ಸಂಚಿನಲ್ಲಿ ಭಾರತದ ಅಧಿಕಾರಿಯೊಬ್ಬರ ಪಾತ್ರವಿದೆ ಎಂಬ ಆರೋಪದ ಬಗ್ಗೆ ಭಾರತ ಕೈಗೊಂಡಿರುವ ತನಿಖೆ ವಿವರಗಳನ್ನು ನಿರೀಕ್ಷಿಸುತ್ತಿದ್ದೇವೆ' ಎಂದು ಅಮೆರಿಕ ಹೇಳಿದೆ.

ನ್ಯೂಯಾರ್ಕ್‌ನಲ್ಲಿ ಪನ್ನೂ ಹತ್ಯೆಗೆ ನಡೆದಿದ್ದ ಸಂಚಿನ ಕುರಿತು ಭಾರತೀಯ ಪ್ರಜೆ ನಿಖಿಲ್ ಗುಪ್ತಾ ಎಂಬಾತ ಭಾರತದ ಅಧಿಕಾರಿಯೊಬ್ಬರ ಜೊತೆಗೂಡಿ ಕೆಲಸ ಮಾಡುತ್ತಿದ್ದ ಎಂದು ಕಳೆದ ನವೆಂಬರ್‌ನಲ್ಲಿ ಅಮೆರಿಕದ ಒಕ್ಕೂಟದ ಅಧಿಕಾರಿಯೊಬ್ಬರು ಆರೋಪಿಸಿದ್ದರು.

ಭಯೋತ್ಪಾದನೆಯ ಆರೋಪವಿದ್ದ ಪನ್ನೂ ಅಮೆರಿಕ ಮತ್ತು ಕೆನಡಾದ ಪೌರತ್ವವನ್ನು ಹೊಂದಿದ್ದ. ಜೆಕ್ ರಿಪಬ್ಲಿಕ್‌ನಲ್ಲಿ ಕಳೆದ ವರ್ಷ ಜೂನ್‌ನಲ್ಲಿ ಗುಪ್ತಾನನ್ನು ಬಂಧಿಸಲಾಗಿದ್ದು, ಜೂನ್ 14ರಂದು ಅಮೆರಿಕದ ಅಧಿಕಾರಿಗಳಿಗೆ ಒಪ್ಪಿಸಲಾಗಿತ್ತು.

'ನಾವು ತನಿಖೆ ನಡೆಸುತ್ತಿದ್ದೇವೆ ಎಂದು ಭಾರತದ ಅಧಿಕಾರಿಗಳು ತಿಳಿಸಿದ್ದಾರೆ. ನಾವು ತನಿಖೆಯ ಫಲಿತಾಂಶದ ನಿರೀಕ್ಷೆಯಲ್ಲಿದ್ದೇವೆ' ಎಂದು ವಿದೇಶಾಂಗ ಇಲಾಖೆಯ ವಕ್ತಾರ ಮ್ಯಾಥ್ಯೂ ಮಿಲ್ಲರ್ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು. ಅಮೆರಿಕದ ಆರೋಪ ಕುರಿತಂತೆ ತನಿಖೆ ನಡೆಸಲು ಭಾರತ ಸರ್ಕಾರವು ಉನ್ನತಾಧಿಕಾರ ತನಿಖಾ ಸಮಿತಿಯನ್ನು ರಚಿಸಿದೆ.

ಜಿಯೊ ಗ್ರಾಹಕರಿಗೆ ಬೆಲೆ ಏರಿಕೆ ಬಿಸಿ

ನವದೆಹಲಿ (ಪಿಟಿಐ): ಜುಲೈ 3ರಿಂದ ಜಾರಿಗೆ ಬರುವಂತೆ ಮೊಬೈಲ್ ಸೇವೆಗಳ ಶುಲ್ಕವನ್ನು ಶೇ 12ರಿಂದ ಶೇ 27ರಷ್ಟು ಏರಿಕೆ ಮಾಡಲಾಗುವುದು ಎಂದು ರಿಲಯನ್ಸ್ ಜಿಯೊ ಇನ್ಫೊಕಾಮ್ ಕಂಪನಿ ತಿಳಿಸಿದೆ.

ಎರಡೂವರೆ ವರ್ಷಗಳ ಬಳಿಕ ಜಿಯೊ, ಶುಲ್ಕ ಹೆಚ್ಚಳಕ್ಕೆ ಮುಂದಾಗಿದೆ. 5ಜಿ ತರಂಗಾಂತರ ಹರಾಜು ಪ್ರಕ್ರಿಯೆಯೂ ಮುಗಿದಿದೆ. ಹಾಗಾಗಿ, ಭಾರ್ತಿ ಏರ್‌ಟೆಲ್ ಮತ್ತು ವೊಡಾಫೋನ್ ಐಡಿಯಾ ಕಂಪನಿಗಳು ಕೂಡ ಶುಲ್ಕ ಏರಿಕೆ ಮಾಡುವುದು ಸನ್ನಿಹಿತವಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

'5ಜಿ ಸೇವೆ ಹಾಗೂ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದಲ್ಲಿ ಹೂಡಿಕೆ ಮೂಲಕ ದೂರಸಂಪರ್ಕ ವಲಯದಲ್ಲಿ ಹೊಸ ಅನ್ವೇಷಣೆ ಮತ್ತು ಸುಸ್ಥಿರ ಬೆಳವಣಿಗೆಗೆ ಒತ್ತು ನೀಡಬೇಕಿದೆ. ಹಾಗಾಗಿ, ಶುಲ್ಕ ಏರಿಕೆಯ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ರಿಲಯನ್ಸ್ ಜಿಯೊ ಇನ್ಫೊಕಾಮ್ ಮುಖ್ಯಸ್ಥ ಆಕಾಶ್ ಎಂ. ಅಂಬಾನಿ ತಿಳಿಸಿದ್ದಾರೆ.

₹666 ಮೊತ್ತದ ಅನಿಯಮಿತ ಯೋಜನೆಯ ದರವನ್ನು (84 ದಿನ) ₹799ಕ್ಕೆ ಹೆಚ್ಚಿಸಿದೆ. ₹155 ಇದ್ದ ರೀಚಾರ್ಜ್ ಪ್ಲಾನ್ ದರ ₹189ಕ್ಕೆ ಏರಲಿದೆ.

75 ಜಿಬಿ ಡೇಟಾ ಸೇವೆಯ ಪೋಸ್ಟ್‌ಪೇಯ್ಡ್ ದರವನ್ನು ₹399ರಿಂದ ₹449ಕ್ಕೆ ಹೆಚ್ಚಿಸಿದೆ.

ಎರಡು ಹೊಸ ಆ್ಯಪ್: ಜಿಯೊ ಸೇಫ್ ಮತ್ತು ಜಿಯೊ ಟ್ರಾನ್ಸ್‌ಲೇಟ್ ಎಂಬ ಎರಡು ಅಪ್ಲಿಕೇಷನ್‌ಗಳನ್ನು ಬಿಡುಗಡೆಗೊಳಿಸಿದೆ. ಜಿಯೊ ಸೇಫ್‌ನ ಮಾಸಿಕ ದರ ₹199 ಆಗಿದೆ. ಸುರಕ್ಷಿತ ಕರೆ, ಮೆಸೇಜಿಂಗ್ ಮತ್ತು ಫೈಲ್ ಟ್ರಾನ್ಸ್‌ಫರ್ ಸೇವೆಯನ್ನು ಒದಗಿಸಲಿದೆ.

ಜಿಯೊ ಟ್ರಾನ್ಸ್‌ಲೇಟ್ ಆ್ಯಪ್‌ನಲ್ಲಿ ತಿಂಗಳಿಗೆ ₹99 ನೀಡಿದರೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಮೂಲಕ ಧ್ವನಿ, ಕರೆ, ಸಂದೇಶವನ್ನು ಭಾಷಾಂತರ ಮಾಡಬಹುದಾಗಿದೆ. ಜಿಯೊ ಬಳಕೆದಾರರಿಗೆ ಒಂದು ವರ್ಷದವರೆಗೆ ಈ ಎರಡೂ ಆ್ಯಪ್‌ಗಳು ಉಚಿತವಾಗಿ ದೊರೆಯಲಿವೆ.

ಕೇಜ್ರಿವಾಲ್ ತಲೆಬಾಗುವುದಿಲ್ಲ: ಮಾನ್

ಚಂಡೀಗಢ (ಪಿಟಿಐ): ದೆಹಲಿ ಮುಖ್ಯಮಂತ್ರಿ, ಎಎಪಿ ರಾಷ್ಟ್ರೀಯ ಸಂಚಾಲಕರೂ ಆದ ಅರವಿಂದ ಕೇಜ್ರಿವಾಲ್ ಅವರ ಮೇಲೆ ಎಷ್ಟೇ ದೌರ್ಜನ್ಯ ನಡೆದರೂ ಅವರು ಎಂದಿಗೂ ತಲೆಬಾಗುವುದಿಲ್ಲ ಎಂದು ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಗುರುವಾರ ಹೇಳಿದ್ದಾರೆ.



ಭಗವಂತ ಮಾನ್

ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಭ್ರಷ್ಟಾಚಾರ ಪ್ರಕರಣದಲ್ಲಿ ಆಪಾದಿತರಾದ ಕೇಜ್ರಿವಾಲ್ ಅವರನ್ನು ಸಿಬಿಐ ಬಂಧಿಸಿದ ಒಂದು ದಿನದ ನಂತರ ಮಾನ್ ಅವರು ಹೀಗೆ ಹೇಳಿದ್ದಾರೆ.

ಕೇಜ್ರಿವಾಲ್ ಅವರ ಚಿತ್ರವನ್ನು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಮಾನ್, 'ಈ ಚಿತ್ರವು ಸರ್ವಾಧಿಕಾರದ ವಿರುದ್ಧದ ಹೋರಾಟವನ್ನು ಪ್ರತಿನಿಧಿಸುತ್ತದೆ. ನೀವು ಎಷ್ಟೇ ದೌರ್ಜನ್ಯ ಮಾಡಿದರೂ ಕೇಜ್ರಿವಾಲ್ ತಲೆಬಾಗುವುದಿಲ್ಲ. ಇ.ಡಿ ಜಾಮೀನು ನೀಡಿದ ನಂತರ ಸಿಬಿಐ ಬಂಧಿಸಿರುವುದು, ಬಿಜೆಪಿಯ ಆಜ್ಞೆಯ ಮೇರೆಗೆ ನಡೆದಿರುವ ಸಿಬಿಐನ ದುರುಪಯೋಗ' ಎಂದು ಆರೋಪಿಸಿದ್ದಾರೆ.

ಕೇಂದ್ರ ತನಿಖಾ ಸಂಸ್ಥೆಗಳು ಬಿಜೆಪಿಯ ನಿರ್ದೇಶನದ ಅನುಸಾರ ತಮ್ಮ ನಾಯಕರ ವಿರುದ್ಧ ದುರುದ್ದೇಶ ಮತ್ತು ರಾಜಕೀಯ ಪ್ರೇರಿತವಾಗಿ ನಡೆದುಕೊಳ್ಳುತ್ತಿವೆ ಎಂದು ಆಮ್ ಆದ್ಮಿ ಪಕ್ಷ (ಎಎಪಿ) ಆರೋಪಿಸಿದೆ.

ಕೇಜ್ರಿವಾಲ್ ಅವರನ್ನು ಬುಧವಾರ ಬಂಧಿಸಿದ ನಂತರ ದೆಹಲಿ ನ್ಯಾಯಾಲಯವು ಅವರನ್ನು ಮೂರು ದಿನ ಸಿಬಿಐ ಕಸ್ಟಡಿಗೆ ನೀಡಿದೆ. ಕೇಜ್ರಿವಾಲ್ ತಾನು ನಿರಪರಾಧಿ ಎಂದು ನ್ಯಾಯಾಲಯದಲ್ಲಿ ಹೇಳಿಕೆ ನೀಡಿದ್ದಾರೆ.

ಆಸ್ಪತ್ರೆಯಿಂದ ಮನೆಗೆ ಆತಿಶಿ

ನವದೆಹಲಿ (ಪಿಟಿಐ): ದೆಹಲಿ ನಗರದಲ್ಲಿ ನೀರಿನ ಅಭಾವದ ವಿರುದ್ಧ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದ ವೇಳೆ ಆರೋಗ್ಯ ಹದಗೆಟ್ಟು ಎಲ್‌ಎನ್‌ಜೆಪಿ ಆಸ್ಪತ್ರೆಗೆ ಸೇರಿದ್ದ ದೆಹಲಿ ಜಲ ಸಚಿವೆ ಆತಿಶಿ ಗುರುವಾರ ಬೆಳಿಗ್ಗೆ ಆಸ್ಪತ್ರೆಯಿಂದ ಮನೆಗೆ ಮರಳಿದ್ದಾರೆ ಎಂದು ಆಸ್ಪತ್ರೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬಿಜೆಪಿ ಆಡಳಿತದಲ್ಲಿರುವ ಹರಿಯಾಣ ಸರ್ಕಾರವು ದೆಹಲಿಯ ಪಾಲಿನ ನೀರು ಹರಿಸಬೇಕು ಎಂದು ಒತ್ತಾಯಿಸಿ ಐದು ದಿನ ಉಪವಾಸ ಕೈಗೊಂಡಿದ್ದ ಎಎಪಿ ನಾಯಕಿ ಮತ್ತು ಜಲಸಚಿವೆ ಆತಿಶಿ ಅವರನ್ನು ರಕ್ತದಲ್ಲಿನ ಸಕ್ಕರೆ ಪ್ರಮಾಣ ಕಡಿಮೆಯಾಗಿದ್ದ ಕಾರಣ ಮಂಗಳವಾರ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಅಕ್ಷರ್ ಪಟೇಲ್, ಕುಲದೀಪ್ ಮೋಡಿ • ರೋಹಿತ್, ಸೂರ್ಯಕುಮಾರ್ ಅಬ್ಬರ • ಇಂಗ್ಲೆಂಡ್‌ಗೆ ನಿರಾಸೆ

ಫೈನಲ್‌ಗೆ ಲಗ್ಗೆಯಿಟ್ಟ ಭಾರತ ತಂಡ

ಪ್ರಜಾವಾಣಿ ವಾರ್ತೆ

ಗಯಾನಾ: ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡವು ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಫೈನಲ್‌ಗೆ ಲಗ್ಗೆ ಇಟ್ಟಿತು.

ಪ್ರಾವಿಡೆನ್ಸ್ ಕ್ರೀಡಾಂಗಣದಲ್ಲಿ ಗುರುವಾರ ಮಧ್ಯರಾತ್ರಿ (ಭಾರತೀಯ ಕಾಲಮಾನ) ಮುಗಿದ ಸೆಮಿಫೈನಲ್ ಪಂದ್ಯದಲ್ಲಿ 'ಹಾಲಿ ಚಾಂಪಿಯನ್' ಇಂಗ್ಲೆಂಡ್ ತಂಡವನ್ನು 68 ರನ್‌ಗಳಿಂದ ಮಣಿಸಿ ಪ್ರಶಸ್ತಿ ಸುತ್ತಿಗೆ ಪ್ರವೇಶಿಸಿತು. ಮಳೆಯಿಂದ ವಿಳಂಬವಾಗಿ ಆರಂಭವಾದ ಪಂದ್ಯದಲ್ಲಿ ಟಾಸ್ ಗೆದ್ದ ಇಂಗ್ಲೆಂಡ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಭಾರತ ತಂಡವು 172 ರನ್‌ಗಳ ಗೆಲುವಿನ ಗುರಿ ಒಡ್ಡಿತು.

ಎಡಗೈ ಸ್ಪಿನ್ ಜೋಡಿ ಅಕ್ಷರ್ ಪಟೇಲ್ (23ಕ್ಕೆ3) ಮತ್ತು ಕುಲದೀಪ್ ಯಾದವ್ (19ಕ್ಕೆ3) ಮೋಡಿಯ ಮುಂದೆ ಇಂಗ್ಲೆಂಡ್ ತಂಡವು ಕುಸಿಯಿತು. ನಾಯಕ ಜೋಸ್ ಬಟ್ಲರ್ ಸಹಿತ ಪ್ರಮುಖ ಬ್ಯಾಟರ್‌ಗಳು ಮತ್ತು ಆಲ್‌ರೌಂಡರ್‌ಗಳು ವಿಫಲರಾದರು. ಇಂಗ್ಲೆಂಡ್ 16.4 ಓವರ್‌ಗಳಲ್ಲಿ 103 ರನ್ ಗಳಿಸಿತು. ಭಾರತ ತಂಡವು ಈ ಟೂರ್ನಿಯಲ್ಲಿ ಅಜೇಯವಾಗಿ ಉಳಿದು ಅಂತಿಮ ಪಂದ್ಯಕ್ಕೆ ಪ್ರವೇಶಿಸಿತು.

2007ರಲ್ಲಿ ಮೊದಲ ಬಾರಿ ನಡೆದಿದ್ದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ಪ್ರಶಸ್ತಿ ಜಯಿಸಿತ್ತು. ಈಗ ಮತ್ತೆ ಚಾಂಪಿಯನ್ ಆಗುವ ಅವಕಾಶ ಲಭಿಸಿದೆ. ಶನಿವಾರ ನಡೆಯುವ ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ರೋಹಿತ್ ಪಡೆ ಎದುರಿಸಲಿದೆ.

ರೋಹಿತ್ ಅರ್ಧಶತಕ: ನಾಯಕ ರೋಹಿತ್ ಶರ್ಮಾ (57; 39ಎ, 4x6, 6x2) ಮತ್ತು ಸೂರ್ಯಕುಮಾರ್ ಯಾದವ್ (47; 36ಎ, 4x4, 6x2) ಅವರ ಬ್ಯಾಟಿಂಗ್ ಬಲದಿಂದ ಭಾರತ ತಂಡವು ಪಂದ್ಯದಲ್ಲಿ 7 ವಿಕೆಟ್‌ಗೆ 171 ರನ್ ಗಳಿಸಿತು.



ಅರ್ಧಶತಕ ದಾಖಲಿಸಿದ ಭಾರತ ತಂಡದ ನಾಯಕ ರೋಹಿತ್ ಶರ್ಮಾ –ಎಎಫ್‌ಪಿ ಚಿತ್ರ

ಪ್ರಾವಿಡೆನ್ಸ್ ಕ್ರೀಡಾಂಗಣದಲ್ಲಿ ಆರಂಭದಲ್ಲಿ ಮಳೆಯದ್ದೇ ಆಟ. ರಾತ್ರಿ 8ಕ್ಕೆ (ಭಾರತೀಯ ಕಾಲಮಾನ) ಆರಂಭವಾಗಬೇಕಿದ್ದ ಪಂದ್ಯವು 75 ನಿಮಿಷವಿಳಂಬವಾಗಿಆರಂಭವಾಯಿತು.

ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡವು 8 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 65 ರನ್ ಗಳಿಸಿದ್ದಾಗ ಮತ್ತೆ ಮಳೆ ಸುರಿಯಿತು. ಅರ್ಧ ಗಂಟೆ ಬಳಿಕ ಮತ್ತೆ ಆಟ ಮುಂದುವರಿಯಿತು.

ಈ ಪಂದ್ಯದಲ್ಲಿಯೂ ವಿರಾಟ್ ಕೊಹ್ಲಿ (9 ರನ್) ಅವರ ವೈಫಲ್ಯ ಮುಂದುವರಿಯಿತು. ರೋಹಿತ್ ಜೊತೆಗೆ ಇನಿಂಗ್ಸ್ ಆರಂಭಿಸಿದ ಕೊಹ್ಲಿ ಒಂದು ಸಿಕ್ಸರ್ ಹೊಡೆದು ಭರವಸೆ ಮೂಡಿಸಿದ್ದರು. ಆದರೆ ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿ ರೀಸ್ ಟಾಪ್ಲಿ ಹಾಕಿದ ಮಿಂಚಿದ ವೇಗದ ನೇರ ಎಸೆತಕ್ಕೆ ಕೊಹ್ಲಿ ಕ್ಲೀನ್‌ಬೌಲ್ಡ್ ಆದರು.

ರಿಷಭ್ ಪಂತ್ (4 ರನ್) ಕೇವಲ 6 ಎಸೆತಗಳನ್ನು ಎದುರಿಸಿ ಔಟಾದರು. ಸ್ಯಾಮ್ ಕರನ್ ಎಸೆತದಲ್ಲಿ ರಿಷಭ್ ದೊಡ್ಡ ಹೊಡೆತಕ್ಕೆ ಯತ್ನಿಸಿದರು. ಜಾನಿ ಬೆಸ್ಟೊ ಕ್ಯಾಚ್ ಪಡೆದು ಸಂಭ್ರಮಿಸಿದರು.

ಆದರೆ, ರೋಹಿತ್ ಶರ್ಮಾ ಅವರ ಚೆಂದದ ಬ್ಯಾಟಿಂಗ್ ಗಮನ ಸೆಳೆಯಿತು. ಟೂರ್ನಿಯಲ್ಲಿ ಮೂರನೇ ಬಾರಿ ಅರ್ಧಶತಕ ದಾಖಲಿಸಿದರು. ರೋಹಿತ್ ಜೊತೆಗೂಡಿದ ಸೂರ್ಯಕುಮಾರ್ ಆತ್ಮವಿಶ್ವಾಸದಿಂದ ಆಟವಾಡಿದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ 73 (50ಎ) ರನ್ ಸೇರಿಸಿದರು.


ಹಾರ್ದಿಕ್ ಪಾಂಡ್ಯ (23; 13ಎ) ಮತ್ತು ರವೀಂದ್ರ ಜಡೇಜ (ಔಟಾಗದೇ 17; 9ಎ) ಉಪಯುಕ್ತ ಕಾಣಿಕೆ ನೀಡಿ ತಂಡದ ಮೊತ್ತ ಹೆಚ್ಚಿಸಿದರು. ಇಂಗ್ಲೆಂಡ್‌ನ ಕ್ರಿಸ್ ಜೋರ್ಡನ್ ಮೂರು ವಿಕೆಟ್ ಪಡೆದರು. ರೀಸ್ ಟಾಪ್ಲಿ, ಜೋಫ್ರಾ ಆರ್ಚರ್, ಸ್ಯಾಮ್ ಕರನ್, ಆದಿಲ್ ರಶೀದ್ ತಲಾ ಒಂದು ವಿಕೆಟ್ ಪಡೆದರು.

ಸ್ಕೋರ್ ಕಾರ್ಡ್

ಭಾರತ
7ಕ್ಕೆ 171 (20 ಓವರ್‌ಗಳಲ್ಲಿ)
ರೋಹಿತ್ ಬಿ ರಶೀದ್ 57 (39ಎ, 4x6, 6x2)
ವಿರಾಟ್ ಬಿ ಟಾಪ್ಲಿ 9 (9ಎ, 6x1)
ಪಂತ್ ಸಿ ಬೆಸ್ಟೊ ಬಿ ಕರನ್ 4 (6ಎ)
ಸೂರ್ಯಕುಮಾರ್ ಸಿ ಜೋರ್ಡನ್ ಬಿ ಆರ್ಚರ್ 47 (36ಎ, 4x4, 6x2)
ಪಾಂಡ್ಯ ಸಿ ಕರನ್ ಬಿ ಜೋರ್ಡನ್ 23 (13ಎ, 4x1, 6x2)
ಜಡೇಜ ಔಟಾಗದೇ 17 (9ಎ, 4x2)
ದುಬೆ ಸಿ ಬಟ್ಲರ್ ಬಿ ಜೋರ್ಡನ್ 0 (1ಎ)
ಅಕ್ಷರ್ ಸಿ ಸಾಲ್ಟ್ ಬಿ ಜೋರ್ಡನ್ 10 (6ಎ, 6x1)
ಅರ್ಷದೀಪ್ ಸಿಂಗ್ ಔಟಾಗದೇ 1 (1ಎ)
ಇತರೆ: 3 (ಲೆಗ್‌ಬೈ 2, ವೈಡ್ 1)
ವಿಕೆಟ್ ಪತನ: 1-19 (ವಿರಾಟ್ ಕೊಹ್ಲಿ, 2.4), 2-40 (ರಿಷಭ್ ಪಂತ್, 5.2), 3-113 (ರೋಹಿತ್ ಶರ್ಮಾ, 13.4), 4-124 (ಸೂರ್ಯಕುಮಾರ್ ಯಾದವ್, 15.4), 5-146 (ಹಾರ್ದಿಕ್ ಪಾಂಡ್ಯ, 17.4), 6-146 (ಶಿವಂ ದುಬೆ, 17.5), 7-170 (ಅಕ್ಷರ್ ಪಟೇಲ್, 19.5)
ಬೌಲಿಂಗ್: ರೀಸ್ ಟಾಪ್ಲಿ 3-0-25-1, ಜೋಫ್ರಾ ಆರ್ಚರ್ 4-0-33-1, ಸ್ಯಾಮ್ ಕರನ್ 2-0-25-1, ಆದಿಲ್ ರಶೀದ್ 4-0-25-1, ಕ್ರಿಸ್ ಜೋರ್ಡನ್ 3-0-37-3, ಲಿಯಾಮ್ ಲಿವಿಂಗ್‌ಸ್ಟೋನ್ 4-0-24-0

ಇಂಗ್ಲೆಂಡ್
103 (16.4 ಓವರ್‌ಗಳಲ್ಲಿ)
ಸಾಲ್ಟ್ ಬಿ ಬೂಮ್ರಾ 5 (8ಎ)
ಬಟ್ಲರ್ ಸಿ ಪಂತ್ ಬಿ ಪಟೇಲ್ 23 (15ಎ, 4x4)
ಮೋಯಿನ್ ಅಲಿ ಸ್ಟಂಪ್ ಪಂತ್ ಬಿ ಪಟೇಲ್ 8 (10ಎ)
ಬೆಸ್ಟೊ ಬಿ ಪಟೇಲ್ 0 (3ಎ)
ಬ್ರೂಕ್ ಬಿ ಕುಲದೀಪ್ 25 (19ಎ, 4x3)
ಕರನ್ ಎಲ್‌ಬಿಡಬ್ಲ್ಯು ಬಿ ಕುಲದೀಪ್ 2 (4ಎ)
ಲಿವಿಂಗ್‌ಸ್ಟೋನ್ ರನ್‌ಔಟ್ (ಕುಲದೀಪ್/ಪಟೇಲ್) 11 (16ಎ)
ಜೋರ್ಡನ್ ಎಲ್‌ಬಿಡಬ್ಲ್ಯು ಕುಲದೀಪ್ 1 (5ಎ)
ಆರ್ಚರ್ ಎಲ್‌ಬಿಡಬ್ಲ್ಯು 21 (15ಎ, 4x1, 6x2)
ರಶೀದ್ ರನ್‌ಔಟ್ (ಯಾದವ್) 2 (2ಎ)
ಟಾಪ್ಲಿ ಔಟಾಗದೇ 3 (3)
ಇತರೆ: 2 (ಲೆಗ್‌ಬೈ 2)
ವಿಕೆಟ್ ಪತನ: 1-26 (ಜೋಸ್ ಬಟ್ಲರ್, 3.1), 2-34 (ಫಿಲ್ ಸಾಲ್ಟ್, 4.4), 3-35 (ಜಾನಿ ಬೆಸ್ಟೊ, 5.1), 4-46 ಮೋಯಿನ್ ಅಲಿ, 7.1), 5-49 (ಸ್ಯಾಮ್ ಕರನ್, 8.1), 6-68 (ಹ್ಯಾರಿ ಬ್ರೂಕ್, 10.4), 7-72 (ಕ್ರಿಸ್ ಜೋರ್ಡನ್, 12.2), 8-86 (ಲಿಯಾಮ್ ಲಿವಿಂಗ್‌ಸ್ಟೋನ್, 14.5), 9-88 (ಆದಿಲ್ ರಶೀದ್, 15.2), 10-103 (ಜೋಫ್ರಾ ಆರ್ಚರ್, 16.4)
ಬೌಲಿಂಗ್: ಅರ್ಷದೀಪ್ ಸಿಂಗ್ 2-0-17-0, ಜಸ್‌ಪ್ರೀತ್ ಬೂಮ್ರಾ 2.4-0-12-2, ಅಕ್ಷರ್ ಪಟೇಲ್ 4-0-23-3, ಕುಲದೀಪ್ ಯಾದವ್ 4-0-19-3, ರವೀಂದ್ರ ಜಡೇಜ 3-0-16-0, ಹಾರ್ದಿಕ್ ಪಾಂಡ್ಯ 1-0-14-0

ಫಲಿತಾಂಶ: ಭಾರತಕ್ಕೆ 68 ರನ್‌ಗಳ ಜಯ



ಜಾನಿ ಬೆಸ್ಟೊ ಅವರ ವಿಕೆಟ್ ಪಡೆದ ಅಕ್ಷರ್ ಪಟೇಲ್ (ಎಡ) ಅವರನ್ನು ಅಭಿನಂದಿಸಿದ ಸೂರ್ಯಕುಮಾರ್ ಯಾದವ್ –ಎಎಫ್‌ಪಿ ಚಿತ್ರ

ಐಸಿಸಿ, ಭಾರತ ವಿರುದ್ಧ ವಾನ್ ಟೀಕೆ

ಲಂಡನ್ (ಪಿಟಿಐ): ಈ ಬಾರಿಯ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯನ್ನು ಭಾರತ ತಂಡಕ್ಕಾಗಿಯೇ ಮಾಡಲಾಗುತ್ತಿದೆ. ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಸ್ವಲ್ಪವಾದರೂ ನ್ಯಾಯಸಮ್ಮತವಾಗಿರಬೇಕಿತ್ತು ಎಂದು ಇಂಗ್ಲೆಂಡ್ ಕ್ರಿಕೆಟ್ ತಂಡದ ಮಾಜಿ ನಾಯಕ ಮತ್ತು ವೀಕ್ಷಕ ವಿವರಣೆಗಾರ ಮೈಕೆಲ್ ವಾನ್ ಟೀಕಿಸಿದ್ದಾರೆ.

ಆರ್ಥಿಕವಾಗಿ ಬಲಾಢ್ಯವಾಗಿರುವ ಬಿಸಿಸಿಐ ಮತ್ತು ಭಾರತವು ಐಸಿಸಿ ಮೇಲೆ ಪ್ರಭಾವ ಬೀರುತ್ತಿದೆ ಎಂದೂ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಈ ಟೂರ್ನಿಯು ಭಾರತ ತಂಡದ್ದೇ ಆಗಿದೆ ಅಲ್ಲವೇ? ತಮಗೆ ಅನುಕೂಲವಾದ ಸಮಯಕ್ಕೆ ಪಂದ್ಯಗಳನ್ನು ನಿಗದಿ ಮಾಡಿಸಿಕೊಂಡಿದ್ದಾರೆ. ವೇಳಾಪಟ್ಟಿಯು ಅವರ ಅನುಕೂಲಕ್ಕೆ ತಕ್ಕಂತೆ ಇದೆ. ಭಾರತ ತಂಡವು ಆಡಿದ ಪ್ರತಿಯೊಂದು ಪಂದ್ಯವೂ ಇಲ್ಲಿ (ಆತಿಥ್ಯದ ತಾಣ) ಬೆಳಗಿನ ಅವಧಿಯಲ್ಲಿಯೇ ಆಯೋಜನೆಗೊಂಡಿವೆ. ಭಾರತದಲ್ಲಿ ಜನರು ರಾತ್ರಿ ಹೊತ್ತು ಟಿ.ವಿ. ಯಲ್ಲಿ ಪಂದ್ಯದ ನೇರಪ್ರಸಾರ ನೋಡಲು ಸಾಧ್ಯವಾಗಲೆಂದು ಈ ರೀತಿ ಮಾಡಲಾಗಿದೆ. ಅದೇ ರೀತಿ ಅವರ (ಭಾರತ) ಸೆಮಿಫೈನಲ್ ಕೂಡ ಬೆಳಿಗ್ಗೆಯೇ ಇದೆ' ಎಂದು 'ಯೂಟ್ಯೂಬ್ ಚಾನೆಲ್ ಕ್ಲಬ್ ಕ್ಲಬ್ ಪ್ರಯರೀ ಫೈರ್' ಪಾಡ್‌ಕಾಸ್ಟ್‌ನಲ್ಲಿ ಅವರು ಆಸ್ಟ್ರೇಲಿಯಾದ ದಿಗ್ಗಜ ಆ್ಯಡಂ ಗಿಲ್‌ಕ್ರಿಸ್ಟ್ ಅವರೊಂದಿಗಿನ ಮಾತುಕತೆಯಲ್ಲಿ ಹೇಳಿದ್ದಾರೆ.

ಅಫ್ಗಾನಿಸ್ತಾನ ವಿರುದ್ಧ 9 ವಿಕೆಟ್ ಗೆಲುವಿನೊಡನೆ ಫೈನಲ್‌ಗೆ

ಸೆಮಿ 'ಗುಮ್ಮ' ಮೆಟ್ಟಿನಿಂತ ದಕ್ಷಿಣ ಆಫ್ರಿಕಾ

ತರೂಬಾ (ಟ್ರಿನಿಡಾಡ್), (ಪಿಟಿಐ): ಅಫ್ಗಾನಿಸ್ತಾನ ತಂಡದ ಅಮೋಘ ಯಶಸ್ಸಿನ ಓಟಕ್ಕೆ ಗುರುವಾರ ನಡೆದ ಸೆಮಿಫೈನಲ್‌ನಲ್ಲಿ ಸುಲಭವಾಗಿ ತಡೆಹಾಕಿದ ದಕ್ಷಿಣ ಆಫ್ರಿಕಾ ತಂಡ ಪ್ರಪ್ರಥಮ ಬಾರಿ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಫೈನಲ್ ಪ್ರವೇಶಿಸಿತು.

ಟೂರ್ನಿಯಲ್ಲಿ ಪ್ರಬಲ ತಂಡಗಳನ್ನು ಮಣಿಸಿ ಈ ಹಂತಕ್ಕೆ ಬಂದಿದ್ದ ರಶೀದ್ ಖಾನ್ ಬಳಗ, ಈ ಸೋಲಿನ ಹೊರತಾಗಿಯೂ, ಸಾಧನೆಯ ನೆನಪಿನೊಡನೆ ತವರಿಗೆ ಹೆಮ್ಮೆಯಿಂದ ಹಿಂತಿರುಗಲಿದೆ.

ವೇಗದ ಬೌಲರ್‌ಗಳಾದ ಮಾರ್ಕೊ ಯಾನ್ಸೆನ್ (16ಕ್ಕೆ3), ಕಗಿಸೊ ರಬಾಡ (14ಕ್ಕೆ2) ಮತ್ತು ಆ್ಯನ್ರಿಚ್ ನಾಕಿಯಾ (7ಕ್ಕೆ2) ಅವರು ಅಫ್ಗಾನಿಸ್ತಾನದ ಬ್ಯಾಟಿಂಗ್ ಬೆನ್ನೆಲುಬು ಮುರಿದರು. ನಂತರ ಲೆಗ್ ಸ್ಪಿನ್ನರ್ ತಬ್ರೇಜ್ ಶಂಸಿ (6ಕ್ಕೆ3) ಅವರು ಬಾಲ ಬೆಳೆಯಲು ಬಿಡಲಿಲ್ಲ. ತಂಡ 11.5 ಓವರುಗಳಲ್ಲಿ ಕೇವಲ 56 ರನ್‌ಗಳಿಗೆ ಉರುಳಿತು. ಕ್ವಿಂಟನ್ ಡಿ ಕಾಕ್ ಅವರ ವಿಕೆಟ್ ಬೇಗ ಕಳೆದುಕೊಂಡರೂ, ದಕ್ಷಿಣ ಆಫ್ರಿಕಾ 8.5 ಓವರುಗಳಲ್ಲಿ 1 ವಿಕೆಟ್‌ಗೆ 60 ರನ್ ಹೊಡೆಯಿತು. ಚೋಕರ್ಸ್ (ಒತ್ತಡಕ್ಕೆ ಒಳಗಾಗುವ) ಹಣೆಪಟ್ಟಿ ಹೊಂದಿರುವ ದಕ್ಷಿಣ ಆಫ್ರಿಕಾ ತಂಡಕ್ಕೆ, ಇದು ಯಾವುದೇ ಮಾದರಿಯ ವಿಶ್ವಕಪ್‌ನಲ್ಲಿ ಮೊದಲ ಫೈನಲ್ ಆಗಿದೆ.

ರೀಜಾ ಹೆಂಡ್ರಿಕ್ಸ್ (ಔಟಾಗದೇ 29) ಟೂರ್ನಿಯಲ್ಲಿ ತಮ್ಮ ಅತ್ಯಧಿಕ ಸ್ಕೋರ್ ದಾಖಲಿಸಿದರೆ, ನಾಯಕ ಏಡನ್ ಮರ್ಕರಂ (ಔಟಾಗದೇ 23) ಸುರಕ್ಷಿತವಾಗಿ ತಂಡ ಗುರಿತಲುಪುವಂತೆ ನೋಡಿಕೊಂಡರು.

ಸೆಮಿಫೈನಲ್ ವರೆಗೆ ತನ್ನೆಲ್ಲಾ ಸಾಮರ್ಥ್ಯ ತೋರಿದ್ದ ಅಫ್ಗಾನಿಸ್ತಾನ ಈ ನಿರ್ಣಾಯಕ ಪಂದ್ಯದಲ್ಲಿ ಸುಲಭವಾಗಿ ಶರಣಾಯಿತು. ಬ್ಯಾಟರ್‌ಗಳು ಯಾರೂ ಹೋರಾಟ ತೋರಲಿಲ್ಲ. ಪವರ್‌ಪ್ಲೇ ಅವಧಿಯಲ್ಲೇ 28 ರನ್ನಿಗೆ 5 ವಿಕೆಟ್‌ಗಳನ್ನು ಕಳೆದುಕೊಂಡ ಅಫ್ಗಾನಿಸ್ತಾನ ತಂಡ ನಂತರ ಚೇತರಿಸಲಿಲ್ಲ. ಇದು ಟಿ20 ಅಂತರ ರಾಷ್ಟ್ರೀಯ ಪಂದ್ಯಗಳಲ್ಲಿ ಆ ತಂಡದ ಅತಿ ಕಡಿಮೆ ಮೊತ್ತ. ಅಲ್ಲಿಗೇ ಸೆಮಿ ಕನಸು ಕೂಡ ದೂರವಾಯಿತು.



ವಿಕೆಟ್ ಪಡೆದ ತಬ್ರೇಜ್ ಶಂಸಿ ಅವರನ್ನು ಅಭಿನಂದಿಸಿದ ಸಹ ಆಟಗಾರರು –ಎಪಿ/ಪಿಟಿಐ ಚಿತ್ರ



ಮಾರ್ಕೊ ಯಾನ್ಸೆನ್ –ಎಎಫ್‌ಪಿ ಚಿತ್ರ

ಪಿಚ್‌ನಲ್ಲಿ ಕೆಲವು ಎಸೆತಗಳು ಪುಟಿದೇಳುತ್ತಿದ್ದವು. ಹೀಗಾಗಿ ಬ್ಯಾಟರ್‌ಗಳಿಗೆ ಮುನ್ನುಗ್ಗಿ ಆಡುವುದು ಸುಲಭವಾಗಿರಲಿಲ್ಲ. ಅಫ್ಗನ್ ತಂಡದ ಯಶಸ್ವಿ ಆಟಗಾರ ರಹಮಾನುಲ್ಲಾ ಗುರ್ಬಾಜ್ ಮೊದಲಿಗರಾಗಿ ನಿರ್ಗಮಿಸಿದ್ದು ತಂಡಕ್ಕೆ ನುಂಗಲಾಗದ ತುತ್ತಾಯಿತು. ಯಾನ್ಸನ್ ಬೌಲಿಂಗ್‌ನಲ್ಲಿ ಆಫ್‌ಸ್ಟಂಪ್ ಆಚೆ ಹೋಗುತ್ತಿದ್ದ ಎಸೆತವನ್ನು ಅವರು ಸ್ಲಿಪ್‌ನಲ್ಲಿದ್ದ ರೀಝಾ ಹೆಂಡ್ರಿಕ್ಸ್ ಕೈಗೆ ಆಡಿದರು. ಯಾನ್ಸನ್ ನಂತರ ನೈಬ್ ಅವರನ್ನು ಬೌಲ್ಡ್ ಮಾಡಿದರು. ರಬಾಡ ಎಸೆತವನ್ನು ಅರಿಯುವಲ್ಲಿ ಇಬ್ರಾಹಿಂ ಜದ್ರಾನ್ ಎಡವಿದರು. ಚೆಂಡು ಬ್ಯಾಟ್-ಪ್ಯಾಡ್ ಮಧ್ಯೆಯಿಂದ ಲೆಗ್ ಸ್ಟಂಪ್‌ಗೆ ಬಡಿಯಿತು. ಮೂರು ಎಸೆತಗಳ ತರುವಾಯ ನಬಿ (0) ಕೂಡ ಹೆಚ್ಚುಕಮ್ಮಿ ಅಂಥದ್ದೇ ಎಸೆತಕ್ಕೆ ಔಟಾದರು.

ಉಳಿದವರಿಂದಲೂ ಅಂಥ ಪ್ರತಿರೋಧ ಕಾಣಲಿಲ್ಲ. ಗುರ್ಬಾಜ್, ಜದ್ರಾನ್, ಒಮರ್‌ಝೈ ಅವರನ್ನೇ ತಂಡ ನೆಚ್ಚಿಕೊಂಡಿತ್ತು. ಆದರೆ ಈ ಮೂವರು ಸೇರಿ 12 ರನ್‌ಅಷ್ಟೇ ಗಳಿಸಿದ್ದು. ನಾಯಕ ರಶೀದ್ ಖಾನ್, ನಾಕಿಯಾ ಎಸೆತದಲ್ಲಿ ಬೌಲ್ಡ್ ಆದರು. ಇನಿಂಗ್ಸ್‌ನ ಅತಿ ಹೆಚ್ಚು ಕಾಣಿಕೆ ಇತರೆ (13) ರನ್‌ಗಳ ಮೂಲಕ ಬಂದವು.

ಸ್ಕೋರುಗಳು: ಅಫ್ಗಾನಿಸ್ತಾನ: 11.5 ಓವರುಗಳಲ್ಲಿ 56 (ಗುಲ್ಬದಿನ್ ನೈಬ್ 9, ಅಜ್ಮತ್ ಉಲ್ಲಾ ಒಮರ್‌ಝೈ 10; ಮಾರ್ಕೊ ಯಾನ್ಸನ್ 16ಕ್ಕೆ3, ಕಗಿಸೊ ರಬಾಡ 14ಕ್ಕೆ2, ಆ್ಯನ್ರಿಚ್ ನಾಕಿಯಾ 7ಕ್ಕೆ2, ತಬ್ರೇಜ್ ಶಂಸಿ 6ಕ್ಕೆ3); ದಕ್ಷಿಣ ಆಫ್ರಿಕಾ: 8.5 ಓವರುಗಳಲ್ಲಿ 1 ವಿಕೆಟ್‌ಗೆ 60 (ರೀಜಾಹೆಂಡ್ರಿಕ್ಸ್‌ಔಟಾಗದೇ29, ಏಡನ್‌ಮರ್ಕರಂ ಔಟಾಗದೇ 23; ಫಜಲ್‌ಹಕ್ ಫರೂಕಿ 11ಕ್ಕೆ1). ಪಂದ್ಯದ ಆಟಗಾರ: ಮಾರ್ಕೊ ಯಾನ್ಸೆನ್.

'ಸೆಮಿಫೈನಲ್‌ಗೆ ಯೋಗ್ಯ ಪಿಚ್ ಆಗಿರಲಿಲ್ಲ'

ತರೂಬಾ (ಟ್ರಿನಿಡಾಡ್): ದಕ್ಷಿಣ ಆಫ್ರಿಕಾ ವಿರುದ್ಧ ಟಿ20 ವಿಶ್ವಕಪ್ ಸೆಮಿಫೈನಲ್ ಆಡಲು ಬಳಸಿದ ಪಿಚ್ ಬಗ್ಗೆ ಅಫ್ಗಾನಿಸ್ತಾನದ ಕೋಚ್ ಜೊನಾಥನ್ ಟ್ರಾಟ್ ಆಕ್ರೋಶಗೊಂಡಿದ್ದಾರೆ. ಇಂಥ ದೊಡ್ಡಮಟ್ಟದ ಪಂದ್ಯಕ್ಕೆ ಈ ಪಿಚ್ ಯೋಗ್ಯವಾಗಿರಲಿಲ್ಲ ಎಂದಿದ್ದಾರೆ.

ಇಲ್ಲಿನ ಬ್ರಯಾನ್ ಲಾರಾ ಕ್ರಿಕೆಟ್ ಅಕಾಡೆಮಿ ಕ್ರೀಡಾಂಗಣದ ಪಿಚ್ ಅಸಮಾನ ಬೌನ್ಸ್ ಮತ್ತು ಅನಿರೀಕ್ಷಿತ ಸೀಮ್ ಮೂವ್‌ಮೆಂಟ್‌ಗಳಿಂದ ಬ್ಯಾಟ್ಸ್‌ಮನ್ನರ ಪಾಲಿಗೆ ದುಃಸ್ವಪ್ನವಾಗಿತ್ತು ಎಂದು ಅವರು ಟೀಕಿಸಿದರು. ಅಫ್ಗಾನಿಸ್ತಾನ ಮೊದಲು ಆಡಿ 56 ರನ್‌ಗಳಿಗೆ ಪತನಗೊಂಡಿತ್ತು. ದಕ್ಷಿಣ ಆಫ್ರಿಕಾ ಒಂದು ವಿಕೆಟ್ ನಷ್ಟದಲ್ಲಿ ಗುರಿ ತಲುಪಿದರೂ ಆ ತಂಡದ ಬ್ಯಾಟರ್‌ಗಳೂ ಪರದಾಡಿದರು.

'ಟಿ20 ಕ್ರಿಕೆಟ್ ಇರುವುದೇ ಆಕ್ರಮಣದ ಆಟವಾಡಲು, ರನ್‌ಗಳನ್ನು ಪೇರಿಸಲು ಮತ್ತು ವಿಕೆಟ್‌ಗಳನ್ನು ಪಡೆಯುವುದಕ್ಕೆ. ಹೇಗೆ ಅಸ್ತಿತ್ವ ಕಂಡುಕೊಳ್ಳಬೇಕು ಎನ್ನುವ ರೀತಿ ಇರಬಾದರು' ಎಂದು ಇಂಗ್ಲೆಂಡ್‌ನ ಮಾಜಿ ಆಟಗಾರ ಹೇಳಿದರು.

ತರೂಬಾ ಪಿಚ್‌ನಲ್ಲಿ ಈ ಬಾರಿ ಐದು ಪಂದ್ಯಗಳು ನಡೆದಿವೆ. ಮೊದಲು ಆಡಿದ ತಂಡ ಒಮ್ಮೆ ಮಾತ್ರ 100 ರನ್ ದಾಟಿದೆ. ವೆಸ್ಟ್ ಇಂಡೀಸ್, ಇಲ್ಲಿ ನ್ಯೂಜಿಲೆಂಡ್ ವಿರುದ್ಧ 6 ವಿಕೆಟ್‌ಗೆ 149 ರನ್ ಗಳಿಸಿತ್ತು.

ಮತ್ತೆ ಬಯಸಲ್ಲ: ಇದೇ ಪಿಚ್‌ನಲ್ಲಿ ಮತ್ತೊಂದು ಪಂದ್ಯ ಆಡಲು ಬಯಸುವುದಿಲ್ಲ ಎಂದು ದಕ್ಷಿಣ ಆಫ್ರಿಕಾ ನಾಯಕ ಏಡನ್ ಮರ್ಕರಂ ಹೇಳಿದರು. ಆದರೆ ಸವಾಲಿನ ಪಿಚ್‌ನಲ್ಲಿ ತಂಡ ಗೆದ್ದು ನಿಟ್ಟುಸಿರುಬಿಡುವಂತೆ ಮಾಡಿದೆ ಎಂದರು.

ತರೂಬಾಕ್ಕೆ ತೆರಳಬೇಕಾದ ವಿಮಾನ ನಾಲ್ಕು ಗಂಟೆ ವಿಳಂಬವಾಯಿತು. 'ಹೀಗಾಗಿ ಆಟಗಾರರಿಗೆ ಸರಿಯಾಗಿ ನಿದ್ದೆ ಆಗಿಲ್ಲ' ಎಂದು ರಶೀದ್ ಖಾನ್ ಟಾಸ್ ವೇಳೆ ಹೇಳಿದ್ದರು.

ಮಹಿಳಾ ಟೆಸ್ಟ್: ಭಾರತ–ದಕ್ಷಿಣ ಆಫ್ರಿಕಾ ಮುಖಾಮುಖಿ

ಹರ್ಮನ್‌ಪ್ರೀತ್ ನಾಯಕತ್ವಕ್ಕೆ 'ಟೆಸ್ಟ್'

ಚೆನ್ನೈ (ಪಿಟಿಐ): ಒಂದು ದಶಕದ ನಂತರ ಭಾರತ ಮತ್ತು ದಕ್ಷಿಣ ಆಫ್ರಿಕಾ ಮಹಿಳಾ ಕ್ರಿಕೆಟ್ ತಂಡಗಳು ಟೆಸ್ಟ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ಶುಕ್ರವಾರ ಆರಂಭವಾಗಲಿರುವ ಏಕೈಕ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡವು ಯುವ ಆಟಗಾರ್ತಿಯರಿಗೆ ಅವಕಾಶ ನೀಡುವತ್ತ ಚಿತ್ತ ನೆಟ್ಟಿದೆ. ಉಮಾ ಚೆಟ್ರಿ, ಪ್ರಿಯಾ ಪೂನಿಯಾ, ಸೈಕಾ ಇಶಾಕ್, ಅರುಂಧತಿ ರೆಡ್ಡಿ ಮತ್ತು ಶಬ್ನಮ್ ಶಕೀಲ್ ಅವರು ಟೆಸ್ಟ್ ಪದಾರ್ಪಣೆ ಮಾಡಲು ಸಿದ್ಧರಾಗಿದ್ದಾರೆ. ಬೆಂಗಳೂರಿನಲ್ಲಿ ಈಚೆಗೆ ನಡೆದ ಏಕದಿನ ಕ್ರಿಕೆಟ್ ಸರಣಿಯಲ್ಲಿ ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ತಂಡವು 3-0ಯಿಂದ ಜಯಿಸಿತ್ತು. 2023ರ ಡಿಸೆಂಬರ್‌ನಲ್ಲಿ ಭಾರತ ತಂಡವು ಟೆಸ್ಟ್ ಮಾದರಿಯಲ್ಲಿ ಆಡಿತ್ತು. ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ತಂಡಗಳ ಎದುರು ತಲಾ ಒಂದು ಟೆಸ್ಟ್ ಪಂದ್ಯ ಆಡಿ ಗೆದ್ದಿತ್ತು. ಆದರೆ ದಕ್ಷಿಣ ಆಫ್ರಿಕಾ ಜೊತೆಗೆ 2014ರಲ್ಲಿ ಆಡಿತ್ತು. ಮೈಸೂರಿನಲ್ಲಿ ನಡೆದಿದ್ದ ಆ ಪಂದ್ಯದಲ್ಲಿ ಭಾರತ ಗೆದ್ದಿತ್ತು.

'ಮಹಿಳೆಯರಿಗಾಗಿ ಕ್ರಿಕೆಟ್ ಟೆಸ್ಟ್ ಪಂದ್ಯಗಳನ್ನು ಆಯೋಜಿಸುವುದು ಒಳ್ಳೆಯ ಸಂಗತಿ. ಇದರಿಂದಾಗಿ ದ್ವಿಪಕ್ಷೀಯ ಸರಣಿಗಳ ಮೌಲ್ಯವರ್ಧನೆಯಾಗುತ್ತದೆ' ಎಂದು ಭಾರತ ತಂಡದ ಕೋಚ್ ಅಮೋಲ್ ಮುಜುಂದಾರ್ ಬುಧವಾರ ಸುದ್ದಿಗಾರಿಗೆ ಹೇಳಿದ್ದಾರೆ.

ಸ್ಮೃತಿ ಮಂದಾನ ಮತ್ತು ಜೆಮಿಮಾ ರಾಡ್ರಿಗಸ್ ಅವರು ಟೆಸ್ಟ್ ಆಡಿರುವ ಅನುಭವಿಗಳು. ಈಚೆಗೆ ಏಕದಿನ ಸರಣಿಯಲ್ಲಿ ಸ್ಮೃತಿ ಎರಡು ಶತಕ ಹೊಡೆದು ವಿಜೃಂಭಿಸಿದ್ದರು. ಹರ್ಮನ್ ಕೂಡ ಉತ್ತಮ ಲಯದಲ್ಲಿದ್ದಾರೆ. ಆದರೆ ಆರಂಭಿಕ ಬ್ಯಾಟರ್ ಶೆಫಾಲಿ ವರ್ಮಾ ಮತ್ತು ಬೌಲಿಂಗ್‌ನಲ್ಲಿ ದೀಪ್ತಿ ಶರ್ಮಾ ಅವರೂ ತಮ್ಮ ಲಯಕ್ಕೆ ಮರಳಲು ಇದು ಒಳ್ಳೆಯ ಅವಕಾಶ. ಪೂಜಾ ವಸ್ತ್ರಕರ್ ಮತ್ತು ಸ್ನೇಹಾ ರಾಣಾ ಅವರು ಎದುರಾಳಿಗಳಿಗೆ ಸವಾಲೊಡ್ಡುವಂತಹ ಬೌಲರ್‌ಗಳು.



ಭಾರತ ಕ್ರಿಕೆಟ್ ತಂಡದ ಸ್ಮೃತಿ ಮಂದಾನ ಮತ್ತು ಹರ್ಮನ್‌ಪ್ರೀತ್ ಕೌರ್ ಅವರು ಫೀಲ್ಡಿಂಗ್ ಅಭ್ಯಾಸ ನಡೆಸಿದರು –ಪಿಟಿಐ ಚಿತ್ರ

ದಕ್ಷಿಣ ಆಫ್ರಿಕಾ ತಂಡದಲ್ಲಿ ಆಲ್‌ರೌಂಡರ್‌ಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಸುನೆ ಲೂಸ್, ಡೆಲ್ಮಿ ಟಕರ್, ಮತ್ತು ತಾಜ್ಮಿನ್ ಬ್ರಿಟನ್ಸ್ ಅವರನ್ನು ನಾಯಕಿ ಲೌರಾ ಅಂತಿಮ ಹನ್ನೊಂದರ ಪಟ್ಟಿಯಲ್ಲಿ ಉಳಿಸಿಕೊಳ್ಳುವ ಸಾಧ್ಯತೆ ಹೆಚ್ಚು. ಅನುಭವಿ ಮರಿಜಾನ್ ಕಾಪ್ ಅವರು ಬ್ಯಾಟಿಂಗ್ ವಿಭಾಗದ ಶಕ್ತಿಯಾಗಿದ್ದಾರೆ.



ಲೌರಾ ವೊಲ್ವಾರ್ಟ್

ಚೆಪಾಕ್ ಕ್ರೀಡಾಂಗಣದಲ್ಲಿ ಇದುವರೆಗೆ ಏಕೈಕ ಮಹಿಳಾ ಟೆಸ್ಟ್ ನಡೆದಿದೆ. 1976ರಲ್ಲಿ ಇಲ್ಲಿ ನಡೆದಿದ್ದ ಭಾರತ ಹಾಗೂ ವೆಸ್ಟ್ ಇಂಡೀಸ್ ನಡುವಣ ಪಂದ್ಯವು ಡ್ರಾ ಆಗಿತ್ತು.

ತಂಡಗಳು: ಭಾರತ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ (ಉಪನಾಯಕಿ), ಜೆಮಿಮಾ ರಾಡ್ರಿಗಸ್, ಪ್ರಿಯಾ ಪೂನಿಯಾ, ಶೆಫಾಲಿ ವರ್ಮಾ, ಶುಭಾ ಸತೀಶ್, ದೀಪ್ತಿ ಶರ್ಮಾ, ಪೂಜಾ ವಸ್ತ್ರಕರ್, ಮೇಘನಾ ಸಿಂಗ್, ರಿಚಾ ಘೋಷ್ (ವಿಕೆಟ್‌ಕೀಪರ್), ಉಮಾ ಚೆಟ್ರಿ (ವಿಕೆಟ್‌ಕೀಪರ್), ಸ್ನೇಹಾ ರಾಣಾ, ಸೈಕಾ ಇಶಾಕ್, ರಾಜೇಶ್ವರಿ ಗಾಯಕವಾಡ, ಅರುಂಧತಿ ರೆಡ್ಡಿ, ರೇಣುಕಾ ಠಾಕೂರ್ ಸಿಂಗ್.

ದಕ್ಷಿಣ ಆಫ್ರಿಕಾ: ಲೌರಾ ವೊಲ್ವಾರ್ಟ್ (ನಾಯಕಿ), ಅನೆಕಿ ಬಾಷ್, ತಾಜ್ಮೀನ್ ಬ್ರಿಟ್ಸ್, ನಡೈನ್ ಡಿ ಕ್ಲರ್ಕ್, ಅನೇರಿ ಡರ್ಕಸನ್, ಮೀಕೆ ಡಿ ರಿಡರ್ (ವಿಕೆಟ್‌ಕೀಪರ್), ಸಿನಾಲೊ ಜಫ್ತಾ (ವಿಕೆಟ್‌ಕೀಪರ್), ಮರಿಜಾನ್ ಕಾಪ್, ಮಸಾಬತಾ ಕ್ಲಾಸ್, ಸುನೇ ಲೂಸ್, ಎಲಿಜ್ ಮೇರಿ, ಮರ್ಜ್ ನಾನಕುಲುಲೆಕೊ ಮ್ಲಾಬಾ, ತುಮಿ ಸೆಕುಕುನೆ, ನೊಂದುಮಿಸೊ ಸಂಗಾಸೆ, ಡೆಲ್ಮಿ ಟಕರ್

ಪಂದ್ಯ ಆರಂಭ: ಬೆಳಿಗ್ಗೆ 9.30

ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ

ಮುಖ್ಯಾಂಶಗಳು

- ತಂಡದಲ್ಲಿ ಕರ್ನಾಟಕದ ರಾಜೇಶ್ವರಿ ಗಾಯಕವಾಡ್, ಶುಭಾ ಸತೀಶ್
- ಲಯಕ್ಕೆ ಮರಳುವ ತವಕದಲ್ಲಿ ಜೆಮಿಮಾ, ದೀಪ್ತಿ
- ದಶಕದ ನಂತರ ಟೆಸ್ಟ್‌ನಲ್ಲಿ ಭಾರತ–ದಕ್ಷಿಣ ಆಫ್ರಿಕಾ ಮುಖಾಮುಖಿ

ಮಣಿಪುರ: ಶಸ್ತ್ರಾಸ್ತ್ರ, ಸ್ಫೋಟಕ ವಶ

ಇಂಫಾಲ್ (ಪಿಟಿಐ): ಇಂಫಾಲ್ ಮತ್ತು ಬಿಷ್ಣುಪುರ ಜಿಲ್ಲೆಯ ವಿವಿಧೆಡೆ ಭದ್ರತಾ ಪಡೆಗಳು ಗುರುವಾರ ತೀವ್ರ ಶೋಧ ಕಾರ್ಯ ನಡೆಸಿದ್ದು, ಭಾರಿ ಪ್ರಮಾಣದ ಶಸ್ತ್ರಾಸ್ತ್ರಗಳು ಮತ್ತು ಸ್ಫೋಟಕಗಳನ್ನು ವಶಪಡಿಸಿಕೊಂಡಿವೆ.

11 ಗ್ರೆನೇಡ್‌ಗಳು, 5 ಕಚ್ಚಾ ಬಾಂಬ್‌ಗಳು, ಐದು ಪಾಯಿಂಟ್ 303 ರೈಫಲ್‌ಗಳು, 3 ಡೆಟೊನೇಟರ್‌ಗಳು, ಕಾರ್ಬೈನ್, 1 ಬಂದೂಕು, ವಿವಿಧ ಮಾದರಿ ಬಾಂಬ್‌ಗಳು, ಶಸ್ತ್ರಾಸ್ತ್ರಗಳು, ನಾಲ್ಕು ವಾಕಿ–ಟಾಕಿಗಳು, ಎರಡು ರೇಡಿಯೊ ಸೆಟ್‌ಗಳು ಶೋಧ ವೇಳೆ ಪತ್ತೆಯಾಗಿವೆ.

ಬಿಷ್ಣುಪುರ ಗುಡ್ಡಗಾಡು ಪ್ರದೇಶ ಹಾಗೂ ಇಂಪಾಲ್‌ನ ಕಣಿವೆ ಪ್ರದೇಶಗಳಲ್ಲಿಯೂ ಶೋಧ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಲ್ಲದೆ, ಬಿಷ್ಣುಪುರ ಜಿಲ್ಲೆಯಲ್ಲಿ ಒಂದು ಎಸ್‌ಎಂಜಿ ಕಾರ್ಬೈನ್, 9 ಎಂ.ಎಂ ಪಿಸ್ತೂಲ್, 9 ಅಧಿಕ ಸಾಮರ್ಥ್ಯದ ಗ್ರೆನೇಡ್‌ಗಳು, 2 ಸ್ಮೋಕ್ ಬಾಂಬ್‌ಗಳು ಪತ್ತೆಯಾಗಿವೆ.

ಕೇಂದ್ರ ಗೃಹ ಸಚಿವರ ಭೇಟಿ, ಚರ್ಚೆ

ಮಣಿಪುರ ಬಿಜೆಪಿ ಘಟಕದ ಅಧ್ಯಕ್ಷೆ ಎ.ಶಾರದಾದೇವಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಗುರುವಾರ ಭೇಟಿಯಾದರು. ರಾಜ್ಯದಲ್ಲಿನ ಅನಿಶ್ಚಿತ ಪರಿಸ್ಥಿತಿಯನ್ನು ಕೊನೆಗಾಣಿಸಲು ತಕ್ಷಣವೇ ಗಮನಹರಿಸಬೇಕು ಎಂದು ತಾವು ಒತ್ತಾಯಿಸಿದ್ದಾಗಿ ಶಾರದಾದೇವಿ ಬಳಿಕ ಸುದ್ದಿಗಾರರಿಗೆ ತಿಳಿಸಿದರು.

ಸ್ಫೋಟ: ಇಬ್ಬರಿಗೆ ಗಾಯ

ದಾಂತೇವಾಡ (ಪಿಟಿಐ): ನಕ್ಸಲರು ಹುದುಗಿಸಿಟ್ಟಿದ್ದ ಕಚ್ಚಾಬಾಂಬ್ ಸ್ಫೋಟಿಸಿ ಅಣ್ಣ–ತಂಗಿ ಗಾಯಗೊಂಡ ಘಟನೆ ಛತ್ತೀಸಗಢದ ದಾಂತೇವಾಡ ಜಿಲ್ಲೆಯಲ್ಲಿ ನಡೆದಿದೆ. ಬುಧವಾರ ರಾತ್ರಿ ಗುಫಾಪರ ಮಂಗ್‌ನಾರ್‌ನಲ್ಲಿ ಕೃತ್ಯ ನಡೆದಿದೆ. ಜುರುರಾಮ್ ಆತನ ತಂಗಿ ರೂಪಾ ಗಾಯಗೊಂಡರು. ಜುರುರಾಮ್ ಕಾಲಿಗೆ ತೀವ್ರವಾಗಿ, ರೂಪಾಗೆ ತುಸು ಪೆಟ್ಟಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಾಲ್ವರು ಮಾವೋವಾದಿಗಳು ಶರಣು

ಪಾಡೇರು (ಆಂಧ್ರಪ್ರದೇಶ): ನಿಷೇಧಿತ ಸಿಪಿಐ (ಮಾವೋವಾದಿ) ಸಂಘಟನೆಗೆ ಸೇರಿದ ನಾಲ್ವರು ಸದಸ್ಯರು ಗುರುವಾರ ಶರಣಾಗಿದ್ದಾರೆ. 'ಗಾಲಿಕೊಂಡ ದಳಕ್ಕೆ ಸೇರಿದ ಟಿ.ಸಾಯಿರಾಂ, ವಿ.ಕಿರಣ್, ಟಿ.ರಮೇಶ್, ಕೆ.ಬಾಬುರಾವ್ ಸ್ವಯಂ ಪ್ರೇರಿತರಾಗಿ ಶರಣಾಗಿದ್ದಾರೆ' ಎಂದು ಅಲ್ಲೂರಿ ಸೀತಾರಾಮ ರಾಜು ಜಿಲ್ಲೆಯ ಎಸ್ಪಿ ತುಹಿನ್ ಸಿನ್ಹಾ ತಿಳಿಸಿದ್ದಾರೆ.

ಪದವಿ ವಿದ್ಯಾರ್ಥಿಗಳಿಗೆ ₹17 ಸಾವಿರ

ಒಂದನೇ ಪುಟದಿಂದ...

ಔಷಧ ತಯಾರಿ ಮತ್ತು ಗುಣಮಟ್ಟ, ಡಿಜಿಟಲ್ ಮಾರುಕಟ್ಟೆ, ಸಿನಿಮಾ ನಿರ್ಮಾಣ, ಜಾಹೀರಾತು, ಮಾಧ್ಯಮ ಮತ್ತು ಮನರಂಜನೆ, ಫ್ಯಾಷನ್ ಡಿಸೈನ್, ಬ್ಯಾಂಕಿಂಗ್, ಹಣಕಾಸು ಸೇವೆ ಮತ್ತು ಜೀವವಿಮೆ, ಎಲೆಕ್ಟ್ರಾನಿಕ್ಸ್, ದತ್ತಾಂಶ ವಿಶ್ಲೇಷಣೆ, ಮಾಹಿತಿ ತಂತ್ರಜ್ಞಾನ ಈ ಕೋರ್ಸ್‌ಗಳೂ ಇವೆ. ಮುಂದಿನ ಹಂತದಲ್ಲಿ ಕಲಾ ವಿಭಾಗದ ವಿದ್ಯಾರ್ಥಿಗಳಿಗೂ ಕೌಶಲ ದೊರಕಿಸಲು ಸರ್ಕಾರ ಚಿಂತನೆ ನಡೆಸಿದೆ.

'ಆಂಧ್ರಪ್ರದೇಶ, ಅಸ್ಸಾಂ, ಮಧ್ಯಪ್ರದೇಶ, ಮಹಾರಾಷ್ಟ್ರ, ಮೇಘಾಲಯ, ರಾಜಸ್ಥಾನ, ತಮಿಳುನಾಡು, ತೆಲಂಗಾಣ, ಉತ್ತರ ಪ್ರದೇಶದ ಪದವಿ ಕಾಲೇಜುಗಳಲ್ಲಿ 'ಕ್ರಿಸ್ಪ್', ಸಾಮಾನ್ಯ ಪದವಿ ಶಿಕ್ಷಣದ ಜೊತೆಗೆ ಕೌಶಲ ವಿಷಯಗಳನ್ನು ಪರಿಚಯಿಸಿದ್ದು, ಅಲ್ಲಿನ ವಿದ್ಯಾರ್ಥಿಗಳಿಂದ ಭಾರಿ ಬೇಡಿಕೆ ಬರುತ್ತಿದೆ. ಈ ಒಪ್ಪಂದದಿಂದಾಗಿ ರಾಜ್ಯದ ಸಾಮಾನ್ಯ ಪದವಿ ವಿದ್ಯಾರ್ಥಿಗಳಿಗೂ ಭವಿಷ್ಯದಲ್ಲಿ ಕೌಶಲಾಧಾರಿತ ಉದ್ಯೋಗದ ಅವಕಾಶಗಳು ಹೆಚ್ಚಲಿವೆ' ಎನ್ನುತ್ತಾರೆ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್.

ಕೇರಳ: ಆಸ್ಪತ್ರೆ ಭೇಟಿಗೆ ಮಾಸ್ಕ್ ಕಡ್ಡಾಯ

ತಿರುವನಂತಪುರ (ಪಿಟಿಐ): ಶೀತ, ಜ್ವರದ ಜೊತೆಗೆ ಡೆಂಗಿ ಮತ್ತು ಎಚ್‌1ಎನ್‌1 ಅಂತಹ ಸಾಂಕ್ರಾಮಿಕ ರೋಗಗಳು ವ್ಯಾಪಿಸುವ ಹಿನ್ನೆಲೆಯಲ್ಲಿ ಮುಂಜಾಗ್ರತೆಯಾಗಿ ಆಸ್ಪತ್ರೆಗೆ ಭೇಟಿ ನೀಡುವವರು ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಿ ಕೇರಳ ಸರ್ಕಾರ ಆದೇಶಿಸಿದೆ.

ಕ್ಷಿಪ್ರ ಕಾರ್ಯಪಡೆ ಸಭೆಯ ಅಧ್ಯಕ್ಷತೆ ವಹಿಸಿದ್ದ ಆರೋಗ್ಯ ಸಚಿವೆ ವೀಣಾ ಜಾರ್ಜ್ ಅವರು ಬಳಿಕ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ್ದಾರೆ. ಹಕ್ಕಿಜ್ವರ ಭೀತಿಯ ಸಾಧ್ಯತೆಗಳಿವೆ ಎಂದು ಆರೋಗ್ಯ ಇಲಾಖೆಯು ಎಚ್ಚರಿಕೆ ನೀಡಿದೆ.

ಬಿಹಾರ: ಮತ್ತೊಂದು ಸೇತುವೆ ಕುಸಿತ

ಕಿಶನ್‌ಗಂಜ್ (ಪಿಟಿಐ): ಬಿಹಾರದ ಕಿಶನ್‌ಗಂಜ್‌ನಲ್ಲಿ ಗುರುವಾರ ಸೇತುವೆಯೊಂದು ಕುಸಿದಿದ್ದು, ರಾಜ್ಯದಲ್ಲಿ ವಾರದೊಳಗೆ ನಡೆದ ಇಂತಹ ನಾಲ್ಕನೇ ಘಟನೆ ಇದಾಗಿದೆ.

'ಘಟನೆಯಲ್ಲಿ ಯಾವುದೇ ರೀತಿಯ ಪ್ರಾಣಹಾನಿ ಸಂಭವಿಸಿಲ್ಲ' ಎಂದು ಜಿಲ್ಲಾಧಿಕಾರಿ ತುಷಾರ್ ಸಿಂಗ್ಲ ತಿಳಿಸಿದ್ದಾರೆ.

'70 ಮೀ. ಉದ್ದ ಮತ್ತು 12 ಮೀ. ಅಗಲವಿದ್ದ ಈ ಸೇತುವೆಯನ್ನು ಕಂಕೈ ನದಿಯನ್ನು ಸಂಧಿಸುವ ಸಣ್ಣ ಉಪನದಿಗೆ ಅಡ್ಡಲಾಗಿ 2011ರಲ್ಲಿ ನಿರ್ಮಿಸಲಾಗಿತ್ತು. ನೇಪಾಳದಲ್ಲಿ ಭೀಕರ ಮಳೆಯಾದ ಪರಿಣಾಮ ನದಿಯ ನೀರಿನ ಮಟ್ಟ ಏರಿಕೆಯಾಗಿದ್ದು, ನೀರಿನ ರಭಸಕ್ಕೆ ಸೇತುವೆಯ ಆಧಾರಸ್ತಂಭಗಳು ಕುಸಿದಿವೆ' ಎಂದು ಮಾಹಿತಿ ನೀಡಿದರು.

ಕಳೆದ ವಾರ ಅರಾರಿಯ ಮತ್ತು ಸಿವಾನ್‌ನಲ್ಲಿ ಮೂರು ಸೇತುವೆಗಳು ಕುಸಿದು ಬಿದ್ದಿದ್ದವು. ಇತ್ತೀಚಿನ ವರ್ಷಗಳಲ್ಲಿ ಇದೇ ರೀತಿಯ ಹಲವು ಘಟನೆಗಳು ಬಿಹಾರದಲ್ಲಿ ನಡೆದಿದೆ.

ವಂದೇ ಭಾರತ್ ಎಕ್ಸ್‌ಪ್ರೆಸ್ ವೇಗ ತಗ್ಗಿಸಿದ ರೈಲ್ವೆ

ನವದೆಹಲಿ(ಪಿಟಿಐ): 'ಸೆಮಿ ಹೈಸ್ಪೀಡ್' ರೈಲುಗಳಾದ ವಂದೇ ಭಾರತ್ ಎಕ್ಸ್‌ಪ್ರೆಸ್ ಮತ್ತು ಗತಿಮಾನ್ ಎಕ್ಸ್‌ಪ್ರೆಸ್‌ನ ವೇಗವನ್ನು ರೈಲ್ವೆ ಇಲಾಖೆ ತಗ್ಗಿಸಿದೆ. ಈ ರೈಲುಗಳು ಪ್ರತಿ ಗಂಟೆಗೆ 160 ಕಿ.ಮೀ. ವೇಗದ ಬದಲು ಗಂಟೆಗೆ 130 ಕಿ.ಮೀ. ವೇಗದಲ್ಲಿ ಚಲಿಸಲಿವೆ.

ರೈಲುಗಳು ಅಪಘಾತಕ್ಕೀಡಾಗುವುದನ್ನು ತಪ್ಪಿಸುವ ಸ್ವಯಂ ಚಾಲಿತ ಸುರಕ್ಷತಾ ವ್ಯವಸ್ಥೆ 'ಕವಚ' ಅಳವಡಿಕೆ ಪೂರ್ಣಗೊಳ್ಳುವವರೆಗೆ ಈ ರೈಲುಗಳು ಕಡಿಮೆಗೊಳಿಸಲಾದ ವೇಗದಲ್ಲಿ ಓಡಲಿವೆ. ಈ ಬಗ್ಗೆ ರೈಲ್ವೆ ಮಂಡಳಿಯ ಸಿಗ್ನಲ್ ವಿಭಾಗ ರೈಲ್ವೆ ವಲಯಗಳಿಗೆ ಪತ್ರ ಬರೆದಿದೆ.

''ಕವಚ' ವ್ಯವಸ್ಥೆ ಅಳವಡಿಸುವ ಕಾರ್ಯವನ್ನು ಎಲ್ಲ ರೈಲ್ವೆ ವಲಯಗಳು ಚುರುಕುಗೊಳಿಸಬೇಕು. ಈ ವ್ಯವಸ್ಥೆ ಅಳವಡಿಕೆ ಕಾರ್ಯ ಪೂರ್ಣಗೊಳ್ಳುವವರೆಗೆ ಈ ರೈಲುಗಳು ಗಂಟೆಗೆ ಗರಿಷ್ಠ 130 ಕಿ.ಮೀ. ವೇಗದಲ್ಲಿ ಸಂಚರಿಸಲಿವೆ' ಎಂದು ತಿಳಿಸಿದೆ.



ಪ್ರಸ್ತುತ, ಹಜರತ್ ನಿಜಾಮುದ್ದೀನ್ (ನವದೆಹಲಿ) ಮತ್ತು ಆಗ್ರಾ ನಡುವೆ ಒಂದು ಗತಿಮಾನ್ ಎಕ್ಸ್‌ಪ್ರೆಸ್ ಹಾಗೂ ಎರಡು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳು ಮಾತ್ರ ಗಂಟೆಗೆ 160 ಕಿ.ಮೀ. ವೇಗದಲ್ಲಿ ಸಂಚರಿಸುತ್ತಿವೆ. ರೈಲುಗಳು ಈ ವೇಗದಲ್ಲಿ ಸಂಚರಿಸಲು ಇಲ್ಲಿನ ಹಳಿಗಳು ಸೂಕ್ತವಾಗಿವೆ.

ಪಶ್ಚಿಮ ಬಂಗಾಳದಲ್ಲಿ ಇತ್ತೀಚೆಗೆ ಸಂಭವಿಸಿದ ಕಾಂಚನಜುಂಗಾ ಎಕ್ಸ್‌ಪ್ರೆಸ್ ಅಪಘಾತದ ಹಿನ್ನೆಲೆಯಲ್ಲಿ ರೈಲ್ವೆ ಈ ನಿರ್ಧಾರ ಕೈಗೊಂಡಿದೆ. ರೈಲುಗಳ ವೇಗದ ಮೇಲೆ ಜೂನ್ 25ರಿಂದಲೇ ಮಿತಿ ಹೇರಿದ್ದಾಗಿ ಮೂಲಗಳು ಹೇಳಿವೆ.

ಪೋರ್ಚುಗಲ್‌ಗೆ ಜಾರ್ಜಿಯಾ ಆಘಾತ


ಪೋರ್ಚುಗಲ್ ವಿರುದ್ಧ ಗೆಲುವು ಸಾಧಿಸಿದ ಸಂಭ್ರಮದಲ್ಲಿ ಜಾರ್ಜಿಯಾ ಆಟಗಾರರು –ಪಿಟಿಐ ಚಿತ್ರ

ಯುರೋ ಕಪ್ 2024 ಜರ್ಮನಿ

ಗೆಲ್ಸೆನ್ಕಿರ್ಚೆನ್, ಜರ್ಮನಿ (ಎಪಿ): ಜಾರ್ಜಿಯಾ ತಂಡವು ಬುಧವಾರ ರಾತ್ರಿ ಯುರೋ ಕಪ್ ಫುಟ್‌ಬಾಲ್ ಟೂರ್ನಿಯ 'ಎಫ್' ಗುಂಪಿನ ಪಂದ್ಯದಲ್ಲಿ 2–0 ಯಿಂದ ಬಲಿಷ್ಠ ಪೋರ್ಚುಗಲ್ ವಿರುದ್ಧ ಚಾರಿತ್ರಿಕ ಗೆಲುವು ಸಾಧಿಸಿತು. ಜೊತೆಗೆ ಪ್ರಮುಖ ಅಂತರರಾಷ್ಟ್ರೀಯ ಟೂರ್ನಿಯೊಂದರಲ್ಲಿ ಮೊದಲ ಬಾರಿ ಅಂತಿಮ 16ರ ಘಟ್ಟಕ್ಕೆ ಪ್ರವೇಶ ಪಡೆಯಿತು.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಆರನೇ ಸ್ಥಾನದಲ್ಲಿರುವ ಪೋರ್ಚುಗಲ್ ತಂಡವು ಆಡಿರುವ ಮೂರು ಪಂದ್ಯಗಳ ಪೈಕಿ ಎರಡರಲ್ಲಿ ಗೆಲುವು ಸಾಧಿಸಿ, 6 ಅಂಕಗಳೊಂದಿಗೆ ಈ ಮೊದಲೇ ನಾಕೌಟ್‌ಗೆ ಅರ್ಹತೆ ಪಡೆದಿತ್ತು. ಕೊನೆಯ ಪಂದ್ಯದ ಆಘಾತಕಾರಿ ಸೋಲಿನ ಹೊರತಾಗಿಯೂ ಗುಂಪಿನಲ್ಲಿ ಅಗ್ರಸ್ಥಾನ ಕಾಯ್ದುಕೊಂಡಿತು.

ವಿಶ್ವ ಕ್ರಮಾಂಕದಲ್ಲಿ 74ನೇ ಸ್ಥಾನದಲ್ಲಿರುವ ಜಾರ್ಜಿಯಾ ಮೊದಲೆರಡು ಪಂದ್ಯಗಳ ಪೈಕಿ ಒಂದರಲ್ಲಿ ಡ್ರಾ ಸಾಧಿಸಿದ್ದರೆ, ಮತ್ತೊಂದರಲ್ಲಿ ಸೋಲು ಕಂಡಿತ್ತು. ಮುಂದಿನ ಹಂತಕ್ಕೆ ಅರ್ಹತೆ ಪಡೆಯಲು ಕೊನೆಯ ಪಂದ್ಯದಲ್ಲಿ ಗೆಲ್ಲಲೇಬೇಕಿತ್ತು. ಒಟ್ಟು ನಾಲ್ಕು ಅಂಕ ಸಂಪಾದಿಸಿರುವ ತಂಡವು ಗುಂಪಿನಲ್ಲಿ ಮೂರನೇ ಸ್ಥಾನ ಪಡೆದು, ಪ್ರಿ ಕ್ವಾರ್ಟರ್‌ಫೈನಲ್‌ಗೆ ಮುನ್ನಡೆಯಿತು.

ಪಂದ್ಯ ಆರಂಭವಾದ ಎರಡೇ ನಿಮಿಷದಲ್ಲಿ ಖ್ವಿಚಾ ಕ್ವಾರಾತ್‌ಸ್ಖೇಲಿಯಾ ಅವರು ಚೆಂಡನ್ನು ಗುರಿ ಸೇರಿಸಿ ಜಾರ್ಜಿಯಾಕ್ಕೆ ಆರಂಭದಲ್ಲೇ ಮುನ್ನಡೆ ಒದಗಿಸಿದರು. 57ನೇ ನಿಮಿಷದಲ್ಲಿ ಸಿಕ್ಕ ಪೆನಾಲ್ಟಿ ಅವಕಾಶವನ್ನು ಜಾರ್ಜಸ್ ಮಿಕೌಟಾಡ್ಜೆ ಅವರು ಗೋಲಾಗಿ ಪರಿವರ್ತಿಸಿ ಜಾರ್ಜಿಯಾ ತಂಡದ ಮುನ್ನಡೆಯನ್ನು ಹೆಚ್ಚಿಸಿ ಗೆಲುವಿಗೆ ಮಹತ್ವದ ಕಾಣಿಕೆ ನೀಡಿದರು.

'ನಾವು ಇತಿಹಾಸ ನಿರ್ಮಿಸಿದ್ದೇವೆ. ಪೋರ್ಚುಗಲ್ ತಂಡವನ್ನು ಸೋಲಿಸುತ್ತೇವೆ ಎಂದು ಯಾರೂ ಊಹಿಸಿರಲಿಲ್ಲ. ನಾವೂ ಬಲಿಷ್ಠ ಆಟಗಾರರ ತಂಡವನ್ನು ಹೊಂದಿದ್ದೇವೆ' ಎಂದು ಕ್ವಾರಾತ್‌ಸ್ಖೇಲಿಯಾ ಪ್ರತಿಕ್ರಿಯಿಸಿದರು.

ಜೂನ್ 30 ನಡೆಯುವ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಜಾರ್ಜಿಯಾ, ಸ್ಪೇನ್ ತಂಡವನ್ನು ಎದುರಿಸಲಿದೆ.

ಟರ್ಕಿಗೆ ಗೆಲುವು

ಟರ್ಕಿ ತಂಡವು 'ಎಫ್' ಗುಂಪಿನ ಮತ್ತೊಂದು ಪಂದ್ಯದಲ್ಲಿ 2–1ರಿಂದ ಝೆಕ್ ರಿಪಬ್ಲಿಕ್ ತಂಡವನ್ನು ಮಣಿಸಿ, ಮುಂದಿನ ಘಟ್ಟಕ್ಕೆ ಅರ್ಹತೆ ಪಡೆಯಿತು.

ಹಕನ್ ಕಲ್ಹಾನೋಗ್ಲು (51ನೇ ನಿಮಿಷ) ಮತ್ತು ಸೆಂಕ್ ಟೋಸುನ್ (90 + 4ನೇ ನಿಮಿಷ) ಅವರ ಟರ್ಕಿ ಪರವಾಗಿ ಗೋಲು ಗಳಿಸಿದರು. ಥಾಮಸ್ ಚೋರಿ (66ನೇ ನಿಮಿಷ) ಅವರು ಝೆಕ್ ರಿಪಬ್ಲಿಕ್ ಪರ ಏಕೈಕ ಗೋಲು ತಂದಿತ್ತರು.

ಆಡಿರುವ ಮೂರು ಪಂದ್ಯಗಳ ಪೈಕಿ ಎರಡರಲ್ಲಿ ಗೆಲುವು ಸಾಧಿಸಿದ ಟರ್ಕಿ ತಂಡವು 6 ಅಂಕಗಳೊಂದಿಗೆ ಗುಂಪಿನಲ್ಲಿ ಎರಡನೇ ಸ್ಥಾನ ಪಡೆಯಿತು. ಝೆಕ್ ತಂಡವು ಒಂದರಲ್ಲಿ ಡ್ರಾ ಸಾಧಿಸಿ, ಮತ್ತೆರಡರಲ್ಲಿ ಸೋಲು ಅನುಭವಿಸಿ ಒಂದು ಅಂಕ ಪಡೆದು ಟೂರ್ನಿಯಿಂದ ಹೊರಬಿತ್ತು. ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಟರ್ಕಿ ಜುಲೈ 3ರಂದು ಆಸ್ಟ್ರಿಯಾ ತಂಡವನ್ನು ಎದುರಿಸಲಿದೆ.

ಪೋರ್ಚುಗಲ್ ಜುಲೈ 2ರಂದು ಸ್ಲೊವೇನಿಯಾ ವಿರುದ್ಧ ಸೆಣಸಲಿದೆ.



400 ಮೀಟರ್ ಓಟ: ಕಿರಣ್‌ಗೆ ಒಲಿಂಪಿಕ್ಸ್ ಟಿಕೆಟ್

ಪಂಚಕುಲ (ಹರಿಯಾಣ) (ಪಿಟಿಐ): ಹರಿಯಾಣದ ಕಿರಣ್ ಪಹಲ್ ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಅಂತರ್ ರಾಜ್ಯ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಮಹಿಳೆಯರ 400 ಮೀಟರ್ ಓಟದಲ್ಲಿ 50.92 ಸೆಕೆಂಡುಗಳಲ್ಲಿ ಗುರಿ ತಲುಪಿ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದಾರೆ.

ಮಹಿಳೆಯರ 400 ಮೀಟರ್ ಓಟದಲ್ಲಿ ಅರ್ಹತಾ ಮಾನದಂಡವನ್ನು 50.95 ಸೆಕೆಂಡುಗಳಿಗೆ ನಿಗದಿ ಪಡಿಸಲಾಗಿತ್ತು. ಪ್ರಸಕ್ತ ಋತುವಿನಲ್ಲಿ ಇದು ಕಿರಣ್ ಅವರ ಅತ್ಯುತಮ ಸಾಧನೆಯಾಗಿದೆ.

ಗುಜರಾತ್‌ನ ದೇವಿ ಅನಿಬಾ ಝಾಲಾ (53.44 ಸೆ.) ಎರಡನೇ ಸ್ಥಾನ ಪಡೆದರೆ, ಕೇರಳದ ಸ್ನೇಹಾ ಕೆ (53.51 ಸೆ.) ಮೂರನೇ ಸ್ಥಾನ ಪಡೆದರು.

ಕೊಪಾ: ಕ್ವಾರ್ಟರ್‌ಗೆ ವೆನೆಜುವೆಲಾ

ಏಂಗಲ್‌ವುಡ್ (ಅಮೆರಿಕ), (ಎಪಿ): ಸಾಲೋಮನ್ ರೊಂಡನ್ ಗಳಿಸಿದ ಗೋಲಿನ ನೆರವಿನಿಂದ ವೆನೆಜುವೆಲಾ ತಂಡ 1-0 ಗೋಲಿನಿಂದ ಮೆಕ್ಸಿಕೊ ವಿರುದ್ಧ ಜಯ ಸಾಧಿಸಿ ಕೊಪಾ ಅಮೆರಿಕ ಫುಟ್‌ಬಾಲ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದೆ.

ಸೋಫಿ ಕ್ರೀಡಾಂಗಣದಲ್ಲಿ ಬುಧವಾರ ರಾತ್ರಿ ನಡೆದ 'ಬಿ' ಗುಂಪಿನ ಈ ಪಂದ್ಯದಲ್ಲಿ 57ನೇ ನಿಮಿಷ ಸ್ಟ್ರೈಕರ್ ಸಾಲೋಮನ್ ಅವರು ಪೆನಾಲ್ಟಿ ಕಿಕ್ ಅನ್ನು ಗೋಲಾಗಿ ಪರಿವರ್ತಿಸಿದರು.

ವೆನೆಜುವೆಲಾ ತಂಡದ ಪ್ರಬಲ ರಕ್ಷಣಾ ವ್ಯೂಹದಿಂದ ಮೆಕ್ಸಿಕೊ ತಂಡಕ್ಕೆ ಗೋಲು ಗಳಿಸಲು ಅವಕಾಶ ಆಗಲಿಲ್ಲ. ಸತತ ಎರಡು ಪಂದ್ಯಗಳನ್ನು ಗೆದ್ದಿರುವ ವೆನೆಜುವೆಲಾ, ಗುಂಪಿನಲ್ಲಿ ಅಗ್ರಸ್ಥಾನದಲ್ಲಿದೆ. ಗುಂಪಿನ ಇನ್ನೊಂದು ತಂಡ ಜಮೈಕಾ ಆಡಿದ ಎರಡರಲ್ಲೂ ಸೋತಿದ್ದು ಟೂರ್ನಿಯಿಂದ ಹೊರಬಿತ್ತು.

ಗುಕೇಶ್ ಶುಭಾರಂಭ

ಬುಖಾರೆಸ್ಟ್ (ರುಮೇನಿಯಾ), (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಡಿ.ಗುಕೇಶ್ ಅವರು ಸೂಪರ್‌ಬೆಟ್ ಕ್ಲಾಸಿಕ್ ಚೆಸ್ ಟೂರ್ನಿಯ ಮೊದಲ ಸುತ್ತಿನಲ್ಲಿ ಆತಿಥೇಯ ದೇಶದ ಡೀಕ್ ಬೊಗ್ಡಾನ್ ಡೇನಿಯಲ್ ಅವರನ್ನು ಸೋಲಿಸಿ ಉತ್ತಮ ಆರಂಭ ಮಾಡಿದರು.

ಕಣದಲ್ಲಿರುವ ಭಾರತದ ಇನ್ನೊಬ್ಬ ಆಟಗಾರ ಆರ್.ಪ್ರಜ್ಞಾನಂದ ಉತ್ತಮ ಹೋರಾಟದ ಪಂದ್ಯದಲ್ಲಿ ಗೆಲುವಿಗೆ ಎಲ್ಲ ಪ್ರಯತ್ನ ಹಾಕಿದರೂ, ಪ್ರಬಲ ಎದುರಾಳಿ ನಾಡಿರ್‌ಬೆಕ್ ಅಬ್ದುಸತ್ತಾರೋವ್ ಜೊತೆ 'ಡ್ರಾ'ಕ್ಕೆ ಒಪ್ಪಿಕೊಳ್ಳಬೇಕಾಯಿತು.

ಏಕಲವ್ಯ ಪ್ರಶಸ್ತಿ ಮಾರ್ಗಸೂಚಿ: ಮಧ್ಯಪ್ರವೇಶಕ್ಕೆ ನಕಾರ

ಬೆಂಗಳೂರು: 'ಏಕಲವ್ಯ ಪ್ರಶಸ್ತಿ' ಪಡೆಯಲು ಅರ್ಹತೆ ನಿಗದಿ ಪಡಿಸಿ ರಾಜ್ಯ ಸರ್ಕಾರ ಹೊರಡಿಸಿದ್ದ ಮಾರ್ಗಸೂಚಿಗೆ ಸಂಬಂಧಿಸಿದಂತೆ ಮಧ್ಯಪ್ರವೇಶಿಸಲು ನಿರಾಕರಿಸಿರುವ ಹೈಕೋರ್ಟ್, 'ನ್ಯಾಯಾಲಯಗಳು ಕ್ರೀಡೆಗಳಲ್ಲಿನ ತೀರ್ಪುಗಾರರಂತೆ ಇರಬೇಕೆ ವಿನಃ ರೆಫರಿಗಳಂತೆ ಅಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ಈ ಸಂಬಂಧ ರೋಲರ್ ಸ್ಕೇಟಿಂಗ್ ಅಥ್ಲೀಟ್ ವಿ.ವರ್ಷಿತ್ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿರುವ ನ್ಯಾಯ ಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಸರ್ಕಾರದ ನೀತಿಗಳು ಸಂವಿಧಾನ ಬಾಹಿರ ಹಾಗೂ ದೋಷಪೂರಿತವಾಗಿದ್ದಲ್ಲಿ ಮಾತ್ರವೇ ನ್ಯಾಯಾಲಯದ ಪರಿಶೀಲನೆಗೆ ಒಳಪಡುತ್ತವೆ' ಎಂದು ಹೇಳಿದೆ.

'ಸರ್ಕಾರ ಹಾಗೂ ಶಾಸನಬದ್ಧ ಪ್ರಾಧಿಕಾರಗಳು ಎಚ್ಚರಿಕೆಯಿಂದ ರಚಿಸುವ ನೀತಿಗಳ ಬಗ್ಗೆ ನ್ಯಾಯಾಲಯಗಳು ಸದಾ ಸಂಯಮ ಪ್ರದರ್ಶಿಸಬೇಕು. ಸರ್ಕಾರದ ನೀತಿಗಳು ಸಂವಿಧಾನದ 14ನೇ ವಿಧಿಯ ಅಡಿಯಲ್ಲಿನ ಸಮಾನತೆ ಉಲ್ಲಂಘನೆ, ಅಸಮಂಜಸ ಹಾಗೂ ದೋಷದಿಂದ ಕೂಡಿದ್ದರೆ ಮಾತ್ರವೇ ಕೋರ್ಟ್ ಮಧ್ಯಪ್ರವೇಶಿಸಬಹುದು' ಎಂದು ನ್ಯಾಯಪೀಠ ತಿಳಿಸಿದೆ.

ಪ್ರಕರಣವೇನು?: 'ಏಕಲವ್ಯ ಪ್ರಶಸ್ತಿ' ನೀಡಲು ರಾಜ್ಯ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ ಕಾಲಕಾಲಕ್ಕೆ ಮಾರ್ಗಸೂಚಿಗಳನ್ನು ನಿಗದಿಪಡಿಸುತ್ತದೆ. ಇದರನ್ವಯ 2015ರ ಆಗಸ್ಟ್ 24ರಂದು ಏಕಲವ್ಯ ಪ್ರಶಸ್ತಿಗೆ ಅರ್ಹತೆ ಹೊಂದಲು ಮಾರ್ಗಸೂಚಿಗಳನ್ನು ಹೊರಡಿಸಲಾಗಿತ್ತು. ಅರ್ಜಿದಾರರು ಈ ಮಾರ್ಗಸೂಚಿಗಳನ್ನು ಪ್ರಶ್ನಿಸಿದ್ದರು. ಅರ್ಜಿದಾರರು ರೋಲರ್ ಸ್ಕೇಟಿಂಗ್ ಪಟುವಾಗಿದ್ದು, ರಾಷ್ಟ್ರೀಯ ಕಿರಿಯ, ಹಿರಿಯ ಹಾಗೂ ಏಷ್ಯನ್ ಚಾಂಪಿಯನ್ ಶಿಪ್‌ಗಳಲ್ಲಿ ಭಾಗವಹಿಸಿದ್ದು, ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕ ವಿಜೇತರೂ ಹೌದು.